ಸೋಮವಾರ, ಮಾರ್ಚ್ 5, 2018 | ದಾವಣಗೆರೆ | ₹ 5.00 | ಸಂಪುಟ 17 | ಸಂಚಿಕೆ 64 | ಪುಟ 20 + 2 + 4
www.prajavani.net
/prajavani.net @prajavani /+prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಟ ಅಂಕ
ಫುಟ್‌ಬಾಲ್ ಲೋಕದ ಧ್ರುವತಾರೆಗಳು...



ನೇಕಾರ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯ 5
ರಾಜ್ಯಸಭೆ ಚುನಾವಣೆ: ಗರಿಗೆದರಿದ ಚಟುವಟಿಕೆ 4
ವಿವಾದಕ್ಕೆ ಸುಪ್ರೀಕೋರ್ಟ್ ತೆರೆ
ನಿವೃತ್ತರೂ ನ್ಯಾಯಮೂರ್ತಿಗಳಾಗಬಹುದು 7

## ಕರ್ನಾಟಕ ಪ್ರಜಾ ಮತ 2018 ಜನತಂತ್ರದ ಹಬ್ಬ

ಮತ್ತೊಂದು ವಿಧಾನಸಭಾ ಚುನಾವಣೆಗೆ ಅಣಿಯಾಗುತ್ತಿರುವ ಈ ಹೊತ್ತಿನಲ್ಲಿ, ಶಾಸಕರನ್ನು ಅವರ ಮತದಾರರಿಂದ ಮೌಲ್ಯಮಾಪನ ಮಾಡಿಸುವ ಪ್ರಯತ್ನವೊಂದನ್ನು 'ಪ್ರಜಾವಾಣಿ' ಮಾಡುತ್ತಿದೆ. ಇದಕ್ಕಾಗಿ, ಆಡಳಿತ ವ್ಯವಸ್ಥೆಯಲ್ಲಿ ಉತ್ತರದಾಯಿತ್ವವನ್ನು ಉತ್ತೇಜಿಸುವುದಕ್ಕಾಗಿ ಕೆಲಸ ಮಾಡುತ್ತಿರುವ 'ದಕ್ಷ್' ಜೊತೆ ಕೈ ಜೋಡಿಸಿದೆ. ಈ ಪ್ರಯತ್ನದ ಮೊದಲ ಭಾಗ ಇಂದು ಪ್ರಕಟವಾಗುತ್ತಿದೆ. ಎಲ್ಲಾ **224** ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದ ಈ ಸಮೀಕ್ಷೆಯಲ್ಲಿ **13** ಸಾವಿರಕ್ಕೂ ಹೆಚ್ಚು ಮತದಾರರು ಪಾಲ್ಗೊಂಡಿದ್ದರು. ಕುಡಿಯುವ ನೀರು, ಶಾಲೆಗಳು, ವಿದ್ಯುತ್, ರಸ್ತೆ ಮತ್ತು ಶಾಸಕರು ಎಷ್ಟು ಸುಲಭವಾಗಿ ಕೈಗೆ ಸಿಗುತ್ತಾರೆ ಎಂಬ ಪ್ರಮುಖ ಮಾನದಂಡಗಳೂ ಸೇರಿದಂತೆ ಮತದಾರರ ಮೇಲೆ ಪರಿಣಾಮ ಬೀರಬಹುದಾದ **25** ಅಂಶಗಳನ್ನು ಸಮೀಕ್ಷೆ ಒಳಗೊಂಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಸೇರಿದಂತೆ ಆಡಳಿತ ಮತ್ತು ವಿರೋಧ ಪಕ್ಷಗಳಲ್ಲಿ ಪ್ರಮುಖ ಸ್ಥಾನಗಳನ್ನು ಹೊಂದಿರುವ ಆರು ರಾಜಕಾರಣಿಗಳು ಹಾಗೂ ಅತ್ಯುತ್ತಮ ಸಾಧನೆ ದಾಖಲಿಸಿದ ಐವರು ಮತ್ತು ಅತಿ ಕಳಪೆ ಸಾಧನೆ ಮಾಡಿದ ಐವರು ಶಾಸಕರ ಕುರಿತ ಮಾಹಿತಿ ಇಂದಿನ ಆವೃತ್ತಿಯಲ್ಲಿದೆ. ಈ ಸರಣಿ ಮುಂದುವರಿಯಲಿದ್ದು, ರಾಜ್ಯದ ಮತದಾರರು ನಡೆಸಿದ ಶಾಸಕರ ಮೌಲ್ಯಮಾಪನ 'ಪ್ರಜಾವಾಣಿ'ಯ ಪುಟಗಳಲ್ಲಿ ಅನಾವರಣಗೊಳ್ಳಲಿದೆ.



ಬಿಜೆಪಿ ತಂತ್ರಕ್ಕೆ ಕಾಂಗ್ರೆಸ್ ಪ್ರತಿತಂತ್ರವೇನು? ಕಾಂಗ್ರೆಸ್ ಮುಖಂಡ ಕೆ.ಸಿ. ವೇಣುಗೋಪಾಲ್ ಸಂದರ್ಶನ

● ಪ್ರಶಸ್ತಿ ಪತ್ರ ವಾಪಸ್‌ಗೆ ಸಿದ್ಧರಾಗಿ- ಹೆಗಡೆ
● 'ಅಧಿಕಾರಕ್ಕಾಗಿ ಢೋಂಗಿ ಯಾತ್ರೆ' 10

### ಸಿದ್ದರಾಮಯ್ಯ — ಕಾಂಗ್ರೆಸ್

ಜಿಲ್ಲೆ: ಮೈಸೂರು
ಕ್ಷೇತ್ರ: ವರುಣಾ



7.07/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆ | 8.2 |
| ಕುಡಿಯುವ ನೀರು | 9 |
| ವಿದ್ಯುತ್ | 7.9 |
| ರಸ್ತೆ | 7.9 |
| ಶಾಸಕರು ಕೈಗೆ ಸಿಗುತ್ತಾರಾ? | 7.3 |

### ಜಗದೀಶ ಶೆಟ್ಟರ್ — ಬಿಜೆಪಿ

ಜಿಲ್ಲೆ: ಧಾರವಾಡ
ಕ್ಷೇತ್ರ: ಹು-ಧಾ ಕೇಂದ್ರ



8.62/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆ | 10 |
| ಕುಡಿಯುವ ನೀರು | 9.9 |
| ವಿದ್ಯುತ್ | 10 |
| ರಸ್ತೆ | 7.4 |
| ಶಾಸಕರು ಕೈಗೆ ಸಿಗುತ್ತಾರಾ? | 10 |

### ಎಚ್.ಡಿ. ಕುಮಾರಸ್ವಾಮಿ — ಜೆಡಿಎಸ್

ಜಿಲ್ಲೆ: ರಾಮನಗರ
ಕ್ಷೇತ್ರ: ರಾಮನಗರ



7.22/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆ | 7 |
| ಕುಡಿಯುವ ನೀರು | 7.1 |
| ವಿದ್ಯುತ್ | 7 |
| ರಸ್ತೆ | 7.2 |
| ಶಾಸಕರು ಕೈಗೆ ಸಿಗುತ್ತಾರಾ? | 7.8 |

### ಪಕ್ಷವಾರು ಗಳಿಸಿದ ಅಂಕ




ಮೂಲಸೌಕರ್ಯ ಕಲ್ಪಿಸುವುದು, ಶಾಸಕರ ಲಭ್ಯತೆ ಸೇರಿ ಕ್ಷೇತ್ರಗಳಲ್ಲಿ 10 ಅಂಕಗಳಿಗೆ ಮೂರು ಪ್ರಮುಖ ರಾಜಕೀಯ ಪಕ್ಷಗಳು ಪಡೆದ ಅಂಕ

ಬಿಜೆಪಿ ಬೆಂಬಲ: ರೀಜನಲ್ ಡೆಮಾಕ್ರಟಿಕ್ ಅಲಯನ್ಸ್ ಸರ್ಕಾರ ರಚನೆಗೆ ಸಜ್ಜು

# 'ಕೈ' ಜಾರಿದ ಮೇಘಾಲಯ

ಪ್ರಜಾವಾಣಿ ವಾರ್ತೆ

**ನವದೆಹಲಿ:** ನ್ಯಾಷನಲ್ ಪೀಪಲ್ಸ್ ಪಾರ್ಟಿಯ (ಎನ್‌ಪಿಪಿ) ಮುಖ್ಯಸ್ಥ ಕಾನ್ರಾಡ್ ಸಂಗ್ಮಾ ಮೇಘಾಲಯ ಮುಖ್ಯಮಂತ್ರಿಯಾಗುವುದು ಖಚಿತವಾಗಿದೆ.

ತಮಗೆ 34 ಶಾಸಕರ ಬೆಂಬಲ ಇದೆ ಎಂದು ಹೇಳಿಕೊಂಡಿರುವ ಕಾನ್ರಾಡ್ ಅವರು ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಮಂಗಳವಾರ ಅವರು ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

60 ಸದಸ್ಯರ ವಿಧಾನಸಭೆಯಲ್ಲಿ 21 ಸ್ಥಾನಗಳನ್ನು ಗೆದ್ದ ಕಾಂಗ್ರೆಸ್ ಅತ್ಯಂತ ದೊಡ್ಡ ಪಕ್ಷವಾಗಿದೆ. ಸರ್ಕಾರ ರಚನೆಗೆ ಕಾಂಗ್ರೆಸ್ ಹಕ್ಕನ್ನೂ ಮಂಡಿಸಿದೆ. ಆದರೆ ಬಹುಮತಕ್ಕೆ ಬೇಕಾದಷ್ಟು ಶಾಸಕರ ಬೆಂಬಲ ಪಡೆಯಲು ಆ ಪಕ್ಷಕ್ಕೆ ಸಾಧ್ಯವಾಗಿಲ್ಲ. ಹಾಗಾಗಿ ಮೇಘಾಲಯದಲ್ಲಿ ಸರ್ಕಾರ ರಚಿಸುವ ಕಾಂಗ್ರೆಸ್ ಬಯಕೆ ಈಡೇರುವುದು ಕಷ್ಟ.

ಎನ್‌ಪಿಪಿ 19 ಸ್ಥಾನಗಳನ್ನು ಗೆದ್ದುಕೊಂಡಿದೆ. ಪ್ರಾದೇಶಿಕ ಪಕ್ಷಗಳಾದ ಯುನೈಟೆಡ್ ಡೆಮಾಕ್ರಟಿಕ್ ಪಾರ್ಟಿ (ಯುಡಿಪಿ), ಹಿಲ್ ಸ್ಟೇಟ್ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಎಚ್‌ಎಸ್‌ಪಿಡಿಪಿ) ಕ್ರಮವಾಗಿ ಆರು ಮತ್ತು ಎರಡು ಸ್ಥಾನಗಳನ್ನು ಪಡೆದಿವೆ. ಬಿಜೆಪಿ ಎರಡು ಕ್ಷೇತ್ರಗಳಲ್ಲಿ ಗೆದ್ದಿದೆ.

ಈ ಎಲ್ಲ ಪಕ್ಷಗಳು ಜತೆಯಾಗಿ ರೀಜನಲ್ ಡೆಮಾಕ್ರಟಿಕ್ ಅಲಯನ್ಸ್ (ಆರ್‌ಡಿಎ) ಎಂಬ ಮೈತ್ರಿಕೂಟವನ್ನು ರಚಿಸಿಕೊಂಡು ಸರ್ಕಾರ ರಚನೆಯ ಹಕ್ಕು ಮಂಡಿಸಿವೆ. ಈ ಮೈತ್ರಿಕೂಟಕ್ಕೆ 29 ಶಾಸಕರ ಬೆಂಬಲ ಇದೆ.

ಮೈತ್ರಿಕೂಟ ರಚನೆಯಾಗುವುದಕ್ಕೆ ಮೊದಲು ಬೆಂಬಲ ಕ್ರೋಡೀಕರಣಕ್ಕಾಗಿ ಭಾರಿ ಚಟುವಟಿಕೆ ನಡೆಯಿತು. ಕಾಂಗ್ರೆಸ್‌ನ ಮುಕುಲ್ ಸಂಗ್ಮಾ ಅವರು ಯುಡಿಪಿ ಮುಖ್ಯಸ್ಥ ಡೊಂಕುಪಾರ್ ರಾಯ್ ಅವರನ್ನು ಭೇಟಿಯಾಗಿ ಬೆಂಬಲ ಕೋರಿದರು. ಆದರೆ 'ಈ ಪ್ರಸ್ತಾವವನ್ನು ನಾವು ತಿರಸ್ಕರಿಸಿದ್ದೇವೆ. ಕಾಂಗ್ರೆಸ್ಸೇತರ ಸರ್ಕಾರಕ್ಕೆ ಬೆಂಬಲ ಕೊಡಲು ನಿರ್ಧರಿಸಿದ್ದೇವೆ' ಎಂದು ರಾಯ್ ತಿಳಿಸಿದ್ದಾರೆ.

**ಎರಡನೇ ಬಾರಿ ಹಿನ್ನಡೆ:** ಗೋವಾದಲ್ಲಿ ಕಳೆದ ವರ್ಷ ನಡೆದ ಚುನಾವಣೆಯಲ್ಲಿಯೂ ಕಾಂಗ್ರೆಸ್ ಅತ್ಯಂತ ದೊಡ್ಡ ಪಕ್ಷವಾಗಿ ಮೂಡಿಬಂದಿತ್ತು. ಆದರೆ ತ್ವರಿತವಾಗಿ ಬೆಂಬಲ ಒಟ್ಟಾಗಿಸಲು ಪಕ್ಷ ವಿಫಲವಾಗಿತ್ತು. ಬಿರುಸಿನ ಕಾರ್ಯಾಚರಣೆ ನಡೆಸಿದ್ದ ಬಿಜೆಪಿ ಗೋವಾದಲ್ಲಿ ಸರ್ಕಾರ ರಚಿಸಿತ್ತು. ಮೇಘಾಲಯದಲ್ಲಿಯೂ ಅದು ಪುನರಾವರ್ತನೆಯಾಗಿದೆ. ಸರ್ಕಾರ ರಚಿಸಲು ಮುಖ್ಯಮಂತ್ರಿ ಮುಕುಲ್ ಸಂಗ್ಮಾ ಹಕ್ಕು ಮಂಡಿಸಿದರಾದರೂ ಬೆಂಬಲ ಒಟ್ಟಾಗಿಸಲು ಸಾಧ್ಯವಾಗಲಿಲ್ಲ. ಬಿಜೆಪಿ ಬೆಂಬಲದ ಪ್ರಾದೇಶಿಕ ಪಕ್ಷಗಳು ಮೈತ್ರಿಕೂಟ ರಚಿಸಿಕೊಂಡು ಸರ್ಕಾರ ರಚನೆಗೆ ಮುಂದಾಗಿವೆ.




## ಮಾಣಿಕ್ ಸರ್ಕಾರ್ ರಾಜೀನಾಮೆ



**ಅಗರ್ತಲಾ (ಪಿಟಿಐ):** ನೂತನ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡುವ ಸಲುವಾಗಿ ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರು ತಮ್ಮ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದರು.

ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಜ್ಯಪಾಲ ತಥಾಗತ ರಾಯ್ ಅವರಿಗೆ ಸಲ್ಲಿಸಿದರು.

'ರಾಜ್ಯದ ಜನರ ಬೆಂಬಲವಿಲ್ಲದೆ ಕಳೆದ 25 ವರ್ಷಗಳಿಂದ ನಾವು ಇಲ್ಲಿ ಆಡಳಿತ ನಡೆಸಲು ಸಾಧ್ಯವಿರಲಿಲ್ಲ. ಜನರ ಸಹಕಾರಕ್ಕೆ ನಾವು ಕೃತಜ್ಞರಾಗಿರುತ್ತೇವೆ' ಎಂದು ತಿಳಿಸಿದರು.

ರಾಜ್ಯದ 60 ವಿಧಾನಸಭಾ ಕ್ಷೇತ್ರಗಳಲ್ಲಿ 59ಕ್ಕೆ ಚುನಾವಣೆ ನಡೆದಿತ್ತು. ಅದರಲ್ಲಿ ಬಿಜೆಪಿ ಮತ್ತು ಐಪಿಎಫ್‌ಟಿ ಮೈತ್ರಿಕೂಟವು 43 ಸ್ಥಾನಗಳನ್ನು ಗೆದ್ದಿದೆ. ಎರಡೂ ಪಕ್ಷದ ಶಾಸಕರು ತಮ್ಮ ಶಾಸಕಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡುವ ಸಲುವಾಗಿ ಮಂಗಳವಾರ ಸಭೆ ಸೇರಲಿದ್ದಾರೆ.

## ನಾಗಾಲ್ಯಾಂಡ್ ಮೈತ್ರಿ ಸರ್ಕಾರ

**ಕೋಹಿಮಾ (ಪಿಟಿಐ):** ನಾಗಾಲ್ಯಾಂಡ್‌ನಲ್ಲಿ ನ್ಯಾಷನಲಿಸ್ಟ್ ಡೆಮಾಕ್ರಟಿಕ್ ಪ್ರೊಗ್ರೆಸ್ಸಿವ್ ಪಾರ್ಟಿ (ಎನ್‌ಡಿಪಿಪಿ) ಮತ್ತು ಬಿಜೆಪಿ ಮೈತ್ರಿಕೂಟವು ಸರ್ಕಾರ ರಚಿಸುವ ಸಾಧ್ಯತೆ ಹೆಚ್ಚಾಗಿದೆ.

ಎನ್‌ಡಿಪಿಪಿ ಮುಖ್ಯಸ್ಥ ನೀಫಿಯು ರಿಯೊ ಅವರು ತಮ್ಮ ಬೆಂಬಲಿಗರೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಯ ಹಕ್ಕು ಮಂಡಿಸಿದರು. ಬೆಂಬಲಿಗ ಶಾಸಕರ ಸಹಿ ಮಾಡಿಸಿಕೊಂಡು ಸೋಮವಾರ ಭೇಟಿ ಮಾಡುವಂತೆ ರಿಯೊ ಅವರಿಗೆ ರಾಜ್ಯಪಾಲರು ತಿಳಿಸಿದ್ದಾರೆ.

ತಮಗೆ 32 ಶಾಸಕರ ಬೆಂಬಲವಿದೆ ಎಂದು ರಿಯೊ ಹೇಳಿದ್ದರು. 60 ಕ್ಷೇತ್ರಗಳಲ್ಲಿ ಎನ್‌ಡಿಪಿಪಿ ಮತ್ತು ಬಿಜೆಪಿ ಮೈತ್ರಿಕೂಟವು 28 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಎರಡು ಸ್ಥಾನ ಗೆದ್ದಿರುವ ಎನ್‌ಪಿಪಿ ಮೈತ್ರಿಕೂಟಕ್ಕೆ ಬೆಂಬಲ ನೀಡಿದೆ.

## 'ಜಾತಿಗೊಂದು ಮಠಕಟ್ಟಿ ಜಾತೀಯತೆ ಮಾಡಿಲ್ಲ'

**ದಾವಣಗೆರೆ:** 'ಸರ್ವ ಜನಾಂಗಗಳೂ ಅಭಿವೃದ್ಧಿಹೊಂದಬೇಕು ಎಂಬ ಉದ್ದೇಶದಿಂದ ಜಾತಿಗೊಬ್ಬ ಸಮರ್ಥ ವ್ಯಕ್ತಿಯನ್ನು ಆರಿಸಿಕೊಂಡು ಸಮಾಜ ಸೇವಾ ದೀಕ್ಷೆ ನೀಡಲಾಗಿದೆ. ಇದರಲ್ಲಿ ಜಾತೀಯತೆ ಮಾಡುವ ಸಂಕುಚಿತ ಮನಸ್ಥಿತಿ ಅಡಗಿಲ್ಲ' ಎಂದು ಮುರುಘಾ ಶರಣರು ಹೇಳಿದರು.

ಶನಿವಾರ ಜಯದೇವ ಶ್ರೀಗಳ ಸ್ಮರಣೋತ್ಸವ ಸಮಾರಂಭದಲ್ಲಿ 'ಜಾತಿಗೊಂದು ಮಠ ಮಾಡಬೇಡಿ' ಎಂಬ ಸಂಸದ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ಶರಣರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿದರು.

ಶರಣರ ಮಾತನ್ನು ಎಲ್ಲ ಜನಾಂಗದವರೂ ಪಾಲಿಸುತ್ತಾರೆ ಎನ್ನಲಾಗುವುದಿಲ್ಲ. ಹಾಗಾಗಿ, ಮಾದಿಗ, ಛಲವಾದಿ, ಮಡಿವಾಳ, ಯಾದವ, ರೆಡ್ಡಿ, ಹೀಗೆ ಅವರವರ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ದೀಕ್ಷೆ ನೀಡಲಾಗಿದೆ. ಜಾತಿಗೊಂದು ಮಠದ ಪರಿಕಲ್ಪನೆಯಲ್ಲಿ ಕಾಳಜಿ ಇದೆಯೇ ಹೊರತು ಅನ್ಯ ಉದ್ದೇಶವಿಲ್ಲ ಎಂದು ಸ್ಪಷ್ಟಪಡಿಸಿದರು.

'20 ವರ್ಷಗಳ ಹಿಂದೆ ಹೇಳಿದ್ದನ್ನು ಖರ್ಗೆ ಪುನರುಚ್ಚರಿಸಿದ್ದಾರೆ. ನಮ್ಮ ನಿಲುವು ಸ್ಪಷ್ಟವಾಗಿದೆ' ಎಂದರು.

ವಿಧಾನಸೌಧ ವಜ್ರ ಮಹೋತ್ಸವ: ₹ 9.12 ಕೋಟಿ ವೆಚ್ಚ

# ವಿವಿಐಪಿ ಒಬ್ಬರ ಊಟಕ್ಕೆ ₹1,737 ಬಿಲ್ ಪಾವತಿ!

● ರಾಜೇಶ್ ರೈ ಚಟ್ಲ

**ಬೆಂಗಳೂರು:** ವಿಧಾನಸೌಧದ ವಜ್ರ ಮಹೋತ್ಸವದ ದಿನ ಗಣ್ಯಾತಿಗಣ್ಯರೊಬ್ಬರ (ವಿವಿಐಪಿ) ಭೋಜನಕ್ಕೆ ₹1,737, ಗಣ್ಯರಿಗೆ (ವಿಐಪಿ) ₹1,310, ಸಚಿವಾಲಯದ ಸಿಬ್ಬಂದಿಗೆ ₹ 810 ಪಾವತಿ ಮಾಡಲಾಗಿದೆ!

2017ರ ಅಕ್ಟೋಬರ್ 25ರಂದು ನಡೆದ ಮಹೋತ್ಸವದ ಖರ್ಚು ವೆಚ್ಚಗಳಿಗೆ ಸರ್ಕಾರದ ಬೊಕ್ಕಸದಿಂದ ಈಗಾಗಲೇ ₹ 9,12 ಕೋಟಿ ಪಾವತಿಸಲಾಗಿದೆ. ಇನ್ನೂ ಕೆಲವು ಬಿಲ್‌ಗಳ ಪಾವತಿ ಬಾಕಿ ಇದೆ. ಈವರೆಗೆ ಪಾವತಿಸಿದ ಬಿಲ್‌ಗಳ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ವಜ್ರ ಮಹೋತ್ಸವವನ್ನು ಎರಡು ದಿನ ಆಯೋಜಿಸಲು ವಿಧಾನಸಭಾ ಸಚಿವಾಲಯ ನಿರ್ಧರಿಸಿ, ₹26.87 ಕೋಟಿ ಅಂದಾಜು ವೆಚ್ಚದ ಪ್ರಸ್ತಾವವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿತ್ತು. ಆದರೆ, ದುಬಾರಿ ವೆಚ್ಚಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಒಂದು ದಿನಕ್ಕೆ ಕಾರ್ಯಕ್ರಮ ಸೀಮಿತಗೊಳಿಸಿ ವೆಚ್ಚವನ್ನು ₹10 ಕೋಟಿಗೆ ಮಿತಿಗೊಳಿಸಿದ್ದರು.

ಮುಖ್ಯಮಂತ್ರಿ ಸೂಚನೆಯಂತೆ ₹10 ಕೋಟಿ ವೆಚ್ಚದಲ್ಲಿ ಕಾರ್ಯಕ್ರಮ ಆಯೋಜಿಸಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿತ್ತು. ವಿಧಾನಸೌಧದ ಹೂವಿನ ಅಲಂಕಾರಕ್ಕೆ ₹ 30 ಲಕ್ಷ, ಬ್ರ್ಯಾಂಡಿಂಗ್, ಪ್ರಚಾರ ಮತ್ತು ಮುದ್ರಣಕ್ಕೆ ₹1 ಕೋಟಿ, ಸಿನಿಮಾ ಪ್ರದರ್ಶನಕ್ಕೆ ₹2 ಕೋಟಿ, ಸ್ವಚ್ಛತೆಗೆ ₹15 ಲಕ್ಷ, ವಿಡಿಯೊ ಪ್ರಚಾರ ಮತ್ತು ಛಾಯಾಚಿತ್ರ ಪ್ರದರ್ಶನಕ್ಕೆ ₹7.5 ಲಕ್ಷ, ಜನಸಾಮಾನ್ಯರ ಊಟೋಪಚಾರಕ್ಕೆ ₹50 ಲಕ್ಷ ವೆಚ್ಚವಾಗಿದೆ.

4ನೇ ಪುಟ ನೋಡಿ

## 'ಪಾವತಿಯಲ್ಲಿ ಸಂದೇಹ'

'ವಜ್ರ ಮಹೋತ್ಸವದ ವಿವಿಧ ಕಾರ್ಯಕ್ರಮಗಳನ್ನು ವಹಿಸುವ ಸಂದರ್ಭದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಿಂದ (ಕೆಟಿಟಿಪಿ) ವಿನಾಯಿತಿ ನೀಡಲಾಗಿದೆ. ಹೀಗಾಗಿ, ಯಾವುದೇ ಟೆಂಡರ್ ಕರೆಯದೆ ವಿವಿಧ ಸಂಸ್ಥೆಗಳಿಗೆ ನೇರವಾಗಿ ಗುತ್ತಿಗೆ ನೀಡಲಾಗಿದೆ. ಅನೇಕರಿಗೆ ಪಾವತಿಸಿರುವ ಭಾರಿ ಮೊತ್ತವು ಸಂದೇಹಗಳಿಗೆ ಕಾರಣವಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ಬಿ.ಎಸ್. ಗೌಡ ಆರೋಪಿಸಿದರು.

## ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಹದಾಯಿ ನದಿ ನೀರು ಹಂಚಿಕೆ ವಿವಾದ

# ಗೋವಾ ಬಿಜೆಪಿಗೆ ಶಾ ಮೇಲೆ ವಿಶ್ವಾಸ

**ಪಣಜಿ (ಪಿಟಿಐ):** ಕರ್ನಾಟಕ ಮತ್ತು ಗೋವಾ ನಡುವಣ ಮಹದಾಯಿ ನದಿ ನೀರು ಹಂಚಿಕೆ ವಿವಾದವನ್ನು ಬಿಜೆಪಿ ಅಧ್ಯಕ್ಷ ಅಮಿತ್ ಶಾ ಪರಿಹರಿಸಬಹುದು ಎಂಬ ವಿಶ್ವಾಸವನ್ನು ಗೋವಾ ಬಿಜೆಪಿ ವ್ಯಕ್ತಪಡಿಸಿದೆ.

ವಿವಾದದ ಬಗ್ಗೆ ಮಹದಾಯಿ ನೀರು ಹಂಚಿಕೆ ವಿವಾದ ನ್ಯಾಯಮಂಡಳಿಯಲ್ಲಿ ವಿಚಾರಣೆ ನಡೆಯುತ್ತಿದೆ.

ಈ ವಿವಾದಕ್ಕೆ ಶೀಘ್ರವೇ ಪರಿಹಾರ ದೊರೆಯಲಿದೆ. ಶಾ ಅವರು ಸಮಸ್ಯೆ ಬಗೆಹರಿಸುವ ಸಂಪೂರ್ಣ ವಿಶ್ವಾಸ ಇದೆ' ಎಂದು ಗೋವಾ ಬಿಜೆಪಿ ಅಧ್ಯಕ್ಷ ವಿನಯ್ ತೆಂಡುಲ್ಕರ್ ಹೇಳಿದ್ದಾರೆ.

'ನಮಗೆ ನ್ಯಾಯಮಂಡಳಿಯಲ್ಲಿಯೂ ವಿಶ್ವಾಸವಿದೆ. ನ್ಯಾಯಮಂಡಳಿಯ ಆದೇಶವನ್ನು ಎದುರು ನೋಡುತ್ತಿದ್ದೇವೆ' ಎಂದೂ ಅವರು ತಿಳಿಸಿದ್ದಾರೆ.

ಸೌಹಾರ್ದಯುತ ಪರಿಹಾರಕ್ಕೆ ಗೋವಾ ಸಿದ್ಧವಿದೆ. ಆದರೆ, ಮಹದಾಯಿ ನೀರನ್ನು ಬೇರೆಡೆಗೆ ಹರಿಸುವುದಕ್ಕೆ ವಿರೋಧ ಇದೆ ಎಂದು ಹೇಳಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಮಹದಾಯಿ ನೀರು ಹಂಚಿಕೆ ವಿವಾದವನ್ನು ಬಗೆಹರಿಸುವುದಾಗಿ ಕರ್ನಾಟಕದಲ್ಲಿನ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಶಾ ಹೇಳಿದ್ದರು.

ಕರ್ನಾಟಕಕ್ಕೆ ಕುಡಿಯುವ ನೀರು ನೀಡುವುದಕ್ಕೆ ಅಭ್ಯಂತರ ಇಲ್ಲ ಮತ್ತು ಮಾತುಕತೆಗೂ ಸಿದ್ಧ ಎಂದು ಗೋವಾ ಮುಖ್ಯಮಂತ್ರಿ ಮನೋಹರ ಪರ್ರೀಕರ್ ಹಿಂದೊಮ್ಮೆ ಹೇಳಿದ್ದರು. ಆದರೆ, ಯಾವುದೇ ಕಾರಣಕ್ಕೂ ನೀರು ಹರಿಸಲು ಅವಕಾಶ ಕೊಡುವುದಿಲ್ಲ ಎಂದು ಬಿಜೆಪಿಯ ಮಿತ್ರ ಪಕ್ಷ ಗೋವಾ ಫಾರ್ವರ್ಡ್ ಪಾರ್ಟಿ ಪ್ರತಿಕ್ರಿಯೆ ನೀಡಿತ್ತು.

ಮಹದಾಯಿಯ ಉಪನದಿಯ ನೀರನ್ನು ಬೇರೆಡೆಗೆ ಹರಿಸುವುದಕ್ಕಾಗಿ ಕರ್ನಾಟಕ ನಿರ್ಮಿಸುತ್ತಿದ್ದ ಕಾಲುವೆ ಕಾಮಗಾರಿಗೆ ಸುಪ್ರೀಂ ಕೋರ್ಟ್ ಕಳೆದ ವರ್ಷ ತಡೆ ನೀಡಿತ್ತು. ಆದರೆ, ಈ ಕಾಮಗಾರಿ ಮತ್ತೆ ಆರಂಭಗೊಂಡಿದೆ ಎಂಬುದನ್ನು ತೋರಿಸುವ ಸಾಕ್ಷ್ಯ ತನ್ನಲ್ಲಿದೆ ಎಂದು ಗೋವಾ ಇತ್ತೀಚೆಗೆ ಹೇಳಿದೆ.

ದೇಶದ 7 ನಗರಗಳಲ್ಲಿ ಮಾರಾಟವಾಗದೆ ಉಳಿದ 4.40 ಲಕ್ಷ ಮನೆ!

# ಫ್ಲ್ಯಾಟ್‌ಗಳನ್ನು ಕೊಳ್ಳುವವರಿಲ್ಲ

**ನವದೆಹಲಿ (ಪಿಟಿಐ):** ದೇಶದ ಏಳು ಪ್ರಮುಖ ನಗರಗಳಲ್ಲಿ 2017ರ ಅಂತ್ಯದ ವೇಳೆಗೆ 4.40 ಲಕ್ಷ ಮನೆಗಳು (ಫ್ಲ್ಯಾಟ್) ಮಾರಾಟವಾಗದೆ ಉಳಿದಿವೆ. ಬೆಂಗಳೂರು ನಗರದಲ್ಲಿ ಸುಮಾರು 70 ಸಾವಿರ ಮನೆಗಳು ಖಾಲಿ ಬಿದ್ದಿವೆ.

4.40 ಲಕ್ಷ ಮನೆಗಳ ಪೈಕಿ 34,700 ಮನೆಗಳು ತಕ್ಷಣ ವಾಸಕ್ಕೆ (ರೆಡಿ ಟು ಮೂವ್ ಇನ್) ಸಜ್ಜಾಗಿವೆ ಎಂಬ ಮಾಹಿತಿ ಗ್ಲೋಬಲ್ ಪ್ರಾಪರ್ಟಿ ಕನ್ಸಲ್ಟೆಂಟ್ ಸಂಸ್ಥೆ ಜೋನ್ಸ್ ಲಾಂಗ್ ಲಾಸಲ್ಲೆ ಇಂಡಿಯಾ (ಜೆಎಲ್‌ಎಲ್) ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ.

ದೆಹಲಿ ಹಾಗೂ ಸುತ್ತಮುತ್ತ ಅತಿ ಹೆಚ್ಚು, ಅಂದರೆ, 1.50 ಲಕ್ಷ ಫ್ಲ್ಯಾಟ್ ಖಾಲಿ ಉಳಿದಿವೆ. ಚೆನ್ನೈ, ಮುಂಬೈ, ಬೆಂಗಳೂರು, ಪುಣೆ, ಹೈದರಾಬಾದ್, ಕೋಲ್ಕತ್ತದಲ್ಲೂ ಸಾವಿರಾರು ಮನೆಗಳು ಗ್ರಾಹಕರಿಗಾಗಿ ಕಾಯ್ದು ಕುಳಿತಿವೆ.

ಚೆನ್ನೈನಲ್ಲಿ ವಾಸಕ್ಕೆ ಸಿದ್ಧವಾದ ಶೇ 20ರಷ್ಟು ಮತ್ತು ನೊಯಿಡಾ ಹಾಗೂ ಗ್ರೇಟರ್ ನೊಯಿಡಾದಲ್ಲಿ ಶೇ 60ರಷ್ಟು ನಿರ್ಮಾಣ ಹಂತದ ಫ್ಲ್ಯಾಟ್‌ಗಳು ಮಾರಾಟವಾಗದೆ ಉಳಿದಿವೆ.

**ಹೊಸ ಯೋಜನೆಗಳಿಗೆ ಗ್ರಹಣ:** ಮನೆಗಳ ಮಾರಾಟ ವೇಗ ಕುಸಿದ ಕಾರಣ ಹೊಸ ಕಟ್ಟಡಗಳ ನಿರ್ಮಾಣ, ಯೋಜನೆಗಳಿಗೂ ಗ್ರಹಣ ಹಿಡಿದಿದೆ. ಮುಂದಿನ ಕೆಲವು ತ್ರೈಮಾಸಿಕದಲ್ಲೂ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ ಎಂದು ವರದಿ ಹೇಳಿದೆ.

ಆರ್ಥಿಕ ಹೊರೆಯಿಂದ ತಪ್ಪಿಸಿಕೊಳ್ಳಲು ಬಿಲ್ಡರ್‌ಗಳು, ಖರೀದಿದಾರರಿಗೆ ಆಕರ್ಷಕ ಕೊಡುಗೆ ಘೋಷಿಸುತ್ತಿದ್ದಾರೆ ಮತ್ತು ದರಗಳನ್ನು ಕಡಿತಗೊಳಿಸುತ್ತಿದ್ದಾರೆ. ಇಷ್ಟಾದರೂ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿಲ್ಲ.

ಗ್ರಾಹಕರು ನಿರ್ಮಾಣ ಹಂತದ ಮನೆಗಳಿಗಿಂತ ತಕ್ಷಣ ವಾಸಕ್ಕೆ ಯೋಗ್ಯವಾದ ಮನೆಗಳ ಖರೀದಿಗೆ ಆದ್ಯತೆ ನೀಡುತ್ತಿದ್ದಾರೆ ಎಂದು ವರದಿ ಹೇಳಿದೆ.

**ಹಲವು ಪೆಟ್ಟು:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿ ಮತ್ತು ನೋಟು ರದ್ದತಿಗಳು ರಿಯಲ್ ಎಸ್ಟೇಟ್ ವಲಯಕ್ಕೆ ಭಾರಿ ಪೆಟ್ಟು ನೀಡಿವೆ.

ಇದರೊಂದಿಗೆ ರಿಯಲ್ ಎಸ್ಟೇಟ್ ವಲಯದಲ್ಲಾದ ಕಾನೂನು ಬದಲಾವಣೆ, ಕಠಿಣ ನಿಯಮಾವಳಿ ಇಂದಿನ ಸ್ಥಿತಿಗೆ ಪ್ರಮುಖ ಕಾರಣವಾಗಿದೆ.

ದೇಶದ ವಸತಿ ಮಾರುಕಟ್ಟೆ ಕಾಯ್ದು ನೋಡುವ ತಂತ್ರ ಅನುಸರಿಸುತ್ತಿದೆ. ಇದರಿಂದಾಗಿ ರಿಯಲ್ ಎಸ್ಟೇಟ್ ವಲಯ ಪ್ರಗತಿ ಮಂದವಾಗಿದೆ ಎಂದು ಜೆಎಲ್‌ಎಲ್ ಸಂಸ್ಥೆಯ ದೇಶೀಯ ಮುಖ್ಯಸ್ಥ ರಮೇಶ್ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

### ಬಾಕಿ ಉಳಿದ ಫ್ಲ್ಯಾಟ್‌ಗಳು

| ನಗರ | ಫ್ಲ್ಯಾಟ್‌ಗಳು |
|---|---|
| ದೆಹಲಿ | 1.50 ಲಕ್ಷ |
| ಮುಂಬೈ | 86,000 |
| ಬೆಂಗಳೂರು | 70,000 |
| ಪುಣೆ | 36,000 |

**ಜೂನ್ ನಂತರ ರಿಯಲ್ ಎಸ್ಟೇಟ್ ವಲಯ ಸ್ಥಿರತೆ ಕಾಯ್ದುಕೊಳ್ಳಲಿದ್ದು, ವಸತಿ ಮಾರುಕಟ್ಟೆ ಚೇತರಿಸಿಕೊಳ್ಳುವ ಸಾಧ್ಯತೆ ಇದೆ**
**ರಮೇಶ್ ನಾಯರ್**
ಜೆಎಲ್‌ಎಲ್ ಇಂಡಿಯಾ ಮುಖ್ಯಸ್ಥ



## ಮೊದಲ ಐದು ಸ್ಥಾನ ಗಳಿಸಿದವರು

### ಪ್ರಮೋದ್ ಮಧ್ವರಾಜ್ — ಕಾಂಗ್ರೆಸ್
ಜಿಲ್ಲೆ: ಉಡುಪಿ
ಕ್ಷೇತ್ರ: ಉಡುಪಿ



9.08/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 9 |
| ಕುಡಿಯುವ ನೀರು | 9.06 |
| ವಿದ್ಯುತ್ | 9.11 |
| ರಸ್ತೆ | 9.2 |
| ಶಾಸಕರು ಕೈಗೆ ಸಿಗುತ್ತಾರಾ? | 9.17 |

### ಕೆ.ಗೋಪಾಲ ಪೂಜಾರಿ — ಕಾಂಗ್ರೆಸ್
ಜಿಲ್ಲೆ: ಉಡುಪಿ
ಕ್ಷೇತ್ರ: ಬೈಂದೂರು



9.01/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 9.04 |
| ಕುಡಿಯುವ ನೀರು | 9.04 |
| ವಿದ್ಯುತ್ | 8.98 |
| ರಸ್ತೆ | 8.98 |
| ಶಾಸಕರು ಕೈಗೆ ಸಿಗುತ್ತಾರಾ? | 8.98 |

### ಉಮಾಶ್ರೀ — ಕಾಂಗ್ರೆಸ್
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ತೇರದಾಳ



8.96/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 7.93 |
| ಕುಡಿಯುವ ನೀರು | 7.93 |
| ವಿದ್ಯುತ್ | 7.93 |
| ರಸ್ತೆ | 7.93 |
| ಶಾಸಕರು ಕೈಗೆ ಸಿಗುತ್ತಾರಾ? | 8 |

### ವಿನಯ ಕುಲಕರ್ಣಿ — ಕಾಂಗ್ರೆಸ್
ಜಿಲ್ಲೆ: ಧಾರವಾಡ
ಕ್ಷೇತ್ರ: ಧಾರವಾಡ



8.84/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 10 |
| ಕುಡಿಯುವ ನೀರು | 9.47 |
| ವಿದ್ಯುತ್ | 8.43 |
| ರಸ್ತೆ | 10 |
| ಶಾಸಕರು ಕೈಗೆ ಸಿಗುತ್ತಾರಾ? | 7.31 |

### ಚೆನ್ನಬಸಪ್ಪ ಸತ್ಯಪ್ಪ ಶಿವಳ್ಳಿ — ಕಾಂಗ್ರೆಸ್
ಜಿಲ್ಲೆ: ಧಾರವಾಡ
ಕ್ಷೇತ್ರ: ಕುಂದಗೋಳ



8.84/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 9 |
| ಕುಡಿಯುವ ನೀರು | 9.17 |
| ವಿದ್ಯುತ್ | 9 |
| ರಸ್ತೆ | 8.33 |
| ಶಾಸಕರು ಕೈಗೆ ಸಿಗುತ್ತಾರಾ? | 10 |

# ಅಂಕ ಗಳಿಕೆಯಲ್ಲಿ ಶೆಟ್ಟರ್ ಮುಂದೆ, ಸಿ.ಎಂ ಹಿಂದೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನುಡಿದಂತೆ ನಡೆದಿದ್ದೇವೆ, ನಡೆಯುತ್ತಿದ್ದೇವೆ. ಚುನಾವಣೆ ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳ ಪೈಕಿ ಶೇ 98ರಷ್ಟು ಈಡೇರಿಸಿದ್ದೇವೆ' ಎಂದು ಪ್ರತಿಪಾದಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕರಾಗಿ ತಮ್ಮ ಸ್ವಕ್ಷೇತ್ರದಲ್ಲಿ ಮೂಲಸೌಕರ್ಯ ಕಲ್ಪಿಸುವುದು, ಮತದಾರರ ಅಪೇಕ್ಷೆ-ನಿರೀಕ್ಷೆಗಳನ್ನು ಪೂರೈಸುವಲ್ಲಿ ಮಾತ್ರ ತಮ್ಮ ಎದುರಾಳಿ ಪಕ್ಷಗಳ ನಾಯಕರಿಗಿಂತ ಹಿಂದೆ ಬಿದ್ದಿದ್ದಾರೆ.

ವಿರೋಧ ಪಕ್ಷದ ನಾಯಕರಾದ ಬಿಜೆಪಿಯ ಜಗದೀಶ ಶೆಟ್ಟರ್, ಹೆಚ್ಚಿನ ಅಂಕ ಪಡೆದು ಮುನ್ನಡೆ ಸಾಧಿಸಿದ್ದಾರೆ. ಕುಮಾರಸ್ವಾಮಿ ತಮ್ಮ ಮಧ್ಯಮ ಸ್ತರ ಕಾಯ್ದುಕೊಂಡಿದ್ದಾರೆ.

ಶಾಸಕರಾಗಿ ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ 'ನಾಯಕರು' ಏನು ಮಾಡಿದ್ದಾರೆ ಎಂಬ ಬಗ್ಗೆ ಮತದಾರರನ್ನು ವಿಚಾರಿಸಿದಾಗ, ಶಾಸಕರು ಪ್ರತಿಪಾದಿಸುತ್ತಿರುವುದಕ್ಕಿಂತ ಭಿನ್ನವಾದ ಅಭಿಮತ ವ್ಯಕ್ತವಾಗಿದೆ.

ವರುಣಾ ಕ್ಷೇತ್ರ ಪ್ರತಿನಿಧಿಸುತ್ತಿರುವ ಸಿದ್ದರಾಮಯ್ಯ ಒಟ್ಟಾರೆ 10 ಅಂಕಗಳಿಗೆ 7.07 ಅಂಕ ಪಡೆದಿದ್ದಾರೆ. ಅವರ ಪಕ್ಷದ ಎಲ್ಲ ಶಾಸಕರು ಪಡೆದಿರುವ ಅಂಕಗಳ ಸರಾಸರಿ ತೆಗೆದಾಗ ಕಾಂಗ್ರೆಸ್‌ನ ಒಟ್ಟಾರೆ ಗಳಿಕೆ 7.20ರಷ್ಟಿದೆ. ಈ ವಿಷಯದಲ್ಲೂ ತಮ್ಮ ಪಕ್ಷ ಪಡೆದ ಸರಾಸರಿ ಅಂಕಗಳಿಗಿಂತ ಸಿದ್ದರಾಮಯ್ಯ ಹಿಂದೆ ಬಿದ್ದಿದ್ದಾರೆ.

ಹುಬ್ಬಳ್ಳಿ-ಧಾರವಾಡ ಕೇಂದ್ರ ಕ್ಷೇತ್ರ ಪ್ರತಿನಿಧಿಸುವ ಶೆಟ್ಟರ್, ಒಟ್ಟಾರೆ 8.62 ಅಂಕ ಪಡೆದು ನಾಯಕರ ಪೈಕಿ ಅಗ್ರಗಣ್ಯರಾಗಿದ್ದರೆ, ರಾಮನಗರ ಕ್ಷೇತ್ರದ ಶಾಸಕ ಹಾಗೂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ 7.22 ಅಂಕ ಗಿಟ್ಟಿಸಿದ್ದಾರೆ.

**ಎರಡನೇ ಹಂತದ ನಾಯಕರ ಅಂಕ:** ಎರಡನೇ ಹಂತd ನಾಯಕರ ಪೈಕಿ ಕಡೂರು ಕ್ಷೇತ್ರದ ಶಾಸಕ ವೈ.ಎಸ್.ವಿ. ದತ್ತ ಸರಾಸರಿ 7.43 ಅಂಕ ಪಡೆದು ಮುಂಚೂಣಿಯಲ್ಲಿದ್ದಾರೆ.

ವಿಧಾನಸಭೆಯಲ್ಲಿ ಸಿದ್ದರಾಮಯ್ಯನವರನ್ನು ಬಿಟ್ಟರೆ ಎರಡನೇ ಸ್ಥಾನದಲ್ಲಿರುವ (ಶಾಸಕತ್ವದ ಹಿರಿತನ) ಬೃಹತ್ ಕೈಗಾರಿಕೆ ಸಚಿವ, ಹಳಿಯಾಳ ಕ್ಷೇತ್ರದ ಶಾಸಕ ಆರ್.ವಿ. ದೇಶಪಾಂಡೆ, ತಮ್ಮ ನಾಯಕನಿಗಿಂತ ಹಿನ್ನಡೆ ಅನುಭವಿಸಿದ್ದಾರೆ. ಅವರು ಪಡೆದಿರುವ ಸರಾಸರಿ ಅಂಕ 6.57.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಬೆಂಗಳೂರಿನ ಅಭಿವೃದ್ಧಿ ಕುಸಿದು ಬಿದ್ದು ಹೋಗಿದೆ ಎಂದು ಆರೋಪಿಸಿ 'ಬೆಂಗಳೂರು ರಕ್ಷಿಸಿ' ಎಂಬ ಯಾತ್ರೆಯ ನೇತೃತ್ವ ವಹಿಸಿರುವ ವಿರೋಧ ಪಕ್ಷ ಬಿಜೆಪಿಯ ಉಪನಾಯಕ ಆರ್. ಅಶೋಕ್ 6.18 ಅಂಕ ಗಳಿಸಿದ್ದಾರೆ.

**ವಿವಿಧ ಕ್ಷೇತ್ರಗಳಲ್ಲಿ ಪಡೆದ ಅಂಕ:** ಶಾಸಕರು ಮತದಾರರ ಕೈಗೆ ಸಿಗುತ್ತಾರೆಯೇ, ಮೂಲಸೌಕರ್ಯ ಕಲ್ಪಿಸುವಲ್ಲಿ ಶಾಸಕರ ಸಾಧನೆಯೇನು ಎಂಬ ಪ್ರಮುಖ ವಿಷಯಗಳಲ್ಲಿ ಕೂಡ ಶೆಟ್ಟರ್ ಮುಂಚೂಣಿಯಲ್ಲಿದ್ದಾರೆ.

ಶಾಸಕರು ಕೈಗೆ ಸಿಗುತ್ತಾರೆಯೇ ಎಂಬ ಪ್ರಶ್ನೆಗೆ ಸಂಬಂಧಿಸಿದಂತೆ ಶೆಟ್ಟರ್ 10, ಎಚ್.ಡಿ. ಕುಮಾರಸ್ವಾಮಿ 7.8 ಹಾಗೂ ಸಿದ್ದರಾಮಯ್ಯ 7.3 ಅಂಕ ಪಡೆದಿದ್ದಾರೆ.

ಆದರೆ, ರಸ್ತೆ ಉತ್ತಮ ಸ್ಥಿತಿಯಲ್ಲಿದೆಯೇ ಎಂಬ ಪ್ರಶ್ನೆಗೆ ಮಾತ್ರ ಸಿದ್ದರಾಮಯ್ಯ 7.9 ಅಂಕ ಪಡೆದು ಉಳಿದ ನಾಯಕರನ್ನು ಹಿಂದಿಕ್ಕಿದ್ದಾರೆ. ಶೆಟ್ಟರ್ ಹಾಗೂ ಕುಮಾರಸ್ವಾಮಿ ಇಬ್ಬರೂ 7.4 ಅಂಕ ಪಡೆದಿದ್ದಾರೆ.

ಕುಡಿಯುವ ನೀರಿನ ವಿಷಯದಲ್ಲಿ ಶೆಟ್ಟರ್ 9.9 ಅಂಕ ಪಡೆದಿದ್ದರೆ ಸಿದ್ದರಾಮಯ್ಯ 9 ಅಂಕ ಗಿಟ್ಟಿಸಿದ್ದಾರೆ. ಈ ಕ್ಷೇತ್ರದಲ್ಲಿ ಕುಮಾರಸ್ವಾಮಿ 7.1 ಕ್ಕೆ ನಿಂತು ಬಿಟ್ಟಿದ್ದಾರೆ.

ಶಿಕ್ಷಣ ಮತ್ತು ವಿದ್ಯುತ್ ವಿಷಯದಲ್ಲಿ ಶೆಟ್ಟರ್ 10ಕ್ಕೆ 10 ಅಂಕ ಗಳಿಸಿ ಮುನ್ನೆಲೆಯಲ್ಲೇ ಉಳಿದಿದ್ದಾರೆ. ಈ ಎರಡೂ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಕ್ರಮವಾಗಿ 8.2, 7.9 ಹಾಗೂ ಕುಮಾರಸ್ವಾಮಿ 7.1 ಹಾಗೂ 7.1 ಅಂಕ ಪಡೆದಿದ್ದಾರೆ.

ಶಾಸಕರ ಕೈಗೆ ಸಿಗುವ ಎರಡನೇ ಹಂತದ ನಾಯಕರ ಪೈಕಿ ವೈ.ಎಸ್.ವಿ. ದತ್ತ ಮೊದಲ ಸ್ಥಾನದಲ್ಲಿದ್ದರೆ, ಆರ್. ಅಶೋಕ್ ಮೂರನೇ ಸ್ಥಾನದಲ್ಲಿದ್ದಾರೆ.

ಈ ವಿಷಯದಲ್ಲಿ ದತ್ತ 7.4, ದೇಶಪಾಂಡೆ 6.7 ಹಾಗೂ ಅಶೋಕ್ 6.3 ಅಂಕ ಗಿಟ್ಟಿಸಿದ್ದಾರೆ.

ಕುಡಿಯುವ ನೀರಿನ ಪೂರೈಕೆ ವಿಷಯದಲ್ಲಿ ದತ್ತ 8.3, ದೇಶಪಾಂಡೆ 7.1 ಅಂಕ ಗಳಿಸಿದ್ದರೆ, ಅಶೋಕ್ 6.7 ಅಂಕ ಪಡೆದು ಕೊನೆಯ ಸ್ಥಾನದಲ್ಲಿದ್ದಾರೆ.

ರಸ್ತೆ ಸಂಪರ್ಕ ಹಾಗೂ ವಿದ್ಯುತ್ ಪೂರೈಕೆ ವಿಷಯದಲ್ಲಿ ದತ್ತ ಕ್ರಮವಾಗಿ 8.9 ಹಾಗೂ 7.8 ಅಂಕ ಪಡೆದಿದ್ದಾರೆ.

ಆದರೆ, ರಸ್ತೆ ಮತ್ತು ವಿದ್ಯುತ್ ವಿಷಯದಲ್ಲಿ ದೇಶಪಾಂಡೆ ಅವರನ್ನು ಅಶೋಕ್ ಹಿಂದಿಕ್ಕಿದ್ದಾರೆ. ರಸ್ತೆ, ವಿದ್ಯುತ್ ಪೂರೈಕೆ ವಿಷಯದಲ್ಲಿ ದೇಶಪಾಂಡೆ ಕ್ರಮವಾಗಿ 6.4 ಹಾಗೂ 6.5 ಅಂಕ ಗಳಿಸಿದ್ದರೆ, ಅಶೋಕ್ 6.9 ಹಾಗೂ 6.7 ಅಂಕ ಗಳಿಸಿದ್ದಾರೆ.

ಶಿಕ್ಷಣದ ವಿಷಯದಲ್ಲಿ ದತ್ತ 7.9 ಅಂಕ ಗಳಿಸಿ ಮುನ್ನಡೆ ಸಾಧಿಸಿದ್ದರೆ, ದೇಶಪಾಂಡೆ 6.6 ಹಾಗೂ ಅಶೋಕ್ 6.4 ಅಂಕ ಗಿಟ್ಟಿಸಿದ್ದಾರೆ.

## ಕೊನೆಯ ಐದು ಸ್ಥಾನ ಗಳಿಸಿದವರು

### ಎಸ್.ಎನ್. ಸುಬ್ಬಾರೆಡ್ಡಿ — ಪಕ್ಷೇತರ
ಜಿಲ್ಲೆ: ಚಿಕ್ಕಬಳ್ಳಾಪುರ
ಕ್ಷೇತ್ರ: ಬಾಗೇಪಲ್ಲಿ



3.94/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 3.64 |
| ಕುಡಿಯುವ ನೀರು | 4.85 |
| ವಿದ್ಯುತ್ | 5.15 |
| ರಸ್ತೆ | 3.94 |
| ಶಾಸಕರು ಕೈಗೆ ಸಿಗುತ್ತಾರಾ? | 4.24 |

### ಡಾ. ಕೆ. ಸುಧಾಕರ್ — ಕಾಂಗ್ರೆಸ್
ಜಿಲ್ಲೆ: ಚಿಕ್ಕಬಳ್ಳಾಪುರ
ಕ್ಷೇತ್ರ: ಚಿಕ್ಕಬಳ್ಳಾಪುರ



4.83/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 6.67 |
| ಕುಡಿಯುವ ನೀರು | 4.44 |
| ವಿದ್ಯುತ್ | 4.81 |
| ರಸ್ತೆ | 4.07 |
| ಶಾಸಕರು ಕೈಗೆ ಸಿಗುತ್ತಾರಾ? | 5.56 |

### ಎಚ್.ಪಿ. ರಾಜೇಶ್ — ಕಾಂಗ್ರೆಸ್
ಜಿಲ್ಲೆ: ದಾವಣಗೆರೆ
ಕ್ಷೇತ್ರ: ಜಗಳೂರು



4.83/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 4.40 |
| ಕುಡಿಯುವ ನೀರು | 4.80 |
| ವಿದ್ಯುತ್ | 4.87 |
| ರಸ್ತೆ | 5.53 |
| ಶಾಸಕರು ಕೈಗೆ ಸಿಗುತ್ತಾರಾ? | 6.27 |

### ಎಂ.ಟಿ. ಕೃಷ್ಣಪ್ಪ — ಜೆಡಿಎಸ್
ಜಿಲ್ಲೆ: ತುಮಕೂರು
ಕ್ಷೇತ್ರ: ತುರುವೇಕೆರೆ



4.99/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 5 |
| ಕುಡಿಯುವ ನೀರು | 4.93 |
| ವಿದ್ಯುತ್ | 4.87 |
| ರಸ್ತೆ | 5.80 |
| ಶಾಸಕರು ಕೈಗೆ ಸಿಗುತ್ತಾರಾ? | 5.87 |

### ಸಿ.ಬಿ. ಸುರೇಶ್‌ಬಾಬು — ಜೆಡಿಎಸ್
ಜಿಲ್ಲೆ: ತುಮಕೂರು
ಕ್ಷೇತ್ರ: ಚಿಕ್ಕನಾಯಕನ ಹಳ್ಳಿ



5/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 5.36 |
| ಕುಡಿಯುವ ನೀರು | 5.49 |
| ವಿದ್ಯುತ್ | 5.69 |
| ರಸ್ತೆ | 6.08 |
| ಶಾಸಕರು ಕೈಗೆ ಸಿಗುತ್ತಾರಾ? | 5.88 |

# ಮೊದಲ ಐದು ಸ್ಥಾನಗಳಲ್ಲಿ ಕೈ ಶಾಸಕರು!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂಕ ಪಟ್ಟಿಯಲ್ಲಿ ಮೊದಲ ಐದು ಸ್ಥಾನಗಳಲ್ಲಿ ಕೈ ಶಾಸಕರೇ ಇದ್ದಾರೆ. ಅತೀ ಹೆಚ್ಚು ಅಂಕ (9.08) ಪಡೆದಿರುವ ಉಡುಪಿ ಶಾಸಕ ಪ್ರಮೋದ್ ಮಧ್ವರಾಜ್ ಮೊದಲ ಸ್ಥಾನದಲ್ಲಿದ್ದಾರೆ. ಗ್ರಾಮೀಣ ಪ್ರದೇಶಕ್ಕೆ ರಸ್ತೆ ಸೌಲಭ್ಯ ಮತ್ತು ವಿದ್ಯುತ್ ಕಲ್ಪಿಸುವ ವಿಷಯದಲ್ಲಿ ಅವರು ತಲಾ 9.17 ಅಂಕ ಪಡೆದಿದ್ದಾರೆ. ಉದ್ಯೋಗ ಮತ್ತು ಶಿಕ್ಷಣ ವಿಷಯದಲ್ಲಿ ಮಧ್ವರಾಜ್ ಪೂರ್ಣ ಅಂಕ ಗಳಿಸಿದ್ದಾರೆ. ಲಭ್ಯತೆ ವಿಷಯದಲ್ಲಿ ನಗರ ಪ್ರದೇಶದಲ್ಲಿ 9.67 ಅಂಕ ಪಡೆದರೆ, ಗ್ರಾಮೀಣ ಪ್ರದೇಶದಲ್ಲಿ ಕೇವಲ 8 ಅಂಕ ಗಳಿಸಿದ್ದಾರೆ.

ಅತ್ಯುತ್ತಮ ಸಾಧನೆ ತೋರಿದವರಲ್ಲಿ ಎರಡನೇ ಸ್ಥಾನದಲ್ಲಿ 9.01 ಅಂಕ ಪಡೆದಿರುವ, ಬೈಂದೂರಿನ ಶಾಸಕ ಕೆ. ಗೋಪಾಲ ಪೂಜಾರಿ ಇದ್ದಾರೆ. ಹಳ್ಳಿ ಪ್ರದೇಶಗಳಿಗೆ ವಿದ್ಯುತ್ ಪೂರೈಕೆ ವಿಚಾರದಲ್ಲಿ 8.98 ಅಂಕ ಪಡೆದಿದ್ದಾರೆ. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಶಾಲೆಗಳಿಗೆ ಅವರು ಅಷ್ಟೇ ಪ್ರಮಾಣದ ಅಂಕ ಪಡೆದಿದ್ದಾರೆ.

ತೇರದಾಳ ಕ್ಷೇತ್ರ ಪ್ರತಿನಿಧಿಸುತ್ತಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಮೂರನೇ ಸ್ಥಾನದಲ್ಲಿದ್ದಾರೆ (8.87). ಕ್ಷೇತ್ರದಲ್ಲಿ ನಗರ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಗೆ ಉಮಾಶ್ರೀ 9.67 ಅಂಕ ಪಡೆದಿದ್ದಾರೆ.

ಧಾರವಾಡ ಶಾಸಕ, ಗಣಿ ಮತ್ತು ಭೂ ವಿಜ್ಞಾನ ಸಚಿವ ವಿನಯ ಕುಲಕರ್ಣಿ ಮತ್ತು ಅವರದೇ ಜಿಲ್ಲೆಯ ಕುಂದಗೋಳ ಶಾಸಕ ಸಿ.ಎಸ್. ಶಿವಳ್ಳಿ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿದ್ದಾರೆ. ನಗರ ಪ್ರದೇಶದಲ್ಲಿ ಲಭ್ಯತೆಗೆ ಕುಲಕರ್ಣಿ 7.31 ಅಂಕ ಪಡೆದರೆ, ಶಿವಳ್ಳಿ 9.81 ಅಂಕ ಪಡೆದಿದ್ದಾರೆ.

ಗ್ರಾಮಾಂತರ ಪ್ರದೇಶಕ್ಕೆ ವಿದ್ಯತ್ ಪೂರೈಕೆಗೆ ಒತ್ತು ನೀಡುವ ವಿಚಾರದಲ್ಲಿ ಕುಲಕರ್ಣಿ, 9.50 ಅಂಕ ಪಡೆದರೆ, ನಗರ ಪ್ರದೇಶಕ್ಕೆ ವಿದ್ಯುತ್ ಒದಗಿಸುವ ವಿಚಾರದಲ್ಲಿ ಶಿವಳ್ಳಿ 9.52 ಅಂಕ ಪಡೆದಿದ್ದಾರೆ.

### ಹಿಂದೆ ಬಿದ್ದವರು...

ತೀರಾ ಹಿಂದುಳಿದ ಕ್ಷೇತ್ರಗಳಲ್ಲಿ ಒಂದಾದ ಬಾಗೇಪಲ್ಲಿಯ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ, ತಮ್ಮ ವೈಯಕ್ತಿಕ ಸಾಧನೆಯ ಅಂಕಪಟ್ಟಿಯಲ್ಲೂ ತೀರಾ ಹಿಂದೆ ಇದ್ದಾರೆ. ಅವರು ಕೇವಲ 3.94 ಅಂಕ ಪಡೆದಿದ್ದಾರೆ. ಹಳ್ಳಿಗಳ ರಸ್ತೆಗೆ 3.94 ಅಂಕ ಪಡೆದಿರುವ ಸುಬ್ಬಾ ರೆಡ್ಡಿ, ನಗರ ಪ್ರದೇಶದ ಜನರಿಗೆ ಲಭ್ಯವಾಗುವ ವಿಚಾರಕ್ಕೆ 3.45 ಅಂಕ ಪಡೆದಿದ್ದಾರೆ.

ಉಳಿದಂತೆ, ಅತ್ಯಂತ ಕಳಪೆ ಸಾಧನೆ ಮಾಡಿದ ಶಾಸಕರ ಪಟ್ಟಿಯಲ್ಲಿ ಡಾ. ಕೆ. ಸುಧಾಕರ (ಚಿಕ್ಕಬಳ್ಳಾಪುರ), ಎಚ್.ಪಿ. ರಾಜೇಶ್ (ಜಗಳೂರು), ಎಂ.ಟಿ. ಕೃಷ್ಣಪ್ಪ (ತುರುವೇಕೆರೆ), ಸಿ.ಬಿ. ಸುರೇಶಬಾಬು (ಚಿಕ್ಕನಾಯಕಹಳ್ಳಿ) ನಂತರದ ಸ್ಥಾನಗಳಲ್ಲಿ ಕಾಣಿಸಿಕೊಂಡಿದ್ದಾರೆ.

### ಕರ್ನಾಟಕ ವಿಧಾನಸಭೆ ಪಕ್ಷಗಳ ಬಲಾಬಲ

| ಒಟ್ಟು ಸ್ಥಾನಗಳು | 224 |
|---|---|
| ಕಾಂಗ್ರೆಸ್ | 123 |
| ಬಿಜೆಪಿ | 43 |
| ಜೆಡಿಎಸ್ | 37 |
| ಬಿಎಸ್‌ಆರ್‌ಸಿ | 3 |
| ಕೆಜೆಪಿ | 2 |
| ಕೆಎಂಪಿ | 1 |
| ಪಕ್ಷೇತರರು | 8 |
| ಖಾಲಿ | 7 |

## ಸದನದ ಪ್ರಮುಖ ನಾಯಕರ ಸಾಧನೆ

### ವೈ.ಎಸ್.ವಿ. ದತ್ತ — ಜೆಡಿಎಸ್
ಜಿಲ್ಲೆ: ಚಿಕ್ಕಮಗಳೂರು
ಕ್ಷೇತ್ರ: ಕಡೂರು



7.43/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 7.9 |
| ಕುಡಿಯುವ ನೀರು | 8.3 |
| ವಿದ್ಯುತ್ | 7.8 |
| ರಸ್ತೆ | 8.9 |
| ಶಾಸಕರು ಕೈಗೆ ಸಿಗುತ್ತಾರಾ? | 7.4 |

### ಆರ್.ವಿ. ದೇಶಪಾಂಡೆ — ಕಾಂಗ್ರೆಸ್
ಜಿಲ್ಲೆ: ಉತ್ತರ ಕನ್ನಡ
ಕ್ಷೇತ್ರ: ಹಳಿಯಾಳ



6.57/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 6.6 |
| ಕುಡಿಯುವ ನೀರು | 7.1 |
| ವಿದ್ಯುತ್ | 6.4 |
| ರಸ್ತೆ | 6.4 |
| ಶಾಸಕರು ಕೈಗೆ ಸಿಗುತ್ತಾರಾ? | 6.7 |

### ಆರ್. ಅಶೋಕ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಪದ್ಮನಾಭನಗರ



6.18/10

| ಯಾವುದರಲ್ಲಿ ಎಷ್ಟು ಅಂಕ ...? | |
|---|---|
| ಉತ್ತಮ ಶಾಲೆಗಳು | 6.4 |
| ಕುಡಿಯುವ ನೀರು | 6.7 |
| ವಿದ್ಯುತ್ | 6.4 |
| ರಸ್ತೆ | 6.9 |
| ಶಾಸಕರು ಕೈಗೆ ಸಿಗುತ್ತಾರಾ? | 6.3 |

### ಪಕ್ಷವಾರು ಸಾಧನೆ

| | ಕುಡಿಯುವ ನೀರು | | ಶಾಲೆ | | ವಿದ್ಯುತ್ | | ಶಾಸಕರು ಕೈಗೆ ಸಿಗುತ್ತಾರಾ? | | ಒಳಚರಂಡಿ ವ್ಯವಸ್ಥೆ | | ಶಾಸಕರ ವಿಶ್ವಾಸಾರ್ಹತೆ | |
|---|---|---|---|---|---|---|---|---|---|---|---|---|
| | ನಗರ | ಗ್ರಾಮೀಣ | ನಗರ | ಗ್ರಾಮೀಣ | ನಗರ | ಗ್ರಾಮೀಣ | ನಗರ | ಗ್ರಾಮೀಣ | ನಗರ | ಗ್ರಾಮೀಣ | ನಗರ | ಗ್ರಾಮೀಣ |
| ಕಾಂಗ್ರೆಸ್ | 7.48 | 7.47 | 7.97 | 7.65 | 7.88 | 7.63 | 7.05 | 7.19 | 6.96 | 6.87 | 7.30 | 7.11 |
| ಬಿಜೆಪಿ | 7.57 | 7.47 | 7.87 | 7.64 | 8 | 7.72 | 7.39 | 7.34 | 7.12 | 6.69 | 7.60 | 7.00 |
| ಜೆಡಿಎಸ್ | 7.35 | 6.98 | 7.55 | 7.52 | 7.56 | 7.37 | 7.05 | 7.02 | 6.96 | 6.65 | 7.29 | 6.92 |

### ಸಮೀಕ್ಷೆಯಲ್ಲಿ ಕೇಳಲಾದ ಪ್ರಶ್ನೆಗಳು (ಗ್ರಾಮೀಣ ಮತ್ತು ನಗರ ಭಾಗ ಎರಡೂ ಸೇರಿ)

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳ ಸೌಲಭ್ಯ
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದಕ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಮತ್ತು ರಸಗೊಬ್ಬರ ಸಬ್ಸಿಡಿ ಸೌಲಭ್ಯ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ

## ಐದರಲ್ಲಿ ಬಿಜೆಪಿ ಮುಂದು

**ಬೆಂಗಳೂರು:** ಜನರಿಗೆ ನೇರವಾಗಿ ಸಂಬಂಧಪಡುವ ಐದು ಪ್ರಮುಖ ವಿಷಯಗಳ ಪೈಕಿ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಮೊದಲ ಸ್ಥಾನದಲ್ಲಿದ್ದರೆ, ತಲಾ ಒಂದು ಸ್ಥಾನದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಇವೆ. ಶಾಸಕರು ಕೈಗೆ ಸಿಗುತ್ತಾರೆಯೇ ಎಂಬ ಪ್ರಶ್ನೆಗೆ ಬಿಜೆಪಿ ಶಾಸಕರು ಸರಾಸರಿ 7.39 ಅಂಕ ಪಡೆದಿದ್ದರೆ, ಜೆಡಿಎಸ್‌ನವರು 7.10 ಅಂಕ ಗಿಟ್ಟಿಸಿದ್ದಾರೆ. ಆಡಳಿತಾರೂಢ ಕಾಂಗ್ರೆಸ್‌ನವರು 7.10 ಅಂಕ ಗಳಿಸಿದ್ದಾರೆ.

ಕುಡಿಯುವ ನೀರಿನ ವಿಷಯದಲ್ಲಿ 7.57 ಅಂಕ ಬಿಜೆಪಿಗೆ ಬಂದಿದ್ದರೆ, ಕಾಂಗ್ರೆಸ್‌ಗೆ 7.48 ಅಂಕ, ಜೆಡಿಎಸ್ 7.35 ಅಂಕ ಪಡೆದಿವೆ. ಸಮರ್ಪಕ ವಿದ್ಯುತ್ ಪೂರೈಕೆಯಲ್ಲಿ ಕೂಡ ಬಿಜೆಪಿ 8.00 ಕಾಂಗ್ರೆಸ್ 7.88 ಹಾಗೂ 7.56 ಅಂಕವನ್ನು ಗಳಿಸಿವೆ.

ಈ ಕ್ಷೇತ್ರದ 10 ಅಂಕಗಳ ಪೈಕಿ ಜೆಡಿಎಸ್ 7.14, ಬಿಜೆಪಿ 7.12 ಹಾಗೂ ಕಾಂಗ್ರೆಸ್ 6.96 ಅಂಕ ಗಳಿಸಿವೆ. ಉತ್ತಮ ಶಾಲೆ ವಿಷಯದಲ್ಲಿ ಕಾಂಗ್ರೆಸ್ ಮುಂಚೂಣಿಯಲ್ಲಿದೆ, ಬಿಜೆಪಿ ಎರಡನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಕಾಂಗ್ರೆಸ್ 7.97, ಬಿಜೆಪಿ 7.87 ಹಾಗೂ ಜೆಡಿಎಸ್ 7.55 ಅಂಕಗಳನ್ನು ಪಡೆದಿವೆ.

ಕೇಂದ್ರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ್ ಯೋಜನೆಯನ್ನು ಅನುಷ್ಠಾನ ಮಾಡಲೇ ಬೇಕು ಎಂದು ಬಿಜೆಪಿ ನಾಯಕರು ಪ್ರತಿಪಾದಿಸುತ್ತಲೇ ಇರುತ್ತಾರೆ. ಆದರೆ ಸ್ವಚ್ಛತೆ ಮತ್ತು ಒಳಚರಂಡಿ ನಿರ್ವಹಣೆಯ ಮೇಲುಸ್ತುವಾರಿಯಲ್ಲಿ ಬಿಜೆಪಿಯ ಎಲ್ಲ ಶಾಸಕರು 2ನೇ ಸ್ಥಾನಕ್ಕೆ ಇಳಿದಿದ್ದಾರೆ.

## ಸಮೀಕ್ಷಾ ವಿಧಾನ

ಆಡಳಿತ ವ್ಯವಸ್ಥೆಯಲ್ಲಿ ಉತ್ತರದಾಯಿತ್ವವನ್ನು ಉತ್ತೇಜಿಸುವುದಕ್ಕಾಗಿ ಸಂಶೋಧನಾ ಪ್ರಕ್ರಿಯೆಗಳ ಮೂಲಕ ಕೆಲಸ ಮಾಡುತ್ತಿರುವ 'ದಕ್ಷ್' ಮತ್ತು ಚುನಾವಣಾ ಸುಧಾರಣೆಗಳ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' ಎಂಬ ಎರಡು ಸರ್ಕಾರೇತರ ಸಂಸ್ಥೆಗಳು ಕರ್ನಾಟಕ ಮತದಾರರ ಸಮೀಕ್ಷೆ–2017ನ್ನು ನಡೆಸಿವೆ. ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಸಿರುವ ಈ ಸಮೀಕ್ಷೆ, ಶಾಸಕರ ಕಾರ್ಯನಿರ್ವಹಣೆ ಕುರಿತಂತೆ ಜನರ ಅಭಿಪ್ರಾಯವನ್ನು ಸಂಗ್ರಹಿಸುವುದಾಗಿತ್ತು.

ಪ್ರಶ್ನಾವಳಿಯನ್ನು ಮೊಬೈಲ್ ಆ್ಯಪ್ ಒಂದರಲ್ಲಿ ಸಮೀಕ್ಷಕರಿಗೆ ಒದಗಿಸಲಾಗಿತ್ತು. ಸಮೀಕ್ಷೆಯ ಪ್ರಶ್ನೆಗಳಿಗೆ ಉತ್ತರಿಸುವವರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನೂ ಈ ಪ್ರಕ್ರಿಯೆಯಲ್ಲಿ ದಾಖಲಿಸಲಾಗಿದೆ. ಮತದಾರರನ್ನು ಪ್ರಭಾವಿಸಿರಬಹುದಾದ 25 ವಿಷಯಗಳನ್ನು ಗುರುತಿಸಲಾಗಿತ್ತು. ನಗರ ಹಾಗೂ ಗ್ರಾಮೀಣ ಪ್ರದೇಶದ ಮತದಾರರಿಗೆ ಅವರ ಹಿನ್ನೆಲೆಗೆ ಅನುಗಣವಾಗಿ ಕೆಲವು ಭಿನ್ನ ಪ್ರಶ್ನೆಗಳನ್ನು ಕೇಳಲಾಗಿತ್ತು.

ಸಂಖ್ಯಾಶಾಸ್ತ್ರೀಯವಾಗಿ ಯಾದೃಚ್ಛಿಕಗೊಳಿಸಿದ (Randomized) ಪ್ರದೇಶಗಳಲ್ಲಿ ಸಮೀಕ್ಷಕರು ಮತದಾರರನ್ನು ಭೇಟಿಯಾದರು. ಸಮೀಕ್ಷೆ ನಡೆಸುವ ಪ್ರದೇಶ ಪ್ರತೀ ಐದನೇ ಮನೆಯನ್ನು ಆರಿಸಿಕೊಳ್ಳುವ ಸೂತ್ರದಂತೆ ಈ ಕಾರ್ಯ ನಡೆಯಿತು. ಸಮೀಕ್ಷಕರು ಮೊಬೈಲ್ ಆ್ಯಪ್‌ನಲ್ಲಿ ಮಾಹಿತಿಯನ್ನು ಸಂಗ್ರಹಿಸುತ್ತಿದ್ದುದರಿಂದ ಅದನ್ನು ನಿರಂತರವಾಗಿ ಪರಿಶೀಲಿಸಲಾಗುತ್ತಿತ್ತು.

ಇದರಿಂದ ಉತ್ತರಗಳ ವಿಶ್ವಾಸಾರ್ಹತೆಯನ್ನು ಖಾತರಿಪಡಿಸಿಕೊಳ್ಳಲು ಸಾಧ್ಯವಾಗಿದೆ. ಸಮೀಕ್ಷೆಯಲ್ಲಿ ಉತ್ತರ ನೀಡಿದವರ ಒಟ್ಟು ಸಂಖ್ಯೆ 13,440. ಪ್ರತೀ ವಿಧಾನಸಭಾ ಕ್ಷೇತ್ರದಿಂದ ಕನಿಷ್ಠ 60 ಮತದಾರರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

# 'ರಾಜಧಾನಿಯ 25 ಕ್ಷೇತ್ರ ಗೆದ್ದೇ ಗೆಲ್ಲುತ್ತೇವೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲಿ 25 ಕ್ಷೇತ್ರಗಳನ್ನು ಗೆದ್ದೇ ಗೆಲ್ಲುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ವಿವಿಧ ಕಾಮಗಾರಿಗಳನ್ನು ಉದ್ಘಾಟಿಸಿ, ಬಳಿಕ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು.

'ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ಮತ್ತು ಕೆ.ಆರ್.ಪುರ ಕ್ಷೇತ್ರದ ಶಾಸಕ ಭೈರತಿ ಬಸವರಾಜು ಮತ್ತೆ ಗೆಲ್ಲುವುದು ಕೂಡ ಪೂರ್ವದಲ್ಲಿ ಸೂರ್ಯ ಉದಯಿಸುವಷ್ಟೇ ಸತ್ಯ' ಎಂದರು.

'ಯಶವಂತಪುರ ಕ್ಷೇತ್ರವನ್ನು ಹಿಂದೆ ಪ್ರತಿನಿಧಿಸಿದ್ದ ಶೋಭಾ ಕರಂದ್ಲಾಜೆ, 5 ವರ್ಷ ಸಚಿವೆಯಾಗಿದ್ದರು. ಆದರೂ ಕ್ಷೇತ್ರ ಅಭಿವೃದ್ಧಿಪಡಿಸಲಿಲ್ಲ. ಸೋಲುವ ಭೀತಿಯಿಂದ ಕಳೆದ ಚುನಾವಣೆ ವೇಳೆ ಶೋಭಾ ಪಲಾಯನ ಮಾಡಿದ್ದರು. ಸಂಸದೆಯಾದ ಬಳಿಕವೂ ಬಾಯಿಗೆ ಬಂದಂತೆ ಮಾತನಾಡುತ್ತಾಳೆ. ಆಯಮ್ಮನಿಗೆ ನಾಲಿಗೆ ಮೇಲೆ ಹಿಡಿತವಿಲ್ಲ' ಎಂದು ಹರಿಹಾಯ್ದರು.

'ನಾವು ಅಧಿಕಾರಕ್ಕೆ ಬಂದ ಮೇಲೆ ಈ ಕ್ಷೇತ್ರದ ಶಾಸಕರು ಕೇಳಿದಷ್ಟು ಅನುದಾನ ನೀಡಿದ್ದೇನೆ. ಅವರು ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ' ಎಂದರು.

'ಚುನಾವಣೆಗೆ ಮುನ್ನ ನೀಡಿದ್ದ 165 ಭರವಸೆಗಳಲ್ಲಿ 158 ಈಡೇರಿಸಿದ್ದೇವೆ. ಉಪನಗರ ರೈಲು ಯೋಜನೆಗೆ ಕೇಂದ್ರ ₹17,000 ಕೋಟಿ ಪ್ರಕಟಿಸಿತು. ಆದರೆ, ₹1 ಕೋಟಿ ಮಾತ್ರ ಹಣ ತೆಗೆದು ಇಟ್ಟಿದೆ. ಆದರೆ, ನಾವು ₹300 ಕೋಟಿ ಕಾಯ್ದಿರಿಸಿದ್ದೇವೆ. ಬಿಜೆಪಿಯವರು ಎಷ್ಟೊಂದು ಡೋಂಗಿಗಳೆನ್ನುವುದು ಇದರಲ್ಲೇ ಗೊತ್ತಾಗುತ್ತದೆ. ಆದರೆ, ನಾವು ನುಡಿದಂತೆ ನಡೆದಿದ್ದೇವೆ' ಎಂದರು.

'ನಮ್ಮ ಕೂಲಿಗೆ ತಕ್ಕ ಪ್ರತಿಫಲ ಕೇಳಲು ಮೇ ತಿಂಗಳಲ್ಲಿ ಮತದಾರರ ಮುಂದೆ ಬರಲಿದ್ದೇವೆ. ಕಾಂಗ್ರೆಸ್ ಪಕ್ಷವನ್ನು ಪುನಃ ಅಧಿಕಾರಕ್ಕೆ ತನ್ನಿ' ಎಂದು ಮನವಿ ಮಾಡಿದರು.

'ಜೆಡಿಎಸ್ ಬಗ್ಗೆ ಮಾತನಾಡುವುದಿಲ್ಲ. ಪಾಪ, ಅವರು ಈ ಬಾರಿ ನಗರದಲ್ಲಿ ಒಂದು ಸ್ಥಾನವನ್ನೂ ಗೆಲ್ಲುವುದಿಲ್ಲ. ಕಳೆದ ಬಾರಿ ಅಪ್ಪಿತಪ್ಪಿ ಮೂರು ಸ್ಥಾನ ಗೆದ್ದಿದ್ದರು. ಅದರಲ್ಲಿ ಇಬ್ಬರು ಪಕ್ಷ ಬಿಟ್ಟಿದ್ದಾರೆ' ಎಂದು ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಮುಕ್ಕಾಲು ಗಂಟೆ ಭಾಷಣದುದ್ದಕ್ಕೂ ಬಿಜೆಪಿ ನಾಯಕರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ತಮ್ಮ ಸರ್ಕಾರದ ಸಾಧನೆಗಳು ಮತ್ತು ಜಾರಿಗೊಳಿಸಿದ ಹಲವು ಭಾಗ್ಯಗಳ ಬಗ್ಗೆಯೂ ಎಳೆಎಳೆಯಾಗಿ ವಿವರಿಸಿದರು.

ಕೆಂಪೇಗೌಡ ಬಡಾವಣೆಗೆ ಭೂಮಿ ನೀಡಿದ ರೈತರಿಗೆ ಮೊದಲ ಹಂತದಲ್ಲಿ 2,000 ನಿವೇಶನ ಮತ್ತು ಅರ್ಜಿದಾರರಿಗೆ 5,000 ನಿವೇಶನಗಳ ಹಕ್ಕುಪತ್ರ ಕೊಟ್ಟಿದ್ದೇವೆ. ಭೂಮಿ ಕಳೆದುಕೊಂಡ ಸಂತ್ರಸ್ತ ರೈತರಿಗೆ 2ನೇ ಹಂತದಲ್ಲಿ 2,000 ನಿವೇಶನ ಮತ್ತು ಅರ್ಜಿದಾರರಿಗೆ 5,000 ನಿವೇಶನ ಹಂಚಿಕೆ ಮಾಡಲಿದ್ದೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

₹806.88 ಕೋಟಿ 1ನೇ ಪ್ಯಾಕೇಜ್ ಮತ್ತು ₹813.13 ಕೋಟಿ 2ನೇ ಪ್ಯಾಕೇಜ್‌ನಲ್ಲಿ ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ. ₹465.80 ಕೋಟಿ ವೆಚ್ಚದಲ್ಲಿ ಬಡಾವಣೆಯ ಮುಖ್ಯ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಬನಶಂಕರಿ 6ನೇ ಹಂತ ಮತ್ತು ಹೇರೋಹಳ್ಳಿ ವಾರ್ಡ್‌ಗೆ ₹49 ಕೋಟಿ ವೆಚ್ಚದಲ್ಲಿ ಕಾವೇರಿ ನೀರಿನ ಸಂಪರ್ಕ ಒದಗಿಸುವ ಯೋಜನೆಗೆ ಚಾಲನೆ ನೀಡಲಾಯಿತು.



ಬೆಂಗಳೂರಿನ ಗೊಲ್ಲರಹಟ್ಟಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ

ಮಂಗಳವಾರ, ಮಾರ್ಚ್ 6, 2018 | ದಾವಣಗೆರೆ | ₹ 5.00 | ಸಂಪುಟ 17 | ಸಂಚಿಕೆ 65 | ಪುಟ 20 + 4

● www.prajavani.net

/prajavani.net @prajavani /+prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕರ್ನಾಟಕ ದರ್ಶನ**

ಕಾಡಿನ ಜೀವಗಳಿಗಾಗಿ, ಸಾಕು ಪ್ರಾಣಿಗಳಿಗಾಗಿ ಈ ಅಜ್ಜ ಏಳು ಕೆರೆಗಳನ್ನು ಕಟ್ಟಿಸಿದ್ದಾರೆ; ಸ್ವಂತ ಕುರಿಗಳನ್ನೇ ಮಾರಿ!



‘ದಿ ಶೇಪ್ ಆಫ್ ವಾಟರ್’ ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ 10

2016ನೇ ಸಾಲಿನ ಏಕಲವ್ಯ ಪ್ರಶಸ್ತಿ ಪ್ರಕಟ 15

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,746 ▼ | 10,369 ▼ | ₹30,632 (ಬೆಂಗಳೂರು) ▼ | ₹38,700 (ಬೆಂಗಳೂರು) ▼ | 65.12 ▲ |

## ಕರ್ನಾಟಕ ಪ್ರಜಾ ಮತ 2018 ಜನತಂತ್ರದ ಹಬ್ಬ

ವಿಧಾನಸಭಾ ಚುನಾವಣೆಯ ಕಾವೇರುತ್ತಿದ್ದು ‘ಅಭಿವೃದ್ಧಿ’ ವಿಷಯ ರಾಜಕೀಯ ಅಂಗಳದ ಬಹು ಚರ್ಚಿತ ಸಂಗತಿಯಾಗಿದೆ. ಕಳೆದ ನಾಲ್ಕು ಮುಕ್ಕಾಲು ವರ್ಷಗಳಲ್ಲಿ ಚುನಾಯಿತ ಪ್ರತಿನಿಧಿಗಳು ಏನು ಮಾಡಿದ್ದಾರೆ, ಮತದಾರರ ಕೈಗೆ ಸಿಕ್ಕಿದ್ದಾರೆಯೇ ಎಂಬಿತ್ಯಾದಿ ವಿಷಯಗಳನ್ನು ಮುಂದಿಟ್ಟು ‘ದಕ್ಷ’ ಸಂಸ್ಥೆ ಜೊತೆ ಸೇರಿ ಪ್ರಜಾವಾಣಿ ನಡೆಸಿದ ಸಮೀಕ್ಷೆಯ ಎರಡನೇ ಕಂತು ಇದು. ಕರ್ನಾಟಕ ವಿಧಾನಸಭೆ ಪ್ರತಿನಿಧಿಸುತ್ತಿರುವ ಏಳು ಶಾಸಕಿಯರ ಸಾಧನೆಗೆ ಕನ್ನಡಿ ಹಿಡಿಯುವ ಯತ್ನ ಇಂದಿನ ಸಂಚಿಕೆಯಲ್ಲಿದೆ. ನಾಲ್ಕೈದು ದಶಕಗಳಿಂದ ರಾಜಕಾರಣದಲ್ಲಿ ತೊಡಗಿಕೊಂಡಿರುವ ಕುಟುಂಬಕ್ಕೆ ಸೇರಿದ ಜನಪ್ರತಿನಿಧಿಗಳು, ಹಾಲಿ ಸಚಿವರು, ಮಾಜಿ ಮುಖ್ಯಮಂತ್ರಿಗಳ ಮಕ್ಕಳು 14ನೇ ವಿಧಾನಸಭೆಯ ಅವಧಿಯಲ್ಲಿ ಸಾಧಿಸಿದ್ದೇನು? ಅವರ ನಡಾವಳಿಗಳಲ್ಲಿ ಜನರು ಕಂಡ ಕೊರತೆಗಳೇನು ಎಂಬುದರ ವಿವರ ಇಲ್ಲಿದೆ.

‘ದೊಡ್ಡ’ವರೆಲ್ಲ ಜಾಣರೇ?: ಸಚಿವರಾದ ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ, ಶಾಸಕರಾದ ಬಸವರಾಜ ಬೊಮ್ಮಾಯಿ, ಎಚ್.ಡಿ.ರೇವಣ್ಣ ಸಾಧನೆಯ ಕುರಿತ ವಿಶ್ಲೇಷಣೆ...

● 25 ಶಾಸಕರ ಅಂಕ ಪಟ್ಟಿ 11












ಕರ್ನಾಟಕ ವಿಧಾನಸಭೆಯಲ್ಲಿ ಗೆಲ್ಲುವ ಅದಮ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ, ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿಯಾಗಿರುವ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್. ಅದಕ್ಕೆ ಪೂರಕವಾಗಿ ಪಕ್ಷ ಅನುಸರಿಸುತ್ತಿರುವ ನಡೆಯನ್ನು ‘ಪ್ರಜಾವಾಣಿ’ ನಡೆಸಿದ ಸಂದರ್ಶನದಲ್ಲಿ ಅವರು ತೆರೆದಿಟ್ಟಿದ್ದಾರೆ.

● ‘ಕೈ’ ಹಿಡಿದ ನೈಸ್ ಮುಖ್ಯಸ್ಥ ಖೇಣಿ
● ಇಂದು ಬಿಜೆಪಿ ಜನಸುರಕ್ಷಾ ಯಾತ್ರೆಯ ಮಹಾಸಂಗಮ
12

## ನಾಯಕನಹಟ್ಟಿ ಜಾತ್ರೆ

ನಾಯಕನಹಟ್ಟಿ: ಮಧ್ಯ ಕರ್ನಾಟಕದ ಪ್ರಸಿದ್ಧ ನಾಯಕನಹಟ್ಟಿ ಗುರು ತಿಪ್ಪೇರುದ್ರಸ್ವಾಮಿ ಜಾತ್ರೆಯಲ್ಲಿ ಸೋಮವಾರ ದೊಡ್ಡ ರಥೋತ್ಸವವು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸಂಭ್ರಮ ಸಡಗರದಿಂದ ನೆರವೇರಿತು.

3C

ಕಾವೇರಿ: 9ರಂದು ಸಭೆ 7

**ಚಿನಕುರಳಿ**

ಪ್ರಕಾಶ್ ಶೆಟ್ಟಿ




### 2008ರಲ್ಲಿ ನಡೆದಿದ್ದ 98 ಮಾರ್ಕೊಪೊಲೊ ಬಸ್ ಖರೀದಿ ಅವ್ಯವಹಾರ

# ಸಿಐಡಿ ಹೆಗಲಿಗೆ ತನಿಖೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಭ್ರಷ್ಟಾಚಾರದ ಕುರಿತು ಭಾರಿ ವಾಕ್ಸಮರ ನಡೆಯುತ್ತಿರುವಾಗಲೇ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ 98 ಮಾರ್ಕೊಪೊಲೊ ಬಸ್‌ಗಳ ಖರೀದಿಗೆ ಸಂಬಂಧಿಸಿದಂತೆ ಸಿಐಡಿ ತನಿಖೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ಈ ಖರೀದಿಯಲ್ಲಿ ಅವ್ಯವಹಾರ ನಡೆದಿದ್ದು, ತನಿಖೆಗಾಗಿ ಸದ್ಯವೇ ಗೃಹ ಇಲಾಖೆ ಅಧಿಸೂಚನೆ ಹೊರಡಿಸಲಿದೆ’ ಎಂದು ಸಾರಿಗೆ ಸಚಿವ ಎಚ್.ಎಂ.ರೇವಣ್ಣ ಸೋಮವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

ಈ ಬಗ್ಗೆ ಸದನ ಸಮಿತಿ ತನಿಖೆ ನಡೆಸಿತ್ತು. ತಾಂತ್ರಿಕವಾಗಿ ಸೂಕ್ತವಲ್ಲದ ಬಸ್ ಖರೀದಿಸಲಾಗಿದೆ ಎಂದು ಸಮಿತಿ ವರದಿ ನೀಡಿತ್ತು. ಇದನ್ನು ಆಧರಿಸಿ ಸಿಐಡಿ ತನಿಖೆ ನಡೆಸಲು ಶಿಫಾರಸು ಮಾಡಲಾಗಿದೆ ಎಂದು ಅವರು ಹೇಳಿದರು.

2008 ರಲ್ಲಿ ಸಾರಿಗೆ ಸಚಿವ ಆರ್. ಅಶೋಕ್ ರಾಜ್ಯೋತ್ಸವ ಕೊಡುಗೆ ಎಂದು ಮಾರ್ಕೊಪೊಲೊ ಬಸ್‌ಗಳನ್ನು ಬೆಂಗಳೂರಿಗೆ ಪರಿಚಯಿಸಿದ್ದರು. ‘ಹವಾ ನಿಯಂತ್ರಿತ ಟಾಟಾ ಮಾರ್ಕೊಪೊಲೊ ಬಸ್‌ಗಳನ್ನು ವೊಲ್ವೊ ಬಸ್ ದರದ ಮೂರನೇ ಒಂದರಷ್ಟು ಅಂದರೆ ಪ್ರತಿ ಬಸ್‌ಗೆ ₹ 30.49 ಲಕ್ಷ ಕೊಟ್ಟು ಖರೀದಿಸುತ್ತಿದ್ದೇವೆ’ ಎಂದು ಆ ಸಂದರ್ಭದಲ್ಲಿ ಅಶೋಕ್ ತಿಳಿಸಿದ್ದರು.

ಜೆನರ್ಮ್(ಜವಾಹರಲಾಲ್ ನೆಹರೂ ನ್ಯಾಷನಲ್ ಅರ್ಬನ್ ರಿನೀವಲ್ ಮಿಷನ್) ಯೋಜನೆಯಡಿ ಬಿಎಂಟಿಸಿಗೆ ಬಸ್ಸುಗಳ ಖರೀದಿಗೆ ಕೇಂದ್ರ ಸರ್ಕಾರ ₹ 16 ಕೋಟಿ ಅನುದಾನ ನೀಡಿತ್ತು. ರಾಜ್ಯ ಸರ್ಕಾರ ₹ 14 ಕೋಟಿ ನೀಡಿತ್ತು.



ಈ ಬಸ್ಸುಗಳ ನಿರ್ವಹಣೆ ಬಗ್ಗೆ ಪ್ರಯಾಣಿಕರು ಮತ್ತು ಚಾಲಕರಿಂದ ಸಾಕಷ್ಟು ದೂರುಗಳು ಬಂದವು. ಅವುಗಳೆಂದರೆ, ಕರ್ಕಶ ಸದ್ದು, ಕಡಿಮೆ ವೇಗ, ಕಳಪೆ ಗುಣಮಟ್ಟದ ಹವಾನಿಯಂತ್ರಿತ ವ್ಯವಸ್ಥೆ, ಪ್ರತಿ ಕಿ.ಮೀಗೆ 1.4 ಲೀಟರ್ ಇಂಧನ ಬಳಕೆ ಮತ್ತು ಅಧಿಕ ಪ್ರಮಾಣದ ಮಾಲಿನ್ಯ.

ವೇಗ ಹೆಚ್ಚಿಸಲು ಬಸ್‌ಗಳಿಂದ ಹವಾನಿಯಂತ್ರಣ ವ್ಯವಸ್ಥೆಯನ್ನು ತೆಗೆದು ಹಾಕಲಾಯಿತು.

4ನೇ ಪುಟ ನೋಡಿ

### ಕೇಂದ್ರ ಸೂಚನೆ ಮೇರೆಗೆ ಖರೀದಿ: ಅಶೋಕ್

‘2008 ರಲ್ಲಿ ಮಾರ್ಕೊಪೊಲೊ ಬಸ್ಸುಗಳ ಖರೀದಿ ಕೇಂದ್ರ ಸರ್ಕಾರದ ಸೂಚನೆ ಮತ್ತು ಟೆಂಡರ್ ಷರತ್ತಿನ ಅನ್ವಯವೇ ಆಗಿತ್ತು. ಇದರಲ್ಲಿ ನಮ್ಮ ಪಾತ್ರ ಇರಲಿಲ್ಲ’ ಎಂದು ಬಿಜೆಪಿ ನಾಯಕ ಆರ್.ಅಶೋಕ್ ‘ಪ್ರಜಾವಾಣಿ’ಗೆ ಹೇಳಿದ್ದಾರೆ.

ಜೆನರ್ಮ್ ಯೋಜನೆಯಡಿ 22 ರಾಜ್ಯಗಳಿಗೆ 2000 ಬಸ್ಸುಗಳನ್ನು ಖರೀದಿ ಮಾಡಲಾಗಿತ್ತು. ಇದಕ್ಕಾಗಿ ಕೇಂದ್ರ ಸಾರಿಗೆ ಇಲಾಖೆ ಜಾಗತಿಕ ಟೆಂಡರ್ ಕರೆದಿತ್ತು. ಯುಪಿಎ ಸರ್ಕಾರವೇ ಟೆಂಡರ್ ಅಂತಿಮಗೊಳಿಸಿ ಟಾಟಾ ಮಾರ್ಕೊಪೊಲೊ ನೀಡಲು ನಿರ್ಧರಿಸಿತು. ಬಸ್ಸುಗಳ ಖರೀದಿ ಪ್ರಕ್ರಿಯೆ ಕೇಂದ್ರ ಸಾರಿಗೆ ಇಲಾಖೆ ನಿರ್ದೇಶನದಂತೆಯೇ ನಡೆದಿದೆ. ಕೇಂದ್ರ ಪಾಲುದಾರಿಕೆಯ ಈ ಯೋಜನೆಯಲ್ಲಿ ರಾಜ್ಯದ ಪಾತ್ರ ಕಡಿಮೆ ಇತ್ತು ಎಂದರು.

ಕೇಂದ್ರ ಸಾರಿಗೆ ಕಾರ್ಯದರ್ಶಿಯವರು ಟಾಟಾ ಕಂಪೆನಿ ಜತೆ ಮಾತುಕತೆ ನಡೆಸಿದ್ದರು. ಎಲ್ಲ ರಾಜ್ಯಗಳಿಗೂ ಮಾರ್ಕೊಪೊಲೊ ಖರೀದಿಸಲು ಸೂಚಿಸಲಾಗಿತ್ತು. 10 ವರ್ಷದ ಹಿಂದಿನ ಖರೀದಿ ಪ್ರಕ್ರಿಯೆಯನ್ನು ಈಗ ಪ್ರಸ್ತಾಪಿಸುವ ಹಿಂದೆ ರಾಜಕೀಯ ದುರುದ್ದೇಶ ಅಡಗಿದೆ ಎಂದು ಅಶೋಕ್ ಹೇಳಿದರು.

# ಕೆಪಿಜೆಪಿಗೆ ನಟ ಉಪೇಂದ್ರ ಬೈ?

### ಟಿಕೆಟ್ ಹಂಚಿಕೆ ವಿಚಾರ: ಪಕ್ಷದ ಸಂಸ್ಥಾಪಕನ ಜೊತೆ ಭಿನ್ನಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ, ಟಿಕೆಟ್ ಹಂಚಿಕೆ ವಿಚಾರದಲ್ಲಿ ಕರ್ನಾಟಕ ಪ್ರಜಾಕೀಯ ಜನತಾ ಪಕ್ಷದ (ಕೆಪಿಜೆಪಿ) ಸಂಸ್ಥಾಪಕ ಮಹೇಶ್ ಗೌಡ ಮತ್ತು ಪಕ್ಷದ ನೇತೃತ್ವ ವಹಿಸಿರುವ ನಟ ಉಪೇಂದ್ರ ಮಧ್ಯೆ ಭಿನ್ನಮತ ಸ್ಫೋಟಗೊಂಡಿದೆ.

ಪಕ್ಷದೊಳಗಿನ ಆಂತರಿಕ ಬೆಳವಣಿಗೆಗೆ ಬೇಸತ್ತಿರುವ ಉಪೇಂದ್ರ, ಪಕ್ಷ ಬಿಡುವ ಬಗ್ಗೆ ನೇರವಾಗಿ ಯಾವುದೇ ಹೇಳಿಕೆ ನೀಡದಿದ್ದರೂ, ‘ಮಂಗಳವಾರದವರೆಗೆ (ಮಾ. 6) ಕಾದು ನೋಡಿ’ ಎಂದು ಟ್ವೀಟ್ ಮಾಡಿದ್ದಾರೆ.



ಉಪೇಂದ್ರ

ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸಹಿ ಮಾಡುವ (ಸೈನಿಂಗ್ ಅಥಾರಿಟಿ) ಅಧಿಕಾರಕ್ಕೆ ಸಂಬಂಧಪಟ್ಟಂತೆ ಮಹೇಶ್ ಗೌಡ ಮತ್ತು ಉಪೇಂದ್ರ ಮಧ್ಯೆ ಭಿನ್ನಮತ ಮೂಡಿದೆ. ಇದರಿಂದಾಗಿ ಪಕ್ಷವೇ ಇಬ್ಭಾಗವಾಗಿದೆ.

ಕೆಪಿಜೆಪಿಯ ಕೋರ್ ಸಮಿತಿಯ 13 ಸದಸ್ಯರ ಪೈಕಿ ಕೆಲವರು ಉಪೇಂದ್ರ ವಿರುದ್ಧ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಉಪೇಂದ್ರ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಿದ್ದರು ಎನ್ನಲಾಗಿದ್ದು, ಇದು ಪದಾಧಿಕಾರಿಗಳ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಗೊತ್ತಾಗಿದೆ.

12ನೇ ಪುಟ ನೋಡಿ

### ಮೊಬೈಲ್ ಸಿಮ್‌ಗಳಿಗೆ ಆಧಾರ್ ಸಂಖ್ಯೆ ಜೋಡಣೆ

# ಗ್ರಾಹಕರಿಗೆ ಪರಿಶೀಲನೆ ಅವಕಾಶ

ನವದೆಹಲಿ (ಪಿಟಿಐ): ಮೊಬೈಲ್ ಗ್ರಾಹಕರು ಇನ್ನು ಮುಂದೆ ತಮ್ಮ ಆಧಾರ್ ಸಂಖ್ಯೆಗೆ ಎಷ್ಟು ‘ಸಿಮ್’ ಜೋಡಣೆಯಾಗಿವೆ ಎಂದು ಒಂದು ಎಸ್‌ಎಂಎಸ್ ಮೂಲಕ ತಿಳಿಯಬಹುದು.

ಸಿಮ್ ಪಡೆಯುವಾಗ ಗ್ರಾಹಕರು ದೃಢೀಕರಣಕ್ಕಾಗಿ ನೀಡುವ ಆಧಾರ್ ಸಂಖ್ಯೆಯನ್ನೇ ಇತರ ಗ್ರಾಹಕರಿಗೂ ಬಳಸುವುದನ್ನು ತಡೆಯಲು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ (ಯುಐಡಿಎಐ) ಈ ಹೊಸ ಆಲೋಚನೆ ಮಾಡಿದೆ.

ಗ್ರಾಹಕರು ತಮ್ಮ ಆಧಾರ್ ಸಂಖ್ಯೆಯೊಂದಿಗೆ ಮೊಬೈಲ್ ‘ಸಿಮ್’ ಜೋಡಣೆಯಾಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಪರಿಶೀಲಿಸಲು ಇದೇ 15ರ ಒಳಗಾಗಿ ಎಸ್‌ಎಂಎಸ್ ಆಧಾರಿತ ಹೊಸ ಸೇವೆ ಒದಗಿಸುವಂತೆ ಎಲ್ಲ ಸೇವಾದಾತ ಕಂಪನಿಗಳಿಗೆ ಪ್ರಾಧಿಕಾರ ಗಡುವು ನೀಡಿದೆ.

ಹೊಸ ಸಿಮ್ ವಿತರಣೆಯ ವೇಳೆ ಬೇರೆ ಗ್ರಾಹಕರ ಆಧಾರ್ ಸಂಖ್ಯೆಯನ್ನು ದೃಢೀಕರಣಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಕೆಲವು ಕಂಪನಿಗಳ ಪ್ರತಿನಿಧಿಗಳು ಮತ್ತು ಮಾರಾಟಗಾರರ ವಿರುದ್ಧ ದೂರು ಕೇಳಿ ಬಂದ ಕಾರಣ ಪ್ರಾಧಿಕಾರ ಈ ನಿರ್ಧಾರ ಮಾಡಿದೆ.





*ಕೊಳೆ, ಗ್ರೀಸ್ ಮತ್ತು ಡ್ಯಾಂಡ್ರಫ್ ಶುದ್ಧೀಕರಣ, ಪ್ರಕ್ರಿಯೆ ಎಪಿಡರ್ಮಲ್ ಮಟ್ಟದಲ್ಲಿ. ನಿಯಮಿತವಾದ ಬಳಕೆಯಿಂದ ಗೋಚರವಾಗುವ ಹೊಟ್ಟುಗಳು ಉಳಿಯದು. ^ಒಂದು ಸ್ವತಂತ್ರ ಏಜನ್ಸಿ ಸೆಪ್ಟೆಂಬರ್-ಅಕ್ಟೋಬರ್ 17 ಅವಧಿಯಲ್ಲಿ ನಡೆಸಿದ ಬಹು ನಗರ ಸರ್ವೆಯ ಆಧಾರದಲ್ಲಿ. ^Based on multi city survey conducted by an independent agency on dandruff sufferers during Sep-Oct 2017.

ಕರ್ನಾಟಕ ಪ್ರಜಾ ಮತ 2018
ಜನತಂತ್ರದ ಹಬ್ಬ
ಪ್ರಜಾವಾಣಿ
ಮಂಗಳವಾರ • ಮಾರ್ಚ್ 6, 2018





### ಎಂ.ಸಿ. ಮೋಹನ ಕುಮಾರಿ
ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಗುಂಡ್ಲುಪೇಟೆ



7.77/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.9 |
| ಕುಡಿಯುವ ನೀರು | 8.8 |
| ವಿದ್ಯುತ್ | 8.8 |
| ರಸ್ತೆ | 7.8 |
| ಶಾಸಕರು ಕೈಗೆ ಸಿಗುತ್ತಾರಾ? | 8.0 |

### ಶಶಿಕಲಾ ಜೊಲ್ಲೆ
ಬಿಜೆಪಿ
ಜಿಲ್ಲೆ: ಬೆಳಗಾವಿ
ಕ್ಷೇತ್ರ: ನಿಪ್ಪಾಣಿ



7.63/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.9 |
| ಕುಡಿಯುವ ನೀರು | 7.0 |
| ವಿದ್ಯುತ್ | 8.5 |
| ರಸ್ತೆ | 9.1 |
| ಶಾಸಕರು ಕೈಗೆ ಸಿಗುತ್ತಾರಾ? | 9.2 |

### ಶಾರದಾ ಮೋಹನ ಶೆಟ್ಟಿ
ಕಾಂಗ್ರೆಸ್
ಜಿಲ್ಲೆ: ಉತ್ತರ ಕನ್ನಡ
ಕ್ಷೇತ್ರ: ಕುಮಟಾ



6.83/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.4 |
| ಕುಡಿಯುವ ನೀರು | 7.4 |
| ವಿದ್ಯುತ್ | 6.9 |
| ರಸ್ತೆ | 7.1 |
| ಶಾಸಕರು ಕೈಗೆ ಸಿಗುತ್ತಾರಾ? | 6.7 |

## ಕೇಳಲಾದ ಪ್ರಶ್ನೆಗಳು

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದಕ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಬೀಜ, ರಸಗೊಬ್ಬರ ಸಬ್ಸಿಡಿ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ

# ಶಾಸಕಿಯರ ಪೈಕಿ ಉಮಾಶ್ರೀ ಮುಂಚೂಣಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭೆಯನ್ನು ಪ್ರತಿನಿಧಿಸುವ ಏಳು ಮಹಿಳೆಯರಲ್ಲಿ ಎಲ್ಲರೂ ಪ್ರಥಮ ದರ್ಜೆಯಲ್ಲೇ ಉತ್ತೀರ್ಣರಾಗಿದ್ದಾರೆ.

ಅವರ ಪೈಕಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ, ತೇರದಾಳ ಕ್ಷೇತ್ರದ ಶಾಸಕಿ ಉಮಾಶ್ರೀ ಅಗ್ರ ಶ್ರೇಯಾಂಕ ಪಡೆದಿದ್ದಾರೆ. ಅಲ್ಲದೆ, 224 ಶಾಸಕರ ಪೈಕಿ ಮೂರನೇ ಸ್ಥಾನವನ್ನು ಗಳಿಸಿದ ಹೆಗ್ಗಳಿಕೆಯನ್ನೂ ಹೊಂದಿದ್ದಾರೆ. ಕುಮಟಾ ಕ್ಷೇತ್ರದ ಕಾಂಗ್ರೆಸ್ ಶಾಸಕಿ ಶಾರದಾ ಮೋಹನ ಶೆಟ್ಟಿ ಕಡಿಮೆ ಅಂಕ ಪಡೆದು, ಪಟ್ಟಿಯ ಕೊನೆಯ ಸಾಲಿನಲ್ಲಿದ್ದಾರೆ.

ಸಣ್ಣ ಕೈಗಾರಿಕೆ ಸಚಿವ ಎಂ.ಸಿ. ಮೋಹನಕುಮಾರಿ 7.77 ಅಂಕ ಪಡೆದು ನಾಲ್ಕನೇ ಸ್ಥಾನದಲ್ಲಿದ್ದಾರೆ. ಒಂದು ವರ್ಷದ ಹಿಂದಷ್ಟೇ ಇವರು ಶಾಸಕಿಯಾಗಿ ಆಯ್ಕೆಯಾಗಿದ್ದಾರೆ. ಅದಕ್ಕೆ ಹಿಂದಿನ ನಾಲ್ಕು ವರ್ಷ ಅವರ ಪತಿ ದಿವಂಗತ ಮಹದೇವ ಪ್ರಸಾದ್ ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದರು.

**ಮುಖ್ಯಾಂಶಗಳು**

- 224 ಶಾಸಕರ ಪೈಕಿ ಉಮಾಶ್ರೀಗೆ 3ನೇ ಸ್ಥಾನ
- ಎಲ್ಲಾ ಕ್ಷೇತ್ರಗಳಲ್ಲಿ ರಾಮಕ್ಕ ಸಾಧನೆ ಉತ್ತಮ
- ಮಹಿಳಾ ಸುರಕ್ಷತೆ: ಜೊಲ್ಲೆಗೆ ಕಡಿಮೆ ಅಂಕ

‘ದಕ್ಷ್’ ನಡೆಸಿದ ಸಮೀಕ್ಷೆಯಲ್ಲಿ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಇದರಲ್ಲಿ ಕಾನೂನು ಮತ್ತು ಸುವ್ಯವಸ್ಥೆ, ಉದ್ಯೋಗ ಮತ್ತು ತರಬೇತಿ, ಮೂಲಸೌಲಭ್ಯ ಕಲ್ಪಿಸುವ ವಿಷಯದಲ್ಲಿ ಆದ್ಯತೆ, ಆಸ್ಪತ್ರೆ ಸೌಕರ್ಯ, ಶಾಸಕರ ವಿಶ್ವಾಸಾರ್ಹತೆ, ಲಭ್ಯತೆ ಮತ್ತಿತರ ಸಂಗತಿಗಳ ಕುರಿತು ಪ್ರಸ್ತಾಪಿಸಲಾಗಿತ್ತು. ಅವೆಲ್ಲವುಗಳನ್ನೂ ಕೂಡಿಸಿ, ಸರಾಸರಿ ಅಂಕಗಳನ್ನು ನೀಡಲಾಗಿದೆ.



ಉಮಾಶ್ರೀ

ಮೊದಲ ಶ್ರೇಣಿಯಲ್ಲಿರುವ ಉಮಾಶ್ರೀ ಈ ಎಲ್ಲ ಕ್ಷೇತ್ರಗಳಲ್ಲಿ ಸರಾಸರಿ 7ರಿಂದ 9 ಅಂಕ ಪಡೆದಿದ್ದಾರೆ. ಸಮೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಿರುವ ಶಾರದಾ ಶೆಟ್ಟಿ, ಪ್ರಮುಖ ಕ್ಷೇತ್ರಗಳಲ್ಲಿ 6.4ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ಆದರೆ ಉಳಿದ 23 ಕ್ಷೇತ್ರಗಳಲ್ಲಿ 3ರಿಂದ 4 ಅಂಕ ಗಿಟ್ಟಿಸಿದ್ದಾರೆ. ಹೀಗಾಗಿ ಅವರು ಕೊನೆಯ ಸ್ಥಾನಕ್ಕೆ ಹೋಗಿದ್ದಾರೆ.

ಮೊದಲ ಬಾರಿಗೆ ಶಾಸಕಿಯಾಗಿರುವ ಕೆಜಿಎಫ್ ಕ್ಷೇತ್ರದ ಬಿಜೆಪಿಯ ವೈ.ರಾಮಕ್ಕ ಎರಡನೇ ಸ್ಥಾನದಲ್ಲಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ಅವರ ಸಾಧನೆ 8.3 ಅಂಕವನ್ನು ದಾಟಿರುವುದು ವಿಶೇಷ.

ಮಹಿಳೆಯರ ಪೈಕಿ ಶಾಸಕಿಯಾಗಿ ಹೊಂದಿರುವ ಅನುಭವದಲ್ಲಿ ಹಿರೀಕರಾಗಿರುವ ಶಕುಂತಳಾ ಶೆಟ್ಟಿ ಮೂರನೇ ಸ್ಥಾನದಲ್ಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸರಾಸರಿ 7.9 ಅಂಕ ಪಡೆದಿದ್ದರೂ ನಗರ ಪ್ರದೇಶದಲ್ಲಿ ಇವರ ಅಂಕ ಗಳಿಕೆ ಪ್ರಮಾಣ 9 ದಾಟಿದೆ. ಆದರೆ, ಸರಾಸರಿ ಲೆಕ್ಕದಲ್ಲಿ ಕಡಿಮೆಯಾಗಿದೆ.

ನಿಪ್ಪಾಣಿ ಕ್ಷೇತ್ರದ ಬಿಜೆಪಿ ಶಾಸಕಿ ಶಶಿಕಲಾ ಜೊಲ್ಲೆ 7.63 ಅಂಕ ಪಡೆದಿದ್ದಾರೆ. ಆದ್ಯತಾ ಕ್ಷೇತ್ರಗಳಲ್ಲಿ ಸರಾಸರಿ 8 ಅಂಕ ಪಡೆದಿದ್ದಾರೆ. ಆದರೆ, ಕೆಲವು ವಿಷಯಗಳಲ್ಲಿ 6ಕ್ಕೆ ಇಳಿದಿದ್ದಾರೆ.

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಜೆಡಿಎಸ್ ಶಾಸಕಿ ಶಾರದಾ ಪೂರ್ಯಾನಾಯ್ಕ ಬಿಜೆಪಿಯ ಶಶಿಕಲಾ ಅವರನ್ನು ಒಟ್ಟಾರೆ ಅಂಕಗಳಲ್ಲಿ ಹಿಂದಿಕ್ಕಿದ್ದಾರೆ. ಆದರೆ, 22 ಕ್ಷೇತ್ರಗಳಲ್ಲಿ ಅವರ ಸರಾಸರಿ ಅಂಕ 6.9ರಷ್ಟಿದೆ.

## ಮಹಿಳಾ ಸುರಕ್ಷೆ



ಮಹಿಳಾ ಸುರಕ್ಷತೆಗೆ ಶಾಸಕರು ಎಷ್ಟು ಆದ್ಯತೆ ನೀಡಿದ್ದಾರೆ ಎಂಬ ಪ್ರಶ್ನೆಯನ್ನೂ ಸಮೀಕ್ಷೆಯಲ್ಲಿ ಕೇಳಲಾಗಿತ್ತು. ನಗರ ಪ್ರದೇಶದ ಮತದಾರರು ಉಮಾಶ್ರೀಗೆ 10 ಅಂಕ ಕೊಟ್ಟಿದ್ದರೆ, ಗ್ರಾಮೀಣ ಮತದಾರರು 7.9 ಅಂಕ ಕೊಟ್ಟಿದ್ದಾರೆ. ಮೋಹನ ಕುಮಾರಿ ಅವರಿಗೆ 9.6 ಅಂಕ ಸಿಕ್ಕಿದೆ. ಬಹುತೇಕರು ಸರಾಸರಿ 7.8ರಿಂದ 8.3 ಅಂಕ ಪಡೆದಿದ್ದಾರೆ. ಆದರೆ, ಶಶಿಕಲಾ ಜೊಲ್ಲೆ ಮಾತ್ರ ಈ ವಿಷಯದಲ್ಲಿ ಅತ್ಯಂತ ಕಡಿಮೆ ಎಂದರೆ 3.8 ಅಂಕ ಗಳಿಸಿದ್ದಾರೆ.

ಮಹಿಳೆಯರು ಶೌಚಾಲಯದ ವಿಷಯದಲ್ಲಿ ಅನುಭವಿಸುವಷ್ಟು ಯಾತನೆಯನ್ನು ಬೇರೆ ಯಾರೂ ಅನುಭವಿಸಲಾರರು. ಈ ವಿಷಯದಲ್ಲಿ ಜನಪ್ರತಿನಿಧಿಗಳ ಆದ್ಯತೆ ಎಷ್ಟಿದೆ ಎಂಬ ಪ್ರಶ್ನೆಗೆ ಉಮಾಶ್ರೀ ಹಾಗೂ ಶಾರದಾ ಪೂರ್ಯಾನಾಯ್ಕ 10 ಅಂಕ ಗಿಟ್ಟಿಸಿದ್ದಾರೆ. ಉಳಿದವರು 7.9 ಅಂಕ ಪಡೆದಿದ್ದಾರೆ. ಆರೋಗ್ಯ ಸೇವೆ ವಿಷಯದಲ್ಲಿ ಶಾರದಾ ಶೆಟ್ಟಿ ಬಿಟ್ಟರೆ ಉಳಿದವರು ಸರಾಸರಿ 7.5 ಅಂಕ ಗಳಿಸಿದ್ದಾರೆ.

### ಎಚ್.ಕೆ. ಪಾಟೀಲ
ಕಾಂಗ್ರೆಸ್
ಜಿಲ್ಲೆ: ಗದಗ
ಕ್ಷೇತ್ರ: ಗದಗ



8.19/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.00 |
| ಕುಡಿಯುವ ನೀರು | 7.4 |
| ವಿದ್ಯುತ್ | 7.9 |
| ರಸ್ತೆ | 7.5 |
| ಶಾಸಕರು ಕೈಗೆ ಸಿಗುತ್ತಾರಾ? | 7.3 |

### ಎಂ.ಬಿ. ಪಾಟೀಲ
ಕಾಂಗ್ರೆಸ್
ಜಿಲ್ಲೆ: ವಿಜಯಪುರ
ಕ್ಷೇತ್ರ: ಬಬಲೇಶ್ವರ



6.16/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 10 |
| ಕುಡಿಯುವ ನೀರು | 4.4 |
| ವಿದ್ಯುತ್ | 10 |
| ರಸ್ತೆ | 3.7 |
| ಶಾಸಕರು ಕೈಗೆ ಸಿಗುತ್ತಾರಾ? | 6.4 |

### ಎಸ್.ಎಸ್. ಮಲ್ಲಿಕಾರ್ಜುನ
ಕಾಂಗ್ರೆಸ್
ಜಿಲ್ಲೆ: ದಾವಣಗೆರೆ
ಕ್ಷೇತ್ರ: ದಾವಣಗೆರೆ ಉತ್ತರ



6.46/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.8 |
| ಕುಡಿಯುವ ನೀರು | 9.8 |
| ವಿದ್ಯುತ್ | 8.5 |
| ರಸ್ತೆ | 4.6 |
| ಶಾಸಕರು ಕೈಗೆ ಸಿಗುತ್ತಾರಾ? | 6.8 |

### ತನ್ವೀರ್ ಸೇಠ್
ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ನರಸಿಂಹರಾಜ



7.09/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.5 |
| ಕುಡಿಯುವ ನೀರು | 9.5 |
| ವಿದ್ಯುತ್ | 7.7 |
| ರಸ್ತೆ | 8 |
| ಶಾಸಕರು ಕೈಗೆ ಸಿಗುತ್ತಾರಾ? | 7.1 |

### ಪ್ರಿಯಾಂಕ್ ಎಂ ಖರ್ಗೆ
ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಚಿತ್ತಾಪುರ



8.01/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.2 |
| ಕುಡಿಯುವ ನೀರು | 9.6 |
| ವಿದ್ಯುತ್ | 7.2 |
| ರಸ್ತೆ | 9.8 |
| ಶಾಸಕರು ಕೈಗೆ ಸಿಗುತ್ತಾರಾ? | 6.8 |

### ದಿನೇಶ್ ಗುಂಡೂರಾವ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಗಾಂಧಿನಗರ



6.80/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.8 |
| ಕುಡಿಯುವ ನೀರು | 6.8 |
| ವಿದ್ಯುತ್ | 6.9 |
| ರಸ್ತೆ | 6.7 |
| ಶಾಸಕರು ಕೈಗೆ ಸಿಗುತ್ತಾರಾ? | 6.8 |

### ಯು.ಟಿ. ಖಾದರ್
ಕಾಂಗ್ರೆಸ್
ಜಿಲ್ಲೆ: ದಕ್ಷಿಣ ಕನ್ನಡ
ಕ್ಷೇತ್ರ: ಮಂಗಳೂರು



7.42/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.5 |
| ಕುಡಿಯುವ ನೀರು | 7.8 |
| ವಿದ್ಯುತ್ | 7.5 |
| ರಸ್ತೆ | 8.0 |
| ಶಾಸಕರು ಕೈಗೆ ಸಿಗುತ್ತಾರಾ? | 8.1 |

### ಕೃಷ್ಣ ಬೈರೇಗೌಡ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಬ್ಯಾಟರಾಯನಪುರ



5.77/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.1 |
| ಕುಡಿಯುವ ನೀರು | 6.2 |
| ವಿದ್ಯುತ್ | 6.9 |
| ರಸ್ತೆ | 6.8 |
| ಶಾಸಕರು ಕೈಗೆ ಸಿಗುತ್ತಾರಾ? | 5.3 |

### ವಿಜಯಾನಂದ ಕಾಶಪ್ಪನವರ
ಕಾಂಗ್ರೆಸ್
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ಹುನಗುಂದ



7.68/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.6 |
| ಕುಡಿಯುವ ನೀರು | 8.9 |
| ವಿದ್ಯುತ್ | 8.6 |
| ರಸ್ತೆ | 8.5 |
| ಶಾಸಕರು ಕೈಗೆ ಸಿಗುತ್ತಾರಾ? | 9.2 |

### ಅಜಯ್ ಸಿಂಗ್
ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಜೇವರ್ಗಿ



5.54/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 5.4 |
| ಕುಡಿಯುವ ನೀರು | 6 |
| ವಿದ್ಯುತ್ | 5.8 |
| ರಸ್ತೆ | 5.7 |
| ಶಾಸಕರು ಕೈಗೆ ಸಿಗುತ್ತಾರಾ? | 5.5 |

ರಾಜಕೀಯ ಧುರೀಣರ ಮಕ್ಕಳ ಸಾಧನೆ ಅಷ್ಟೇನೂ ಉತ್ತಮವಾಗಿಲ್ಲ

# ‘ದೊಡ್ಡ’ವರೆಲ್ಲ ಜಾಣರೇ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಕಾರಣವನ್ನೇ ಉಟ್ಟುಂಡು ಬೆಳೆದಿರುವ ಕುಟುಂಬಕ್ಕೆ ಸೇರಿದ ಶಾಸಕರು ತಮ್ಮ ಕ್ಷೇತ್ರದ ಮತದಾರರ ಅಭಿಲಾಷೆ, ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿದ್ದಾರೆಯೇ, ಮಾಡುತ್ತಿದ್ದಾರೆಯೇ?

ಸಮೀಕ್ಷೆಯಲ್ಲಿ ಇಂತಹದೊಂದು ಪ್ರಶ್ನೆ ಇರಲಿಲ್ಲವಾದರೂ ದತ್ತಾಂಶ ಆಧರಿಸಿ ವಿಶ್ಲೇಷಣೆಗೆ ಗುರಿಪಡಿಸಿದಾಗ ‘ದೊಡ್ಡ’ವರ ಮಕ್ಕಳೆಲ್ಲ ದೊಡ್ಡ ಮಟ್ಟದ ಸಾಧನೆ ಮಾಡದೇ ಇರುವುದು ಪತ್ತೆಯಾಗಿದೆ.

ಎರಡು ತಲೆಮಾರುಗಳಿಂದ ರಾಜಕಾರಣದಲ್ಲಿರುವ ಕುಟುಂಬಕ್ಕೆ ಸೇರಿದವರು, ಮುಖ್ಯಮಂತ್ರಿಯಾಗಿದ್ದವರ ಮಕ್ಕಳು ತಾವು ಪ್ರತಿನಿಧಿಸುವ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ ಎಷ್ಟು ಅಂಕ ಪಡೆದಿದ್ದಾರೆ ಎಂದು ಹುಡುಕಿದರೆ ಅಚ್ಚರಿಯ ಫಲಿತಾಂಶ ಕಾಣಿಸುತ್ತದೆ. ಮಾಜಿ ಮುಖ್ಯಮಂತ್ರಿಗಳ ಪುತ್ರರ ಪೈಕಿ ಶಿಗ್ಗಾವಿ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಮಾತ್ರ 10 ಅಂಕಗಳಿಗೆ 7.67 ಅಂಕ ಪಡೆದಿದ್ದಾರೆ.

‘ನವ ಕರ್ನಾಟಕ ನಿರ್ಮಾಣ’ದ ಕನಸು ಬಿತ್ತುತ್ತಾ ಹೋಗುತ್ತಿರುವ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದವರು. ಅವರ ಪುತ್ರ ಬಿ.ವೈ. ರಾಘವೇಂದ್ರ 2014ರಿಂದ ಶಿಕಾರಿಪುರ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಅವರು ಪಡೆದಿರುವ ಅಂಕ 7ನ್ನೂ ದಾಟಿಲ್ಲ. ಈ ಕ್ಷೇತ್ರಕ್ಕೆ ಅಂಟಿಕೊಂಡಿರುವ ಸೊರಬ ಕ್ಷೇತ್ರ ಪ್ರತಿನಿಧಿಸುವ, ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಪುತ್ರರೂ ಆದ ಮಧು ಕೂಡ ಅದೇ ಆಸುಪಾಸಿನ ಸಾಧನೆ ಮಾಡಿದ್ದಾರೆ. ಆದರೆ, ರಾಘವೇಂದ್ರಗಿಂತ ಮುಂದಿದ್ದಾರೆ.

ಮಾಜಿ ಮುಖ್ಯಮಂತ್ರಿ ದಿವಂಗತ ಗುಂಡೂರಾವ್ ಪುತ್ರ, ಸದ್ಯ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ದಿನೇಶ್ ಗುಂಡೂರಾವ್ ಏಳರ ಸಮೀಪದಲ್ಲಿದ್ದಾರೆ. ದಶಕಗಳ ಕಾಲ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ, ಮಾಜಿ ಮುಖ್ಯಮಂತ್ರಿ ದಿವಂಗತ ಧರ್ಮಸಿಂಗ್ ಅವರ ಪುತ್ರ ಅಜಯ್ ಸಿಂಗ್, ಈ ಯಾದಿಯಲ್ಲಿ ಅತ್ಯಂತ ಕಡಿಮೆ ಅಂಕ ಪಡೆದಿದ್ದಾರೆ.

ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿ ದೇವೇಗೌಡರ ಮಗ ಎಚ್.ಡಿ. ರೇವಣ್ಣ ತಮ್ಮ ಕ್ಷೇತ್ರದಿಂದ ಎಂದೂ ಆಚೆಗೆ ನೋಡದ, ಹಾಸನ ಬಿಟ್ಟು ಬೇರೆ ವಿಷಯದಲ್ಲಿ ತಲೆಯನ್ನೇ ಕೆಡಿಸಿಕೊಳ್ಳದವರು. ಒಂದು ದಶಕಗಳ ಕಾಲ ಸಚಿವರೂ ಆಗಿದ್ದವರು. ಹಾಗಿದ್ದರೂ ಅವರು ಪಡೆದ ಅಂಕ 7ರ ಗಡಿಯನ್ನು ತಲುಪಿಲ್ಲ.

## ಎಚ್.ಕೆ. ಪಾಟೀಲರೇ ಉತ್ತಮ

ಹುಲಕೋಟಿ ರಾಜಕಾರಣ ಕುಟುಂಬದ ಕುಡಿಯಾಗಿರುವ, ಹಾಲಿ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ ಮಾತ್ರ ‘ದೊಡ್ಡ’ವರ ಮಕ್ಕಳ ಸಾಲಿನಲ್ಲಿರುವ ಹಿರೀಕರು. ಸಮೀಕ್ಷೆಯಲ್ಲಿ 10ಕ್ಕೆ ಅವರು ಪಡೆದಿರುವ ಅಂಕ ಕೂಡ 8.19.

ಸುದೀರ್ಘ ಅವಧಿಯಿಂದ ರಾಜಕಾರಣದಲ್ಲಿರುವ, ಸದ್ಯ ಲೋಕಸಭೆಯ ಕಾಂಗ್ರೆಸ್ ಸಂಸದೀಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಪ್ರಸ್ತುತ ಪ್ರವಾಸೋದ್ಯಮ ಸಚಿವ. ಕ್ಷೇತ್ರದ ಮತದಾರರು ಇವರಿಗೆ 8.01 ಅಂಕ ನೀಡಿದ್ದಾರೆ.

ಅದೇ ಮಾದರಿಯ ಮತ್ತೊಂದು ಕುಟುಂಬವಾದ ಬಿ.ಎಂ. ಪಾಟೀಲ ಪರಂಪರೆಗೆ ಸೇರಿರುವ, ಹಾಲಿ ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲರು ನೀರಾವರಿ ಕ್ಷೇತ್ರದಲ್ಲಿ ಮಹತ್ಸಾಧನೆ ಮಾಡಿದ್ದಾಗಿ ಹೇಳಿಕೊಳ್ಳುತ್ತಿದ್ದಾರೆ. ತಮ್ಮ ಸ್ವಕ್ಷೇತ್ರ ಬಬಲೇಶ್ವರಕ್ಕೆ ಸಾಕಷ್ಟು ಅನುದಾನವನ್ನೂ ನೀಡಿದ್ದಾರೆ. ಆದರೆ, ಮತದಾರರು ಮಾತ್ರ ಇವರಿಗೆ ಕೊಟ್ಟಿರುವ ಅಂಕ 6.16.

ದಶಕಗಳಿಂದ ಕಾಂಗ್ರೆಸ್ ಅನ್ನು ಪರೋಕ್ಷವಾಗಿ ‘ಆಳಿದ’ ದಾವಣಗೆರೆಯ ಶಾಮನೂರು ಶಿವಶಂಕರಪ್ಪ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ ಈಗ ತೋಟಗಾರಿಕೆ ಸಚಿವ. ಎರಡನೇ ಅವಧಿಯಲ್ಲಿ ಅವರು ಸಚಿವರಾಗಿದ್ದಾರೆ. ಕ್ಷೇತ್ರದ ವಿಷಯದಲ್ಲಿ ಅವರದ್ದು ನಿರಾಸಕ್ತಿ ಎಂಬುದನ್ನು ಮತದಾರರು ತೋರಿಸಿದ್ದಾರೆ. ಮೊದಲ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರಾದರೂ ಪಡೆದ ಅಂಕ ಏಳನ್ನೂ ತಲುಪಿಲ್ಲ.

ದಕ್ಷ ಆಡಳಿತಕ್ಕೆ ಹೆಸರಾಗಿದ್ದ ದಿವಂಗತ ಬೈರೇಗೌಡರ ಪುತ್ರ ಕೃಷ್ಣ ಬೈರೇಗೌಡ ಈಗ ಕೃಷಿ ಸಚಿವ. ಬೆಂಗಳೂರಿನ ಬ್ಯಾಟರಾಯನಪುರ ಶಾಸಕರಾಗಿರುವ ಇವರು ಪಡೆದಿರುವ ಅಂಕ ಆರನ್ನೂ ಮುಟ್ಟಿಲ್ಲ.

ಮುತ್ಸದ್ದಿ ರಾಜಕಾರಣಿ ಎಂದೇ ಹೆಸರಾಗಿದ್ದ ಎಂ.ಪಿ. ಪ್ರಕಾಶ್ ಹಾಗೂ ಅಜೀಜ್ ಸೇಠ್ ರಾಜ್ಯ ರಾಜಕಾರಣದಲ್ಲಿ ಮರೆಯಲಾಗದ ಹೆಸರು. ಸೇಠ್ ಪುತ್ರ ತನ್ವೀರ್ ಸೇಠ್ ಈಗ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ. ಮೈಸೂರಿನ ನರಸಿಂಹರಾಜ ಕ್ಷೇತ್ರ ಪ್ರತಿನಿಧಿಸುವ ಸೇಠ್ 7.09 ಅಂಕ ಪಡೆದಿದ್ದಾರೆ. ಪ್ರಕಾಶ್ ಅವರ ಪುತ್ರ, ಹರಪನಹಳ್ಳಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಂ.ಪಿ.ರವೀಂದ್ರ ತಮ್ಮ ಸರೀಕ ರಾಜಕಾರಣಿಗಳ ಪೈಕಿ ಅತ್ಯಂತ ಕಡಿಮೆ ಎಂದರೆ 5.02 ಅಂಕ ಗಿಟ್ಟಿಸಿದ್ದಾರೆ.

ಅತ್ಯಂತ ಕಿರಿಯ ಶಾಸಕರಲ್ಲಿ ಒಬ್ಬರು ಎಂಬ ಹೆಗ್ಗಳಿಕೆ ಹೊಂದಿ, ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾದವರು ಗೋವಿಂದರಾಜ ನಗರ ಕ್ಷೇತ್ರದ ಪ್ರಿಯಕೃಷ್ಣ. ಇವರ ತಂದೆ ಎಂ. ಕೃಷ್ಣಪ್ಪ ಸುದೀರ್ಘ ಅವಧಿಯಿಂದ ರಾಜಕಾರಣದಲ್ಲಿದ್ದು, ಸದ್ಯ ವಸತಿ ಸಚಿವ. ಕಿರಿತನಕ್ಕೆ ತಕ್ಕಂತೆ ಹೆಚ್ಚು ಉತ್ಸಾಹದಿಂದ ಅವರು ಕೆಲಸ ಮಾಡುವ ನಿರೀಕ್ಷೆಯಿತ್ತು. ಆದರೆ, ಮತದಾರರು ಇವರಿಗೆ ನೀಡಿರುವ ಅಂಕ 5.29. ಕಡಿಮೆ ಅಂಕ ಪಟ್ಟಿ ಪಡೆದಿರುವವರ ಪೈಕಿ ಇವರೂ ಒಬ್ಬರು.



### ರಾಜಶೇಖರ ಪಾಟೀಲ
ಕಾಂಗ್ರೆಸ್
ಜಿಲ್ಲೆ: ಬೀದರ್
ಕ್ಷೇತ್ರ: ಹುಮನಾಬಾದ್



7.26/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.9 |
| ಕುಡಿಯುವ ನೀರು | 7.2 |
| ವಿದ್ಯುತ್ | 7.2 |
| ರಸ್ತೆ | 7.1 |
| ಶಾಸಕರು ಕೈಗೆ ಸಿಗುತ್ತಾರಾ? | 7.2 |

### ರಾಜ ವೆಂಕಟಪ್ಪ ನಾಯಕ
ಕಾಂಗ್ರೆಸ್
ಜಿಲ್ಲೆ: ಯಾದಗಿರಿ
ಕ್ಷೇತ್ರ: ಸುರಪುರ



6.80/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.7 |
| ಕುಡಿಯುವ ನೀರು | 7.5 |
| ವಿದ್ಯುತ್ | 6.7 |
| ರಸ್ತೆ | 6.7 |
| ಶಾಸಕರು ಕೈಗೆ ಸಿಗುತ್ತಾರಾ? | 6.2 |

### ಗಣೇಶ್ ಪ್ರಕಾಶ್ ಹುಕ್ಕೇರಿ
ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಚಿಕ್ಕೋಡಿ–ಸದಲಗಾ



7.46/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.6 |
| ಕುಡಿಯುವ ನೀರು | 7.8 |
| ವಿದ್ಯುತ್ | 8.8 |
| ರಸ್ತೆ | 7.6 |
| ಶಾಸಕರು ಕೈಗೆ ಸಿಗುತ್ತಾರಾ? | 9.9 |

### ಎಂ.ಪಿ. ರವೀಂದ್ರ
ಕಾಂಗ್ರೆಸ್
ಜಿಲ್ಲೆ: ದಾವಣಗೆರೆ
ಕ್ಷೇತ್ರ: ಹರಪನಹಳ್ಳಿ



5.02/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 4.9 |
| ಕುಡಿಯುವ ನೀರು | 4.7 |
| ವಿದ್ಯುತ್ | 5.3 |
| ರಸ್ತೆ | 5.6 |
| ಶಾಸಕರು ಕೈಗೆ ಸಿಗುತ್ತಾರಾ? | 6.3 |

### ಪ್ರಿಯ ಕೃಷ್ಣ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ಜಿಲ್ಲೆ
ಕ್ಷೇತ್ರ: ಗೋವಿಂದರಾಜನಗರ



5.29/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6 |
| ಕುಡಿಯುವ ನೀರು | 5.7 |
| ವಿದ್ಯುತ್ | 6.1 |
| ರಸ್ತೆ | 6.3 |
| ಶಾಸಕರು ಕೈಗೆ ಸಿಗುತ್ತಾರಾ? | 6.1 |

### ಬಸವರಾಜ ಬೊಮ್ಮಾಯಿ
ಬಿಜೆಪಿ
ಜಿಲ್ಲೆ: ಹಾವೇರಿ
ಕ್ಷೇತ್ರ: ಶಿಗ್ಗಾವಿ



7.67/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.3 |
| ಕುಡಿಯುವ ನೀರು | 8.3 |
| ವಿದ್ಯುತ್ | 8.9 |
| ರಸ್ತೆ | 9.4 |
| ಶಾಸಕರು ಕೈಗೆ ಸಿಗುತ್ತಾರಾ? | 7.8 |

### ಅರವಿಂದ ಚಂದ್ರಕಾಂತ ಬೆಲ್ಲದ
ಬಿಜೆಪಿ
ಜಿಲ್ಲೆ: ಧಾರವಾಡ
ಕ್ಷೇತ್ರ: ಹುಬ್ಬಳ್ಳಿ-ಧಾರವಾಡ ಪಶ್ಚಿಮ



7.79/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.5 |
| ಕುಡಿಯುವ ನೀರು | 8.2 |
| ವಿದ್ಯುತ್ | 8.8 |
| ರಸ್ತೆ | 7.7 |
| ಶಾಸಕರು ಕೈಗೆ ಸಿಗುತ್ತಾರಾ? | 7.5 |

### ಯು.ಬಿ. ಬಣಕಾರ
ಬಿಜೆಪಿ
ಜಿಲ್ಲೆ: ಹಾವೇರಿ
ಕ್ಷೇತ್ರ: ಹಿರೇಕೆರೂರು



7.26/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.1 |
| ಕುಡಿಯುವ ನೀರು | 7.5 |
| ವಿದ್ಯುತ್ | 6.8 |
| ರಸ್ತೆ | 8 |
| ಶಾಸಕರು ಕೈಗೆ ಸಿಗುತ್ತಾರಾ? | 7 |

### ಬಿ.ವೈ. ರಾಘವೇಂದ್ರ
ಬಿಜೆಪಿ
ಜಿಲ್ಲೆ: ಶಿವಮೊಗ್ಗ
ಕ್ಷೇತ್ರ: ಶಿಕಾರಿಪುರ



6.59/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.7 |
| ಕುಡಿಯುವ ನೀರು | 6.3 |
| ವಿದ್ಯುತ್ | 6.3 |
| ರಸ್ತೆ | 6.9 |
| ಶಾಸಕರು ಕೈಗೆ ಸಿಗುತ್ತಾರಾ? | 6.7 |

### ದತ್ತಾತ್ರೇಯ ಪಾಟೀಲ ರೇವೂರ
ಬಿಜೆಪಿ
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಕಲಬುರ್ಗಿ ದಕ್ಷಿಣ



7.89/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.9 |
| ಕುಡಿಯುವ ನೀರು | 8.2 |
| ವಿದ್ಯುತ್ | 8.1 |
| ರಸ್ತೆ | 7.7 |
| ಶಾಸಕರು ಕೈಗೆ ಸಿಗುತ್ತಾರಾ? | 7 |

### ಎಚ್.ಡಿ. ರೇವಣ್ಣ
ಜೆಡಿಎಸ್
ಜಿಲ್ಲೆ: ಹಾಸನ
ಕ್ಷೇತ್ರ: ಹೊಳೆನರಸೀಪುರ



6.96/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.9 |
| ಕುಡಿಯುವ ನೀರು | 7.2 |
| ವಿದ್ಯುತ್ | 6.3 |
| ರಸ್ತೆ | 7.1 |
| ಶಾಸಕರು ಕೈಗೆ ಸಿಗುತ್ತಾರಾ? | 7.8 |

### ಮಧು ಬಂಗಾರಪ್ಪ
ಜೆಡಿಎಸ್
ಜಿಲ್ಲೆ: ಶಿವಮೊಗ್ಗ
ಕ್ಷೇತ್ರ: ಸೊರಬ



6.77/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.1 |
| ಕುಡಿಯುವ ನೀರು | 6.2 |
| ವಿದ್ಯುತ್ | 7.0 |
| ರಸ್ತೆ | 7.7 |
| ಶಾಸಕರು ಕೈಗೆ ಸಿಗುತ್ತಾರಾ? | 6.7 |



### ಟಿ.ಬಿ. ಜಯಚಂದ್ರ
ಕಾಂಗ್ರೆಸ್
ಜಿಲ್ಲೆ: ತುಮಕೂರು
ಕ್ಷೇತ್ರ: ಸಿರಾ



8.19/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 8.89 |
| ಕುಡಿಯುವ ನೀರು | 8.33 |
| ವಿದ್ಯುತ್ | 7.78 |
| ರಸ್ತೆ | 8.89 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ರಾಮಲಿಂಗಾ ರೆಡ್ಡಿ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಬಿಟಿಎಂ ಲೇಔಟ್



5.7/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.61 |
| ಕುಡಿಯುವ ನೀರು | 6.67 |
| ವಿದ್ಯುತ್ | 6.57 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 4.89 |

### ಬಿ. ರಮಾನಾಥ ರೈ
ಕಾಂಗ್ರೆಸ್
ಜಿಲ್ಲೆ: ದಕ್ಷಿಣ ಕನ್ನಡ
ಕ್ಷೇತ್ರ: ಬಂಟ್ವಾಳ



7.43/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 8.85 |
| ಕುಡಿಯುವ ನೀರು | 7.92 |
| ವಿದ್ಯುತ್ | 8.02 |
| ರಸ್ತೆ | 8.85 |
| ಶಾಸಕರು ಕೈಗೆ ಸಿಗುತ್ತಾರಾ? | 9.06 |

### ಡಾ. ಎಚ್.ಸಿ. ಮಹದೇವಪ್ಪ
ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಟಿ.ನರಸೀಪುರ



6.54/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 8.75 |
| ಕುಡಿಯುವ ನೀರು | 9.17 |
| ವಿದ್ಯುತ್ | 8.5 |
| ರಸ್ತೆ | 8.42 |
| ಶಾಸಕರು ಕೈಗೆ ಸಿಗುತ್ತಾರಾ? | 8.5 |

### ಕೆ.ಜೆ. ಜಾರ್ಜ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಸರ್ವಜ್ಞ ನಗರ



7.9/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 8.06 |
| ಕುಡಿಯುವ ನೀರು | 8.06 |
| ವಿದ್ಯುತ್ | 8.67 |
| ರಸ್ತೆ | 8.18 |
| ಶಾಸಕರು ಕೈಗೆ ಸಿಗುತ್ತಾರಾ? | 7.72 |

### ಎಚ್. ಆಂಜನೇಯ
ಕಾಂಗ್ರೆಸ್
ಜಿಲ್ಲೆ: ಚಿತ್ರದುರ್ಗ
ಕ್ಷೇತ್ರ: ಹೊಳಲ್ಕೆರೆ



6.92/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.78 |
| ಕುಡಿಯುವ ನೀರು | 7.11 |
| ವಿದ್ಯುತ್ | 6.78 |
| ರಸ್ತೆ | 6.78 |
| ಶಾಸಕರು ಕೈಗೆ ಸಿಗುತ್ತಾರಾ? | 7.56 |

### ರೋಷನ್ ಬೇಗ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಶಿವಾಜಿನಗರ



6.70/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.89 |
| ಕುಡಿಯುವ ನೀರು | 6.61 |
| ವಿದ್ಯುತ್ | 6.94 |
| ರಸ್ತೆ | 6.89 |
| ಶಾಸಕರು ಕೈಗೆ ಸಿಗುತ್ತಾರಾ? | 6.72 |

### ಡಿ.ಕೆ. ಶಿವಕುಮಾರ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ಗ್ರಾಮಾಂತರ
ಕ್ಷೇತ್ರ: ಕನಕಪುರ



6.66/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.7 |
| ಕುಡಿಯುವ ನೀರು | 6.6 |
| ವಿದ್ಯುತ್ | 6.5 |
| ರಸ್ತೆ | 6.9 |
| ಶಾಸಕರು ಕೈಗೆ ಸಿಗುತ್ತಾರಾ? | 4.7 |

## ಕೇಳಲಾದ ಪ್ರಶ್ನೆಗಳು

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದಕ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಬೀಜ, ರಸಗೊಬ್ಬರ ಸಬ್ಸಿಡಿ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ

### ಅಂಕ 'ಗಣಿತ'

'ದಕ್ಷ' ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

# ಮತ ಕ್ಷೇತ್ರ: ಸಚಿವರ ಪಾತ್ರ?

## ಎಂಟು ಅಂಕ ಪಡೆದವರ ಯಾದಿಯಲ್ಲಿ ಏಳು ಸಚಿವರು...

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿ ಜನಪ್ರಿಯ, ಜನಪರ ಕಾರ್ಯಕ್ರಮಗಳನ್ನು ರೂಪಿಸಿದವರು ಅನೇಕರಿದ್ದಾರೆ. ಸಚಿವರಾಗಿ ಯಶಸ್ವಿಯಾದವರು, ಉತ್ತಮ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ ಎಂದು ಪ್ರತಿಪಾದಿಸುತ್ತಿರುವವರು ಶಾಸಕರಾಗಿ ತಮ್ಮ ಮತ ಕ್ಷೇತ್ರಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆ?

ತಮ್ಮನ್ನು ನಂಬಿ ಮತ ಹಾಕಿದ 'ಮಹಾಪ್ರಭು'ಗಳ ನಿರೀಕ್ಷೆ, ಅಪೇಕ್ಷೆಗಳಿಗೆ ನಾಲ್ಕು ಮುಕ್ಕಾಲು ವರ್ಷ ಸರ್ಕಾರವನ್ನು ಮುನ್ನಡೆಸಿದವರು ಎಷ್ಟರಮಟ್ಟಿಗೆ ಸ್ಪಂದಿಸಿದ್ದಾರೆ ಎಂಬುದನ್ನು ಸಮೀಕ್ಷೆಯಲ್ಲಿ ಸಿಕ್ಕಿದ ಅಂಕಿ–ಅಂಶಗಳ ಮೂಲಕವೇ ತೋರಿಸುವ ವಿಶ್ಲೇಷಣೆ ಇಲ್ಲಿದೆ. ಮತದಾರರ ಅಭಿಪ್ರಾಯ ಆಧರಿಸಿ, ಸಚಿವರಿಗೆ ಅಂಕ ನೀಡಲಾಗಿದೆ. ಅದನ್ನಷ್ಟೇ ಇಲ್ಲಿ ಕ್ರೋಡೀಕರಿಸಲಾಗಿದೆ.

ಸಚಿವರ ಪೈಕಿ ಗಣಿ ಮತ್ತು ಭೂವಿಜ್ಞಾನ ಸಚಿವ ವಿನಯ ಕುಲಕರ್ಣಿ ಅಗ್ರ ಶ್ರೇಯಾಂಕದಲ್ಲಿದ್ದರೆ, ಗೃಹ ಸಚಿವ ರಾಮಲಿಂಗಾರೆಡ್ಡಿ ಕೊನೆಯ ಸ್ಥಾನದಲ್ಲಿದ್ದಾರೆ.

**ನುಡಿದಂತೆ. . .:** ಸಿದ್ದರಾಮಯ್ಯ ಸರ್ಕಾರದಲ್ಲಿ ಲೋಕ ನಿಷ್ಠುರಿಗಳು, ಜನಪರ ಕಳಕಳಿ ಇರುವವರೆಂದು ಬಿಂಬಿತವಾಗಿರುವ ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ಆರೋಗ್ಯ ಸಚಿವ ಕೆ.ಆರ್. ರಮೇಶಕುಮಾರ್ ಅವರು ಆಡಳಿತ ಪಕ್ಷದೊಳಗಿನ ವಿರೋಧ ಪಕ್ಷದ ಸದಸ್ಯರಂತೆ ಇದ್ದಾರೆ. ಹಾಗೆಂದು ಇಬ್ಬರೂ ಸತತ ಎರಡು ಚುನಾವಣೆಗಳಲ್ಲಿ ಗೆದ್ದಿರುವ ನಿದರ್ಶನ ವಿರಳ. ಕ್ಷೇತ್ರದಲ್ಲಿ ಒಲವು ಇದ್ದರೂ ಗೆಲುವು ಇವರಿಗೆ ಎಂದಿಗೂ ಸಲೀಸಾಗಿಲ್ಲ.

ಕಾನೂನು ಸಚಿವ ಟಿ.ಬಿ. ಜಯಚಂದ್ರ ಒಂದು ಬಾರಿ ಮಾತ್ರ ಸೋಲುಂಡವರು. ಮೂರನೇ ಬಾರಿ ಗೆದ್ದ ಶರಣ ಪ್ರಕಾಶ ಪಾಟೀಲ, ಎರಡನೇ ಬಾರಿ ಗೆದ್ದ ವಿನಯ ಕುಲಕರ್ಣಿ ಈಗ ಸಚಿವರು. ಎಚ್.ಕೆ. ಪಾಟೀಲ ಹಾಗೂ ಪ್ರಿಯಾಂಕ್ ಖರ್ಗೆ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದವರು. ಸಚಿವರ ಯಾದಿಯಲ್ಲಿ ಈ ಏಳೂ ಜನ 10ಕ್ಕೆ 8ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

ಸರ್ಕಾರದ ಅವಧಿ ಮೂರು ವರ್ಷ ತುಂಬುವವರೆಗೆ ಕಾಗೋಡು ಸಭಾಧ್ಯಕ್ಷರಾಗಿದ್ದರು. ರಮೇಶ್ ಕುಮಾರ್ ಶಾಸಕರಾಗಿದ್ದರು. ಸಮೀಕ್ಷೆಯಲ್ಲಿ ಇವರಿಬ್ಬರೂ ಕ್ರಮವಾಗಿ 8.04 ಹಾಗೂ 8.22 ಅಂಕ ಗಳಿಸಿದ್ದಾರೆ. ಜಯಚಂದ್ರ ಮತ್ತು ಎಚ್.ಕೆ. ಪಾಟೀಲ ತಲಾ 8.19 ಅಂಕ ಪಡೆದಿದ್ದಾರೆ.

ಎಚ್.ಸಿ. ಮಹದೇವಪ್ಪ, ರಮಾನಾಥ ರೈ, ಬಸವ ರಾಜ ರಾಯರಡ್ಡಿ, ರಮೇಶ ಜಾರಕಿಹೊಳಿ ಒಟ್ಟಾರೆ ಅಂಕ ಗಳಿಕೆಯಲ್ಲಿ ಹಿಂದೆ ಬಿದ್ದಿದ್ದಾರೆ. ಆದರೆ, ಶಾಸಕರು ಜನರ ಕೈಗೆ ಎಟುಕುತ್ತಾರೆಯೇ ಎಂಬ ಪ್ರಶ್ನೆಗೆ ಇವರೆಲ್ಲ 8ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ಮಹದೇವಪ್ಪ, ರೋಷನ್ ಬೇಗ್, ಆಂಜನೇಯ, ರಾಯರಡ್ಡಿ, ರುದ್ರಪ್ಪ ಲಮಾಣಿ, ಎ.ಮಂಜು, ಎಸ್.ಎಸ್. ಮಲ್ಲಿಕಾರ್ಜುನ, ಎಂ.ಬಿ. ಪಾಟೀಲ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕೆಲವರು ಏಳರ ಸಮೀಪ ಸಾಗಿದರೂ ಏಳು ದಾಟುವಲ್ಲಿ ಯಶ ಕಂಡಿಲ್ಲ.

### ರಾಜಧಾನಿಯವರ ಸಾಧನೆ

ಬೆಂಗಳೂರನ್ನು ಪ್ರತಿನಿಧಿಸುವ ಸಚಿವರ ಪೈಕಿ ವಸತಿ ಸಚಿವ ಎಂ. ಕೃಷ್ಣಪ್ಪ, ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಮುಂದೆ ಇದ್ದಾರೆ. ಬೇಗ್, ಕೃಷ್ಣ ಬೈರೇಗೌಡ, ರಾಮಲಿಂಗಾರೆಡ್ಡಿ ಹಿಂದೆ ಬಿದ್ದಿದ್ದಾರೆ. ಬೆಂಗಳೂರಿನಲ್ಲೇ ನೆಲೆಸಿರುವ ಕನಕಪುರ ಕ್ಷೇತ್ರದ ಶಾಸಕ, ಇಂಧನ ಸಚಿವ ಡಿ.ಕೆ. ಶಿವಕುಮಾರ್ ಕೂಡ 6.6 ಅಂಕ ಪಡೆದಿದ್ದಾರೆ.

ಶಾಸಕರು ಕೈಗೆ ಸಿಗುತ್ತಾರೆಯೇ ಎಂಬ ವಿಷಯದಲ್ಲಿ ಶಿವಕುಮಾರ್ ಅತ್ಯಂತ ಕಡಿಮೆ ಅಂಕ ಪಡೆದಿದ್ದು, ಈ ವಿಷಯದಲ್ಲಿ ರೆಡ್ಡಿ ಸ್ವಲ್ಪ ಹೆಚ್ಚು ಅಂಕ ಗಳಿಸಿದ್ದಾರೆ.

### ಕೆ.ಆರ್. ರಮೇಶ್‌ಕುಮಾರ್
ಕಾಂಗ್ರೆಸ್
ಜಿಲ್ಲೆ: ಕೋಲಾರ
ಕ್ಷೇತ್ರ: ಶ್ರೀನಿವಾಸಪುರ



8.22/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 8.18 |
| ಕುಡಿಯುವ ನೀರು | 8.48 |
| ವಿದ್ಯುತ್ | 9.37 |
| ರಸ್ತೆ | 8.79 |
| ಶಾಸಕರು ಕೈಗೆ ಸಿಗುತ್ತಾರಾ? | 8.18 |

### ಕಾಗೋಡು ತಿಮ್ಮಪ್ಪ
ಕಾಂಗ್ರೆಸ್
ಜಿಲ್ಲೆ: ಶಿವಮೊಗ್ಗ
ಕ್ಷೇತ್ರ: ಸಾಗರ



8.04/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 8 |
| ಕುಡಿಯುವ ನೀರು | 8.07 |
| ವಿದ್ಯುತ್ | 8.07 |
| ರಸ್ತೆ | 8 |
| ಶಾಸಕರು ಕೈಗೆ ಸಿಗುತ್ತಾರಾ? | 8.07 |

### ಡಾ. ಶರಣ ಪ್ರಕಾಶ್ ಪಾಟೀಲ
ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಸೇಡಂ



8.48/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 9.52 |
| ಕುಡಿಯುವ ನೀರು | 9.21 |
| ವಿದ್ಯುತ್ | 9.84 |
| ರಸ್ತೆ | 9.37 |
| ಶಾಸಕರು ಕೈಗೆ ಸಿಗುತ್ತಾರಾ? | 9.83 |

### ರಮೇಶ ಜಾರಕಿಹೊಳಿ
ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಗೋಕಾಕ



7.62/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7.11 |
| ಕುಡಿಯುವ ನೀರು | 7.28 |
| ವಿದ್ಯುತ್ | 8.06 |
| ರಸ್ತೆ | 7.94 |
| ಶಾಸಕರು ಕೈಗೆ ಸಿಗುತ್ತಾರಾ? | 9.89 |

### ಸಂತೋಷ್ ಎಸ್. ಲಾಡ್
ಕಾಂಗ್ರೆಸ್
ಜಿಲ್ಲೆ: ಧಾರವಾಡ
ಕ್ಷೇತ್ರ: ಕಲಘಟಗಿ



7.46/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7.49 |
| ಕುಡಿಯುವ ನೀರು | 7.61 |
| ವಿದ್ಯುತ್ | 7.46 |
| ರಸ್ತೆ | 7.49 |
| ಶಾಸಕರು ಕೈಗೆ ಸಿಗುತ್ತಾರಾ? | 7.33 |

### ಬಸವರಾಜ ರಾಯರಡ್ಡಿ
ಕಾಂಗ್ರೆಸ್
ಜಿಲ್ಲೆ: ಕೊಪ್ಪಳ
ಕ್ಷೇತ್ರ: ಯಲಬುರ್ಗಾ



6.63/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.94 |
| ಕುಡಿಯುವ ನೀರು | 8.28 |
| ವಿದ್ಯುತ್ | 7.61 |
| ರಸ್ತೆ | 7.28 |
| ಶಾಸಕರು ಕೈಗೆ ಸಿಗುತ್ತಾರಾ? | 8.17 |

### ಎಂ. ಕೃಷ್ಣಪ್ಪ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ವಿಜಯನಗರ



7.12/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7.19 |
| ಕುಡಿಯುವ ನೀರು | 7.24 |
| ವಿದ್ಯುತ್ | 7.18 |
| ರಸ್ತೆ | 7.24 |
| ಶಾಸಕರು ಕೈಗೆ ಸಿಗುತ್ತಾರಾ? | 7.3 |

### ಎ. ಮಂಜು
ಕಾಂಗ್ರೆಸ್
ಜಿಲ್ಲೆ: ಹಾಸನ
ಕ್ಷೇತ್ರ: ಅರಕಲಗೂಡು



5.97/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.78 |
| ಕುಡಿಯುವ ನೀರು | 6.17 |
| ವಿದ್ಯುತ್ | 6.56 |
| ರಸ್ತೆ | 6.72 |
| ಶಾಸಕರು ಕೈಗೆ ಸಿಗುತ್ತಾರಾ? | 6.17 |

### ರುದ್ರಪ್ಪ ಲಮಾಣಿ
ಕಾಂಗ್ರೆಸ್
ಜಿಲ್ಲೆ: ಹಾವೇರಿ
ಕ್ಷೇತ್ರ: ಹಾವೇರಿ



6.82/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7.21 |
| ಕುಡಿಯುವ ನೀರು | 6.73 |
| ವಿದ್ಯುತ್ | 6.94 |
| ರಸ್ತೆ | 7.69 |
| ಶಾಸಕರು ಕೈಗೆ ಸಿಗುತ್ತಾರಾ? | 6.8 |

### ಈಶ್ವರ ಖಂಡ್ರೆ
ಕಾಂಗ್ರೆಸ್
ಜಿಲ್ಲೆ: ಬೀದರ್
ಕ್ಷೇತ್ರ: ಭಾಲ್ಕಿ



7.54/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7.10 |
| ಕುಡಿಯುವ ನೀರು | 8.07 |
| ವಿದ್ಯುತ್ | 7.79 |
| ರಸ್ತೆ | 7.44 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

# ಯಾವ ವಲಯದಲ್ಲಿ ಯಾರಿಗೆ ಒಲವು?

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ರಾಜ್ಯದ ಯಾವ ಭಾಗದಲ್ಲಿ ಯಾವ ಪಕ್ಷದ ಶಾಸಕರು ಉತ್ತಮ ಕೆಲಸ ಮಾಡಿದ್ದಾರೆ ಎಂಬ ಮಾಹಿತಿ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.

ಶಾಸಕರ ಸಾಮರ್ಥ್ಯ, ಕ್ಷೇತ್ರದ ಅಭಿವೃದ್ಧಿಯತ್ತ ಅವರಿಗಿರುವ ಕಾಳಜಿಯನ್ನು ಮೌಲ್ಯಮಾಪನ ಮಾಡಲು **'ಪ್ರಜಾವಾಣಿ'** ಜತೆ **'ದಕ್ಷ'** ಸಂಸ್ಥೆ ಕೈಜೋಡಿಸಿದೆ. ಶಾಸಕರ ಕಾರ್ಯವೈಖರಿ, ಜನರ ಸಮಸ್ಯೆಗಳಿಗೆ ಜನಪ್ರತಿನಿಧಿಯ ಗಮನ ಮತ್ತಿತರ ವಿಷಯಗಳ ಕುರಿತು ಸಮೀಕ್ಷೆ ವೇಳೆ 28 ಪ್ರಶ್ನೆಗಳನ್ನು ಕೇಳಲಾಗಿದೆ. ಅದನ್ನು ಕ್ರೋಡೀಕರಿಸಿ 10 ಅಂಕಗಳಿಗೆ ಶಾಸಕರು ಹಾಗೂ ಪಕ್ಷ ಪಡೆದ ಅಂಕವನ್ನು ನೀಡಲಾಗಿದೆ. ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶಗಳನ್ನು ಪ್ರದೇಶವಾರು ವಿಭಜಿಸಿ, ಪಕ್ಷವಾರು ಪಡೆದ ಅಂಕಗಳನ್ನು ವಿಶ್ಲೇಷಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ.

**ಕರಾವಳಿಯಲ್ಲಿ 'ಕೈ'ಗೆ ಜೈ:** ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳ ವಿಷಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ವಿರೋಧ ಪಕ್ಷದ ನಾಯಕರ ಮಧ್ಯೆ ವಾಗ್ವಾದ ನಡೆಯುತ್ತಲೇ ಇದೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ಅಭಿವೃದ್ಧಿ ಕುಸಿದಿದೆ ಎಂದು ಬಿಜೆಪಿಯವರು ಟೀಕಾ ಪ್ರಹಾರ ಮಾಡುತ್ತಲೇ ಇದ್ದಾರೆ. ಈ ಭಾಗದಲ್ಲಿ ಕಾಂಗ್ರೆಸ್ ಶಾಸಕರ ಸಂಖ್ಯೆ ಹೆಚ್ಚಿದ್ದು, ಅವರೇ ಹೆಚ್ಚಿನ ಅಂಕ ಗಳಿಸಿದ್ದಾರೆ. ಅಭಿವೃದ್ಧಿಯೇ ನಮ್ಮ ಮಂತ್ರ ಎಂದು ಘೋಷಿಸಿಕೊಳ್ಳುತ್ತಿರುವ ಬಿಜೆಪಿ ಶಾಸಕರು ಎರಡನೇ ಸ್ಥಾನಕ್ಕೆ ಹೋಗಿದ್ದಾರೆ. ಕರಾವಳಿಯಲ್ಲಿ ಜೆಡಿಎಸ್ ಶಾಸಕರು ಇಲ್ಲ.

ಮುಂಬೈ ಕರ್ನಾಟಕಲ್ಲಿ ಬಿಜೆಪಿ–ಕಾಂಗ್ರೆಸ್ ಶಾಸಕರ ಸಂಖ್ಯೆ ಸರಿ ಸುಮಾರು ಸಮಬಲದಲ್ಲಿದೆ. ಪ್ರಭಾವಿ ನಾಯಕರೂ ಈ ಭಾಗದಲ್ಲಿದ್ದಾರೆ. ಜೆಡಿಎಸ್ ಪ್ರಾತಿನಿಧ್ಯ ಕೂಡ ಇದೆ. ಅಭಿವೃದ್ಧಿಯ ಪರ್ವ ಆರಂಭವಾಗಿದ್ದೇ ನಮ್ಮ ಕಾಲದಲ್ಲಿ ಎಂದು ಕಾಂಗ್ರೆಸ್ ಸರ್ಕಾರದ ಸಚಿವರು ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತಾರೆ. ಆದರೆ, ಈ ಪ್ರದೇಶದಲ್ಲಿ ನಡೆದ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ ಸಿಕ್ಕಿದ್ದು ಎರಡನೇ ಸ್ಥಾನ. ಬಿಜೆಪಿ 7.69 ಅಂಕ ಪಡೆದು ಮೊದಲ ಸ್ಥಾನದಲ್ಲಿದೆ. ಜೆಡಿಎಸ್ 6.09ಗೆ ತೃಪ್ತಿಪಟ್ಟುಕೊಂಡಿದೆ.

**ಹೈ–ಕದಲ್ಲಿ ಕಮಲಕ್ಕೆ ರಂಗು:** ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪ್ರಾಬಲ್ಯ ಇದೆ. ಬಿಜೆಪಿ, ಜೆಡಿಎಸ್ ಕೂಡ ಪ್ರಾತಿನಿಧ್ಯ ಪಡೆದಿವೆ. ಯಾವ ಪಕ್ಷ ಹೆಚ್ಚಿನ ಪ್ರಭಾವ ಹೊಂದಿದೆ ಎಂಬ ಬಗ್ಗೆ ನಡೆದ ಖಾಸಗಿ ಸಮೀಕ್ಷೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿತ್ತು. ಆದರೆ, ಶಾಸಕರ ಸಾಧನೆ ಆಧರಿಸಿ ಪಕ್ಷ ಪಡೆದ ಅಂಕಗಳನ್ನು ಗಮನಿಸಿದರೆ, ಬಿಜೆಪಿ ಹೆಚ್ಚಿನ ಅಂಕ ಪಡೆದು ಮೊದಲ ಸಾಲಿನಲ್ಲಿದೆ. ಅದಕ್ಕಿಂತ 0.08ರಷ್ಟು ಕಡಿಮೆ ಅಂಕವನ್ನು ಕಾಂಗ್ರೆಸ್ ಪಡೆದಿದೆ.

ಮಧ್ಯ ಕರ್ನಾಟಕದ (ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ) ಮೂರು ಜಿಲ್ಲೆಗಳ ಶಾಸಕರ ಪೈಕಿ ಕಾಂಗ್ರೆಸ್ ಅತಿ ಹೆಚ್ಚು ಶಾಸಕರನ್ನು ಹೊಂದಿದೆ. ಬಿಜೆಪಿ ಪ್ರಾತಿನಿಧ್ಯವೂ ಇದೆ. ಆಡಳಿತ ಪಕ್ಷ ಕಾಂಗ್ರೆಸ್ ಎರಡನೇ ಸ್ಥಾನದಲ್ಲಿದೆ. ಈ ಪ್ರದೇಶದಲ್ಲಿ ಜೆಡಿಎಸ್ ಸದಸ್ಯರ ಸಂಖ್ಯೆ (4 ಶಾಸಕರು) ಕಡಿಮೆ ಇದ್ದರೂ 7.33 ಅಂಕ ಗಳಿಸಿದೆ.

**ಹಳೆ ಮೈಸೂರಿನ ಲೆಕ್ಕ:** ಹಳೆ ಮೈಸೂರು ಭಾಗದಲ್ಲಿ ಕಡಿಮೆ ಶಾಸಕರನ್ನು ಹೊಂದಿರುವ ಬಿಜೆಪಿ ಮೊದಲ ಸ್ಥಾನದಲ್ಲಿದೆ. ಕಾಂಗ್ರೆಸ್ ಅತಿ ಹೆಚ್ಚಿನ ಶಾಸಕರ ಪ್ರಾತಿನಿಧ್ಯ ಹೊಂದಿದ್ದರೆ, ಸಂಖ್ಯಾಬಲದಲ್ಲಿ ಜೆಡಿಎಸ್ ಎರಡನೇ ಸ್ಥಾನದಲ್ಲಿದೆ. ಇಲ್ಲಿ ಕಾಂಗ್ರೆಸ್ ಮೂರನೇ ಸ್ಥಾನದಲ್ಲಿದ್ದರೆ, ಜೆಡಿಎಸ್ 7.12 ಅಂಕ ಪಡೆದು ಎರಡನೇ ಸ್ಥಾನ ದಕ್ಕಿಸಿಕೊಂಡಿದೆ.

ಬಿಬಿಎಂಪಿ ವ್ಯಾಪ್ತಿಯ 28 ಕ್ಷೇತ್ರಗಳಲ್ಲಿ ಕಾಂಗ್ರೆಸ್– ಬಿಜೆಪಿ ಶಾಸಕರು ಸರಿಸುಮಾರು ಸಮಾನ ಪ್ರಾತಿನಿಧ್ಯ ಹೊಂದಿದ್ದಾರೆ. ಆದರೆ, ಅಂಕ ಗಳಿಕೆಯಲ್ಲಿ ಜೆಡಿಎಸ್ ಮೊದಲ ಸ್ಥಾನದಲ್ಲಿದೆ. ಆಡಳಿತಾರೂಢ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಕುಸಿದಿದೆ.

### ವಲಯವಾರು ಪಕ್ಷಗಳ ಸಾಧನೆ (10 ಅಂಕಗಳಲ್ಲಿ)




## ಕಡಿಮೆ ಶಾಸಕರಿದ್ದ ಕಡೆ ಹೆಚ್ಚು ಅಂಕ

ಶಾಸಕರ ಸಂಖ್ಯೆ ಕಡಿಮೆ ಇದ್ದ ಪ್ರದೇಶಗಳಲ್ಲಿ ಪಕ್ಷವಾರು ಅಂಕ ಗಳಿಕೆ ಹೆಚ್ಚಾಗಿದೆ. ಹಳೆ ಮೈಸೂರು ಪ್ರದೇಶದಲ್ಲಿ ಬಿಜೆಪಿ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಜೆಡಿಎಸ್ ತಲಾ ಮೂವರು ಶಾಸಕರನ್ನು ಹೊಂದಿವೆ. ಮಧ್ಯ ಕರ್ನಾಟಕದಲ್ಲಿ ಜೆಡಿಎಸ್‌ನ ಇಬ್ಬರು ಶಾಸಕರು ಇದ್ದಾರೆ. ಆದರೆ, ಅಂಕ ಗಳಿಕೆಯಲ್ಲಿ ಬಿಜೆಪಿ, ಜೆಡಿಎಸ್ ಹೆಚ್ಚಿನ ಸಾಧನೆ ಮಾಡಿವೆ.

ಒಂದು ಪ್ರದೇಶದಲ್ಲಿ ನಿರ್ದಿಷ್ಟ ಪಕ್ಷಕ್ಕೆ ಸೇರಿರುವ ಶಾಸಕರ ಸಂಖ್ಯೆ ಹೆಚ್ಚಿದ್ದು, ಅವರ ಪೈಕಿ ಕಡಿಮೆ ಅಂಕ ಪಡೆದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಸರಾಸರಿ ಗಣಕ ಮಾಡಿದಾಗ ಪಕ್ಷ ಪಡೆದ ಅಂಕ ಇಳಿಕೆಯಾಗುತ್ತದೆ.

ಉದಾಹರಣೆಗೆ, ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಮೂವರು ಶಾಸಕರನ್ನು ಮಾತ್ರ ಹೊಂದಿದೆ. ಮೂವರೂ 6.8ರಿಂದ 7.47ವರೆಗಿನ ಅಂಕ ಪಡೆದಿದ್ದರೆ, ಸರಾಸರಿ ಲೆಕ್ಕ ಮಾಡುವಾಗ ಪಕ್ಷದ ಅಂಕ ಅಂದಾಜು 7 ದಾಟುತ್ತದೆ. ಒಂದು ಪಕ್ಷದ 40ಕ್ಕೂ ಹೆಚ್ಚು ಶಾಸಕರಿರುವ ಪ್ರದೇಶಗಳಲ್ಲಿ 20ಕ್ಕೂ ಹೆಚ್ಚು ಶಾಸಕರು 6, ಹತ್ತು ಜನ 4 ಹಾಗೂ ಉಳಿದ ಹತ್ತು ಜನ 8 ಅಂಕ ಪಡೆದಿದ್ದರೆ, ಸರಾಸರಿ ಲೆಕ್ಕ ಹಾಕುವಾಗ ಪಕ್ಷವಾರು ಅಂಕ ಇಳಿಕೆಯಾಗುತ್ತದೆ.

## ಏಳಕ್ಕೇರದ ಸಭಾಧ್ಯಕ್ಷ ಕೋಳಿವಾಡ

224 ಶಾಸಕರಿಗೆ ಉತ್ತರದಾಯಿಯಾಗಿರುವ ವಿಧಾನಸಭಾಧ್ಯಕ್ಷ ಕೆ.ಬಿ. ಕೋಳಿವಾಡ ತಮ್ಮ ಮತಕ್ಷೇತ್ರದ ಅಭಿವೃದ್ಧಿಯ ವಿಷಯದಲ್ಲಿ 6.78 ಅಂಕ ಮಾತ್ರ ಗಳಿಸಿದ್ದಾರೆ.

ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಕಾಗೋಡು ತಿಮ್ಮಪ್ಪ, ರಮೇಶಕುಮಾರ್, ಜಗದೀಶ ಶೆಟ್ಟರ್, ಕೆ.ಜಿ. ಬೋಪಯ್ಯ 14ನೇ ವಿಧಾನಸಭೆಯ ಸದಸ್ಯರೂ ಆಗಿದ್ದಾರೆ. ಇವರ ಪೈಕಿ ಬೋಪಯ್ಯ 7.71 ಅಂಕ ಗಳಿಸಿದ್ದಾರೆ. ಉಳಿದೆಲ್ಲರೂ 8ರ ಗಡಿ ದಾಟಿದ್ದಾರೆ. ಆದರೆ, ಕೋಳಿವಾಡ ಹಿನ್ನಡೆ ಅನುಭವಿಸಿದ್ದಾರೆ.

ಇನ್ನು ಉಪ ಸಭಾಧ್ಯಕ್ಷ ಎನ್.ಎಚ್. ಶಿವಶಂಕರ ರೆಡ್ಡಿ ಅವರಿಗೆ ಅಂಕ ಗಳಿಕೆಯಲ್ಲಿ ಪ್ರಥಮ ಶ್ರೇಣಿ ಪಡೆಯಲು ಸಾಧ್ಯವಾಗಿಲ್ಲ.

### ಕೆ.ಬಿ. ಕೋಳಿವಾಡ
ಕಾಂಗ್ರೆಸ್
ಜಿಲ್ಲೆ: ಹಾವೇರಿ
ಕ್ಷೇತ್ರ: ರಾಣೆಬೆನ್ನೂರು



6.78/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7.04 |
| ಕುಡಿಯುವ ನೀರು | 6.59 |
| ವಿದ್ಯುತ್ | 6.07 |
| ರಸ್ತೆ | 7.11 |
| ಶಾಸಕರು ಕೈಗೆ ಸಿಗುತ್ತಾರಾ? | 6.74 |

### ಎನ್.ಎಚ್. ಶಿವಶಂಕರ ರೆಡ್ಡಿ
ಕಾಂಗ್ರೆಸ್
ಜಿಲ್ಲೆ: ಚಿಕ್ಕಬಳ್ಳಾಪುರ
ಕ್ಷೇತ್ರ: ಗೌರಿಬಿದನೂರು



5.25/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.49 |
| ಕುಡಿಯುವ ನೀರು | 3.86 |
| ವಿದ್ಯುತ್ | 4.56 |
| ರಸ್ತೆ | 5 |
| ಶಾಸಕರು ಕೈಗೆ ಸಿಗುತ್ತಾರಾ? | 4.91 |

## ಆಡಳಿತ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು

### ಅಶೋಕ್ ಎಂ. ಪಟ್ಟಣ
ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ರಾಮದುರ್ಗ



6.76/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 7 |
| ಕುಡಿಯುವ ನೀರು | 8.33 |
| ವಿದ್ಯುತ್ | 8 |
| ರಸ್ತೆ | 7.33 |
| ಶಾಸಕರು ಕೈಗೆ ಸಿಗುತ್ತಾರಾ? | 6.33 |

### ವಿ. ಸುನಿಲ್ ಕುಮಾರ್
ಬಿಜೆಪಿ
ಜಿಲ್ಲೆ: ಉಡುಪಿ
ಕ್ಷೇತ್ರ: ಕಾರ್ಕಳ



6.72/10

| ಯಾವುದರಲ್ಲಿ ಎಷ್ಟು ಅಂಕ ? | |
|---|---|
| ಉತ್ತಮ ಶಾಲೆಗಳು | 6.62 |
| ಕುಡಿಯುವ ನೀರು | 6.8 |
| ವಿದ್ಯುತ್ | 6.73 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ಗೋವಿಂದ ಕಾರಜೋಳ — ಬಿಜೆಪಿ
ಜಿಲ್ಲೆ: ಬಾಗಲಕೋಟೆ
ಕ್ಷೇತ್ರ: ಮುಧೋಳ



8.45/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.29 |
| ಕುಡಿಯುವ ನೀರು | 7.29 |
| ವಿದ್ಯುತ್ | 7.29 |
| ರಸ್ತೆ | 7.29 |
| ಶಾಸಕರು ಕೈಗೆ ಸಿಗುತ್ತಾರಾ? | 8.95 |

### ಉಮೇಶ್ ಕತ್ತಿ — ಬಿಜೆಪಿ
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಹುಕ್ಕೇರಿ



7.56/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.65 |
| ಕುಡಿಯುವ ನೀರು | 7.69 |
| ವಿದ್ಯುತ್ | 7.78 |
| ರಸ್ತೆ | 8.43 |
| ಶಾಸಕರು ಕೈಗೆ ಸಿಗುತ್ತಾರಾ? | 8.47 |

### ಲಕ್ಷ್ಮಣ ಸವದಿ — ಬಿಜೆಪಿ
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಅಥಣಿ



7.48/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.55 |
| ಕುಡಿಯುವ ನೀರು | 7.47 |
| ವಿದ್ಯುತ್ | 7.32 |
| ರಸ್ತೆ | 8.44 |
| ಶಾಸಕರು ಕೈಗೆ ಸಿಗುತ್ತಾರಾ? | 7.41 |

### ಸಿ.ಟಿ. ರವಿ — ಬಿಜೆಪಿ
ಜಿಲ್ಲೆ: ಚಿಕ್ಕಮಗಳೂರು
ಕ್ಷೇತ್ರ: ಚಿಕ್ಕಮಗಳೂರು



7.44/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.89 |
| ಕುಡಿಯುವ ನೀರು | 8.22 |
| ವಿದ್ಯುತ್ | 8.22 |
| ರಸ್ತೆ | 8.15 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ಎಸ್. ಸುರೇಶ್ ಕುಮಾರ್ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ರಾಜಾಜಿನಗರ



7.13/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.32 |
| ಕುಡಿಯುವ ನೀರು | 7.15 |
| ವಿದ್ಯುತ್ | 7.37 |
| ರಸ್ತೆ | 7.32 |
| ಶಾಸಕರು ಕೈಗೆ ಸಿಗುತ್ತಾರಾ? | 7.47 |

### ವಿಶ್ವೇಶ್ವರ ಹೆಗಡೆ ಕಾಗೇರಿ — ಬಿಜೆಪಿ
ಜಿಲ್ಲೆ: ಉತ್ತರ ಕನ್ನಡ
ಕ್ಷೇತ್ರ: ಶಿರಸಿ



6.56/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.93 |
| ಕುಡಿಯುವ ನೀರು | 6.33 |
| ವಿದ್ಯುತ್ | 7 |
| ರಸ್ತೆ | 6.93 |
| ಶಾಸಕರು ಕೈಗೆ ಸಿಗುತ್ತಾರಾ? | 6.53 |

### ಬಾಬುರಾವ್ ಚಿಂಚನಸೂರ — ಕಾಂಗ್ರೆಸ್
ಜಿಲ್ಲೆ: ಯಾದಗಿರಿ
ಕ್ಷೇತ್ರ: ಗುರುಮಠಕಲ್



7.77/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.78 |
| ಕುಡಿಯುವ ನೀರು | 7.46 |
| ವಿದ್ಯುತ್ | 7.46 |
| ರಸ್ತೆ | 8.25 |
| ಶಾಸಕರು ಕೈಗೆ ಸಿಗುತ್ತಾರಾ? | 6.98 |

### ಮಾಲೀಕಯ್ಯ ಗುತ್ತೇದಾರ — ಕಾಂಗ್ರೆಸ್
ಜಿಲ್ಲೆ: ಕಲಬುರ್ಗಿ
ಕ್ಷೇತ್ರ: ಅಫಜಲ್‌ಪುರ



7.13/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.17 |
| ಕುಡಿಯುವ ನೀರು | 7 |
| ವಿದ್ಯುತ್ | 6.83 |
| ರಸ್ತೆ | 7.67 |
| ಶಾಸಕರು ಕೈಗೆ ಸಿಗುತ್ತಾರಾ? | 6 |

# ಸದನವೀರರ ಸಾಧನೆ ಉತ್ತಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭೆ ಅಧಿವೇಶನದಲ್ಲಿ ಜೋರಾಗಿ ಸದ್ದು ಮಾಡುವವರು, ಆಡಳಿತ ಪಕ್ಷವಾದ ಕಾರಣಕ್ಕೆ ಸದನದಲ್ಲಿ ಮೌನಕ್ಕೆ ಶರಣಾದವರು ಕ್ಷೇತ್ರದ ಅಭಿವೃದ್ಧಿಯ ವಿಷಯದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

'ಪ್ರಜಾವಾಣಿ' ಜತೆ ಕೈಜೋಡಿಸಿರುವ 'ದಕ್ಷ್' ಸಂಸ್ಥೆ ಎಲ್ಲ ಕ್ಷೇತ್ರಗಳಲ್ಲೂ ಸಮೀಕ್ಷೆ ನಡೆಸಿದೆ. ಸದನವೀರರು ಹಾಗೂ ಮೂರೂ ಪಕ್ಷಗಳಲ್ಲಿ ನಾಲ್ಕೈದು ಬಾರಿ ಗೆದ್ದು, ಹಿಂದಿನ ಸರ್ಕಾರಗಳಲ್ಲಿ ಸಚಿವರಾಗಿ ಕೆಲಸ ಮಾಡಿದ ಅನುಭವ ಇರುವವರು 2013ರಿಂದ ಇಲ್ಲಿಯವರೆಗೆ ಕ್ಷೇತ್ರಕ್ಕಾಗಿ ಮಾಡಿದ್ದೇನು ಎಂಬ ಪರಾಮರ್ಶೆ ಇಲ್ಲಿದೆ.

ಅಧಿವೇಶನದಲ್ಲಿ ಯಾವಾಗಲೂ ಅಬ್ಬರಿಸುವ ಬಿಜೆಪಿ ಶಾಸಕರ ಪೈಕಿ ಶಿರಸಿ ಕ್ಷೇತ್ರದ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತ್ರ 10ಕ್ಕೆ 6.56 ಅಂಕ ಪಡೆದಿದ್ದಾರೆ. ಎಲ್ಲ ವಿಷಯದಲ್ಲೂ ಏರುಧ್ವನಿಯಲ್ಲಿ ಮಾತನಾಡುವ ಚಿಕ್ಕಮಗಳೂರು ಕ್ಷೇತ್ರದ ಸಿ.ಟಿ. ರವಿ ಒಟ್ಟಾರೆ ಸಾಧನೆಯಲ್ಲಿ 7.44 ಅಂಕ ಪಡೆದಿದ್ದರೆ, ಮತದಾರರ ಕೈಗೆ ಸಿಗುತ್ತಾರೆಯೇ ಎಂಬ ವಿಷಯದಲ್ಲಿ 6.67 ಅಂಕಗಳಿಗೆ ಇಳಿದಿದ್ದಾರೆ. ಹಿರೀಕರಾದ ಮುಧೋಳ ಶಾಸಕ ಗೋವಿಂದ ಕಾರಜೋಳ ಇಂದು ಪ್ರಕಟವಾಗಿರುವ ಅಂಕಪಟ್ಟಿಯ ಯಾದಿಯಲ್ಲಿ ಅತ್ಯಂತ ಹೆಚ್ಚಿನ ಶ್ರೇಯಾಂಕ ಪಡೆದಿರುವುದು ವಿಶೇಷ. ಮತದಾರರ ಕೈಗೆ ಸಿಗುವ ವಿಷಯದಲ್ಲಿ ಹುಕ್ಕೇರಿಯ ಉಮೇಶ ಕತ್ತಿ 8.47 ಅಂಕ ಪಡೆದು ಬಿಜೆಪಿಯಲ್ಲಿ ಎಲ್ಲರಿಗಿಂತ ಮುಂದಿದ್ದಾರೆ.

ಕಾಂಗ್ರೆಸ್‌ನ ಹಿರಿಯ ಶಾಸಕರ ಪೈಕಿ ಆರು ಜನರ ಅಂಕಪಟ್ಟಿ ಇಲ್ಲಿದೆ. ಒಟ್ಟಾರೆ ಅಂಕ ಗಳಿಕೆಯಲ್ಲಿ ಗುರುಮಠಕಲ್ ಶಾಸಕ ಬಾಬುರಾವ್ ಚಿಂಚನಸೂರ ಹೆಚ್ಚು ಅಂಕ ಪಡೆದಿದ್ದಾರೆ.

ಈ ಹಿಂದೆ ಸಚಿವರಾಗಿದ್ದ ಯಮಕನಮರಡಿ ಶಾಸಕ ಸತೀಶ ಜಾರಕಿಹೊಳಿ, ಮಂಡ್ಯದ ಅಂಬರೀಷ್ ಸಾಧನೆಗೆ 7ಕ್ಕಿಂತ ಹೆಚ್ಚು ಅಂಕ ಸಿಕ್ಕಿದೆ. ಶಾಸಕರು ಕೈಗೆ ಸಿಗುತ್ತಾರೆಯೇ ಎಂಬ ಪ್ರಶ್ನೆಗೆ ಯಮಕನಮರಡಿ ಕ್ಷೇತ್ರದ ಮತದಾರರು ಜಾರಕಿಹೊಳಿಗೆ 4.90 ಅಂಕ ಕೊಟ್ಟಿದ್ದು, ಎಲ್ಲರಿಗಿಂತ ಕಡಿಮೆ ಅಂಕ ಪಡೆದಿದ್ದಾರೆ.

## ಜೆಡಿಎಸ್ ಶಾಸಕರು ಮಧ್ಯಮ

ವಿಧಾನಸಭೆಯಲ್ಲಿ ರೈತರು, ಗ್ರಾಮೀಣ ಜನರ ಸಂಕಷ್ಟದ ಬಗ್ಗೆ ಏರುಧ್ವನಿಯಲ್ಲಿ ಮಾತನಾಡುವ ಅರಸೀಕೆರೆಯ ಕೆ.ಎಂ. ಶಿವಲಿಂಗೇಗೌಡ ಅಂಕ ಗಳಿಕೆಯಲ್ಲಿ ಹಿಂದೆ ಬಿದ್ದಿದ್ದಾರೆ. ಜೆಡಿಎಸ್‌ನ ಎಲ್ಲ ಶಾಸಕರಿಗಿಂತ ಇವರ ಗಳಿಕೆ ಕಡಿಮೆ ಇದೆ ಎಂದು ಸಮೀಕ್ಷೆ ಹೇಳಿದೆ. ಕ್ಷೇತ್ರದ ಕೈಗೆ ಸಿಗುತ್ತಾರೆಯೇ ಎಂಬ ಪ್ರಶ್ನೆಗೆ 5.90 ಅಂಕಗಳನ್ನು ಅಲ್ಲಿನ ಮತದಾರರು ಗೌಡರಿಗೆ ಕೊಟ್ಟಿದ್ದಾರೆ.

ಒಟ್ಟು ಅಂಕ ಗಳಿಕೆಯಲ್ಲಿ ಸಕಲೇಶಪುರ ಶಾಸಕ ಎಚ್.ಕೆ. ಕುಮಾರಸ್ವಾಮಿ ಕಡಿಮೆ ಅಂಕ ಪಡೆದಿದ್ದಾರೆ. ಆದರೆ, ಮತದಾರರ ಕೈಗೆ ಸಿಗುತ್ತಾರೆಯೇ ಎಂಬ ಪ್ರಶ್ನೆಗೆ 10ಕ್ಕೆ 9.73 ಅಂಕ ಗಳಿಸಿ ಮುಂಚೂಣಿಯಲ್ಲಿದ್ದಾರೆ. ಕಾಂಗ್ರೆಸ್, ಬಿಜೆಪಿ ಶಾಸಕರಿಗೆ ಹೋಲಿಸಿದರೆ ಅಂಕ ಗಳಿಕೆಯಲ್ಲಿ ಜೆಡಿಎಸ್ ಶಾಸಕರ ಸಾಧನೆ ಕಡಿಮೆ ಇದೆ. ಈ ಪೈಕಿ ಚಾಮುಂಡೇಶ್ವರಿ ಕ್ಷೇತ್ರದ ಜಿ.ಟಿ. ದೇವೇಗೌಡ, ಮದ್ದೂರಿನ ಡಿ.ಸಿ. ತಮ್ಮಣ್ಣ ಮಾತ್ರ 7ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ.

### ಎಂ.ಎಚ್. ಅಂಬರೀಷ್ — ಕಾಂಗ್ರೆಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಮಂಡ್ಯ



7.18/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.61 |
| ಕುಡಿಯುವ ನೀರು | 7.66 |
| ವಿದ್ಯುತ್ | 7.66 |
| ರಸ್ತೆ | 7.30 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ಡಿ.ಬಿ. ಇನಾಂದಾರ — ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಕಿತ್ತೂರು



6.94/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 5.60 |
| ಕುಡಿಯುವ ನೀರು | 6.19 |
| ವಿದ್ಯುತ್ | 7.44 |
| ರಸ್ತೆ | 7.14 |
| ಶಾಸಕರು ಕೈಗೆ ಸಿಗುತ್ತಾರಾ? | 9.40 |

## ಅಂಕ 'ಗಣಿತ'

'ದಕ್ಷ್' ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

## ಸಮೀಕ್ಷೆಯಲ್ಲಿ ಕೇಳಿದ ಪ್ರಶ್ನೆಗಳು

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳು
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದಕ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಬೀಜ, ರಸಗೊಬ್ಬರ ಸಬ್ಸಿಡಿ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ

### ಸತೀಶ್ ಜಾರಕಿಹೊಳಿ — ಕಾಂಗ್ರೆಸ್
ಜಿಲ್ಲೆ: ಬೆಳಗಾವಿ
ಕ್ಷೇತ್ರ: ಯಮಕನಮರಡಿ



6.87/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.33 |
| ಕುಡಿಯುವ ನೀರು | 7.17 |
| ವಿದ್ಯುತ್ | 8.13 |
| ರಸ್ತೆ | 6.31 |
| ಶಾಸಕರು ಕೈಗೆ ಸಿಗುತ್ತಾರಾ? | 4.90 |

### ಡಾ.ಎ. ಬಿ. ಮಾಲಕ ರಡ್ಡಿ — ಕಾಂಗ್ರೆಸ್
ಜಿಲ್ಲೆ ಯಾದಗಿರಿ
ಕ್ಷೇತ್ರ: ಯಾದಗಿರಿ



6.73/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.98 |
| ಕುಡಿಯುವ ನೀರು | 7.21 |
| ವಿದ್ಯುತ್ | 7.95 |
| ರಸ್ತೆ | 6.29 |
| ಶಾಸಕರು ಕೈಗೆ ಸಿಗುತ್ತಾರಾ? | 6.30 |

### ಜಿ.ಟಿ. ದೇವೇಗೌಡ — ಜೆಡಿಎಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಚಾಮುಂಡೇಶ್ವರಿ



7.41/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.68 |
| ಕುಡಿಯುವ ನೀರು | 9.62 |
| ವಿದ್ಯುತ್ | 8.30 |
| ರಸ್ತೆ | 9.06 |
| ಶಾಸಕರು ಕೈಗೆ ಸಿಗುತ್ತಾರಾ? | 8.30 |

### ಡಿ.ಸಿ. ತಮ್ಮಣ್ಣ — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಮದ್ದೂರು



7.11/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.09 |
| ಕುಡಿಯುವ ನೀರು | 7.82 |
| ವಿದ್ಯುತ್ | 7.33 |
| ರಸ್ತೆ | 7.21 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ಎಚ್.ಕೆ. ಕುಮಾರಸ್ವಾಮಿ — ಜೆಡಿಎಸ್
ಜಿಲ್ಲೆ: ಹಾಸನ
ಕ್ಷೇತ್ರ: ಸಕಲೇಶಪುರ



6.91/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.27 |
| ಕುಡಿಯುವ ನೀರು | 5.93 |
| ವಿದ್ಯುತ್ | 6.67 |
| ರಸ್ತೆ | 6.27 |
| ಶಾಸಕರು ಕೈಗೆ ಸಿಗುತ್ತಾರಾ? | 9.73 |

### ಎಚ್.ಎಸ್. ಪ್ರಕಾಶ್ — ಜೆಡಿಎಸ್
ಜಿಲ್ಲೆ: ಹಾಸನ
ಕ್ಷೇತ್ರ: ಹಾಸನ



6.81/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.58 |
| ಕುಡಿಯುವ ನೀರು | 6.27 |
| ವಿದ್ಯುತ್ | 7.19 |
| ರಸ್ತೆ | 8.40 |
| ಶಾಸಕರು ಕೈಗೆ ಸಿಗುತ್ತಾರಾ? | 4.05 |

### ಡಿ. ನಾಗರಾಜಯ್ಯ — ಜೆಡಿಎಸ್
ಜಿಲ್ಲೆ: ತುಮಕೂರು
ಕ್ಷೇತ್ರ: ಕುಣಿಗಲ್



6.31/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 5 |
| ಕುಡಿಯುವ ನೀರು | 4.74 |
| ವಿದ್ಯುತ್ | 4.74 |
| ರಸ್ತೆ | 5.51 |
| ಶಾಸಕರು ಕೈಗೆ ಸಿಗುತ್ತಾರಾ? | 5.90 |

### ಕೆ.ಎಂ. ಶಿವಲಿಂಗೇಗೌಡ — ಜೆಡಿಎಸ್
ಜಿಲ್ಲೆ: ಹಾಸನ
ಕ್ಷೇತ್ರ: ಅರಸೀಕೆರೆ



5.99/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.75 |
| ಕುಡಿಯುವ ನೀರು | 6.50 |
| ವಿದ್ಯುತ್ | 6.75 |
| ರಸ್ತೆ | 6.75 |
| ಶಾಸಕರು ಕೈಗೆ ಸಿಗುತ್ತಾರಾ? | 5.90 |

# ಬಿಜೆಪಿ, ಕಾಂಗ್ರೆಸ್ ಅಂಕ ಗಳಿಕೆ ಸಮಾನ: ಜೆಡಿಎಸ್ ಬಗ್ಗೆ ದುಮ್ಮಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿದ್ಯುತ್ ಪೂರೈಕೆ, ಉತ್ತಮ ಶಾಲೆ, ಕೃಷಿ ಸಾಲ ಲಭ್ಯತೆ ವಿಷಯಗಳಲ್ಲಿ ಮೂರೂ ಪಕ್ಷಗಳ ಶಾಸಕರು ಸಮಾನ ಸಾಧನೆ ಮಾಡಿದ್ದಾರೆ. ಆದರೆ, ಉದ್ಯೋಗ ಸೃಷ್ಟಿ ಮತ್ತು ತರಬೇತಿ, ಭ್ರಷ್ಟಾಚಾರ ನಿರ್ಮೂಲನೆ ವಿಷಯದಲ್ಲಿ ಏಳಕ್ಕಿಂತ ಹೆಚ್ಚು ಅಂಕಗಳನ್ನು ಯಾವ ಪಕ್ಷದ ಶಾಸಕರೂ ಪಡೆದಿಲ್ಲ.

ಜನರ ಜೀವನದ ಜತೆಗೆ ನೇರವಾಗಿ ಸಂಬಂಧಪಡುವ ವಿಷಯಗಳ ಬಗ್ಗೆ 'ದಕ್ಷ್' ಸಮೀಕ್ಷೆ ವಿವಿಧ ಪ್ರಶ್ನೆಗಳನ್ನು ಮತದಾರರಿಗೆ ಕೇಳಿತ್ತು. ನಗರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಸಮಸ್ಯೆ, ಕೆರೆ ಪುನರುಜ್ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಕೃಷಿ ಉತ್ಪನ್ನಗಳ ಬೆಲೆ, ನೀರಾವರಿ ಯೋಜನೆಗಳ ಅನುಷ್ಠಾನ, ಕೃಷಿ ಸಾಲ ಮತ್ತಿತರ ವಿಷಯಗಳಿಗೆ ಒತ್ತು ನೀಡಲಾಗಿತ್ತು.

**ನಗರವಾಸಿಗಳ ಅಭಿಮತ:** ಉತ್ತಮ ಶಾಲೆಗಳ ವಿಷಯದಲ್ಲಿ ನಗರವಾಸಿಗಳು ಕಾಂಗ್ರೆಸ್ ಶಾಸಕರಿಗೆ 10ಕ್ಕೆ 8 ಅಂಕ ನೀಡಿದ್ದರೆ, ಬಿಜೆಪಿಗೆ 7.9 ಅಂಕ, ಜೆಡಿಎಸ್‌ಗೆ 7.6 ಅಂಕ ಕೊಟ್ಟಿದ್ದಾರೆ. ವಿದ್ಯುತ್ ಪೂರೈಕೆ ವಿಷಯದಲ್ಲಿ ಬಿಜೆಪಿಯೇ ಮೇಲುಗೈ ಸಾಧಿಸಿದೆ. ಮಹಿಳೆಯರ ಸುರಕ್ಷೆ ವಿಷಯದಲ್ಲಿ ಮೂರೂ ಪಕ್ಷಗಳು ಸಮಾನ ಅಂಕ ಪಡೆದಿವೆ. ಶಾಸಕರ ಲಭ್ಯತೆ ಕ್ಷೇತ್ರದಲ್ಲಿ ಬಿಜೆಪಿ ಮುಂದಿದ್ದರೆ, ಕಾಂಗ್ರೆಸ್ ಹಿನ್ನಡೆ ಕಂಡಿದೆ.

ಪರಿಸರ ಹಾಗೂ ಕೆರೆಗಳ ಸಂರಕ್ಷಣೆ ವಿಷಯದಲ್ಲಿ ಬಿಜೆಪಿಯೇ ಉತ್ತಮ ಎಂದು ಮತದಾರರು ಹೇಳಿದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಹಾಗೂ ವಿರೋಧ ಪಕ್ಷ ಜೆಡಿಎಸ್‌ಗೆ ಉತ್ತಮ ಅಂಕ ಸಿಕ್ಕಿಲ್ಲ. ಘನತ್ಯಾಜ್ಯ ಉತ್ತಮ ನಿರ್ವಹಣೆಯಲ್ಲಿ ಬಿಜೆಪಿ ಕಡೆಗೆ ಜನ ಒಲವು ತೋರಿದ್ದಾರೆ.

**ಗ್ರಾಮೀಣರ ಅನಿಸಿಕೆ:** ಶಾಲೆ, ವಿದ್ಯುತ್ ಪೂರೈಕೆ ವಿಷಯದಲ್ಲಿ ಮೂರೂ ಪಕ್ಷಗಳು ಸಮಾನ ಅಂಕ ಗಿಟ್ಟಿಸಿವೆ. ಕೃಷಿ ಸಾಲ ಕೊಡಿಸುವಲ್ಲಿ ಬಿಜೆಪಿ, ಕಾಂಗ್ರೆಸ್ ಒಂದೇ ರೀತಿಯ ಸಾಧನೆ ಮಾಡಿದ್ದರೆ, ಜೆಡಿಎಸ್ ಸ್ವಲ್ಪ ಹಿಂದೆ ಉಳಿದಿದೆ.

ಗ್ರಾಮೀಣ ಪ್ರದೇಶದಲ್ಲಿ ರಸ್ತೆ ಹಾಗೂ ಸಾರಿಗೆ ಸೌಲಭ್ಯ ಒದಗಿಸುವ ವಿಷಯದಲ್ಲೂ ಜೆಡಿಎಸ್‌ಗೆ ಕಡಿಮೆ ಅಂಕ ದೊರೆತಿದೆ.

ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಪೂರೈಕೆ ವಿಷಯದಲ್ಲಿ ಬಿಜೆಪಿಗೆ 7.4, ಕಾಂಗ್ರೆಸ್‌ಗೆ 7.1 ಅಂಕ ಸಿಕ್ಕಿದೆ. ಆದರೆ, ಜೆಡಿಎಸ್ ಶಾಸಕರು ಒಟ್ಟಾರೆ ಪಡೆದ ಅಂಕ 6.8. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಕಲ್ಪಿಸುವ ವಿಷಯದಲ್ಲಿ ಜೆಡಿಎಸ್ ಮುಗ್ಗರಿಸಿದೆ.

ಶಿಕ್ಷಣ, ತರಬೇತಿ, ಉದ್ಯೋಗದ ವಿಷಯದಲ್ಲಿ ಗ್ರಾಮೀಣ ಭಾಗದಲ್ಲಿ ಮೂರೂ ಪಕ್ಷಗಳು ಸಮಾನ ಸಾಧನೆ ಮಾಡಿವೆ. ಆದರೆ, ಯಾವ ಪಕ್ಷದ ಅಂಕ ಗಳಿಕೆಯೂ ಏಳಕ್ಕೆ ಏರಿಲ್ಲ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ವಿಷಯದಲ್ಲಿ ಗ್ರಾಮೀಣ ಜನರು ಮೂರು ಪಕ್ಷಗಳಿಗೆ ಸಮಾನ ಅಂಕಗಳನ್ನೇ ನೀಡಿದ್ದಾರೆ. ಆದರೆ, ನಗರಗಳಲ್ಲಿ ಜೆಡಿಎಸ್‌ಗೆ ಕಡಿಮೆ ಅಂಕ ಸಿಕ್ಕಿದೆ.




## ನಗರ, ಗ್ರಾಮೀಣ ಲೆಕ್ಕಾಚಾರ

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾಂಗ್ರೆಸ್, ಬಿಜೆಪಿ ಶಾಸಕರು ಸರಿಸುಮಾರು ಸಮಾನ ಅಂಕ ಪಡೆದಿದ್ದರೆ, ರೈತರ ಪಕ್ಷವೆಂದೇ ಬಿಂಬಿಸಿಕೊಳ್ಳುವ ಜೆಡಿಎಸ್ ಗ್ರಾಮೀಣ ಪ್ರದೇಶದಲ್ಲಿ ತುಸು ಹಿನ್ನಡೆ ಅನುಭವಿಸಿದೆ.

ನಗರ ಪ್ರದೇಶದ ಮತದಾರರು ಬಿಜೆಪಿ ಶಾಸಕರಿಗೆ ಶೇ 7.3 ಅಂಕ ನೀಡಿದ್ದಾರೆ. ಕಾಂಗ್ರೆಸ್ ಎರಡೂ ಕಡೆಗಳಲ್ಲಿ 7.1 ಅಂಕ ಪಡೆದಿದೆ. ಆದರೆ, ಜೆಡಿಎಸ್ ಶಾಸಕರಿಗೆ ನಗರಗಳಲ್ಲಿ 7.1 ಅಂಕ ಸಿಕ್ಕಿದ್ದರೆ, ಗ್ರಾಮೀಣ ಪ್ರದೇಶದಲ್ಲಿ 6.9 ಅಂಕ ಸಿಕ್ಕಿದೆ.

**ವಿಶ್ವಾಸಾರ್ಹತೆ ಹೆಚ್ಚು:** ನಗರ ಪ್ರದೇಶಗಳಲ್ಲಿ ಜೆಡಿಎಸ್ ಶಾಸಕರ ವಿಶ್ವಾಸಾರ್ಹತೆ ಹೆಚ್ಚಿದೆ. ಗ್ರಾಮೀಣ ಭಾಗದಲ್ಲಿ ಮೂರೂ ಪಕ್ಷಗಳ ಶಾಸಕರ ವಿಶ್ವಾಸಾರ್ಹತೆ ಸಮನಾಗಿವೆ.

## ಗ್ರಾಮೀಣ ಪ್ರದೇಶ - ವಿವಿಧ ವಿಷಯಗಳಲ್ಲಿ ಪಕ್ಷಗಳ ಶಾಸಕರ ಸಾಧನೆ (10 ಅಂಕಗಳಲ್ಲಿ)




## ನಗರ ಪ್ರದೇಶ - ವಿವಿಧ ವಿಷಯಗಳಲ್ಲಿ ಪಕ್ಷಗಳ ಶಾಸಕರ ಸಾಧನೆ (10 ಅಂಕಗಳಲ್ಲಿ)



ಸರ್ಕಾರದ 'ಭಾಗ್ಯ'ಗಳು ಎಷ್ಟು ಯೋಗ್ಯ: 'ದಕ್ಷ್', 'ಪ್ರಜಾವಾಣಿ' ಸಮೀಕ್ಷೆಯಲ್ಲಿ ಮತದಾರರ ಅಭಿಪ್ರಾಯ

# ಅನ್ನಕ್ಕೆ ಚಿನ್ನದ ಗರಿ, ಕೃಷಿಗೆ ಖುಷಿ!

ಪ್ರಜಾವಾಣಿ ವಾರ್ತೆ




**ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದ ಮೇಲೆ 'ಭಾಗ್ಯ'ಗಳನ್ನೇ ಕರುಣಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರನ್ನು ಮೆಚ್ಚಿಸುವ, ಓಲೈಸುವ ಹಾದಿಯಲ್ಲಿ ಸಾಗಲು ಪ್ರಯತ್ನಿಸಿದ್ದಾರೆ.

ಹತ್ತಾರು ಭಾಗ್ಯಗಳನ್ನು ಅನುಷ್ಠಾನ ಮಾಡಿ ಜನಪ್ರಿಯತೆಯ ಉತ್ತುಂಗಕ್ಕೆ ಏರುವ ಯತ್ನವನ್ನೂ ನಡೆಸಿದ್ದಾರೆ. ಈ ಭಾಗ್ಯಗಳ ಬಗ್ಗೆ ಮತದಾರರ ಒಲುವು-ನಿಲುವು ಹೇಗಿದೆ, ಅದು ಜನರಿಗೆ ತಲುಪಿದೆಯೇ ಎಂಬ ಬಗ್ಗೆ **'ದಕ್ಷ್'** ಸಮೀಕ್ಷೆಯಲ್ಲಿ ಜನಮತ ಸಂಗ್ರಹಿಸಲಾಗಿದೆ. ಅದರ ಪೂರ್ಣ ಪಾಠ ಇಲ್ಲಿದೆ:

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ 'ಹಸಿವು ಮುಕ್ತ ಕರ್ನಾಟಕ' ನಿರ್ಮಾಣ ತಮ್ಮ ಕನಸು ಎಂದು ಪ್ರತಿಪಾದಿಸಿದ ಸಿದ್ದರಾಮಯ್ಯ, ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬದ ತಲಾ ಸದಸ್ಯರಿಗೆ ಒಂದು ಕೆ.ಜಿ ಅಕ್ಕಿಗೆ ₹1ರ ದರದಲ್ಲಿ ತಿಂಗಳಿಗೆ ಏಳು ಕೆ.ಜಿ. ಅಕ್ಕಿ ನೀಡುವುದಾಗಿ ಪ್ರಕಟಿಸಿದರು. 'ಅನುಷ್ಠಾನಯೋಗ್ಯವಲ್ಲದ ಯೋಜನೆ' ಎಂದು ಆರ್ಥಿಕ ವಿಶ್ಲೇಷಕರು ಟೀಕಿಸಿದರು. ಅದಕ್ಕೆಲ್ಲ ತಲೆಕೆಡಿಸಿಕೊಳ್ಳದ ಸಿದ್ದರಾಮಯ್ಯ 'ಅನ್ನಭಾಗ್ಯ'ದ ಹೆಸರಿನಲ್ಲಿ ಅಕ್ಕಿ ವಿತರಿಸುವ ಯೋಜನೆ ಜಾರಿಗೆ ತಂದರು. ₹1ರ ಬದಲು ಉಚಿತವಾಗಿ ಅಕ್ಕಿ ವಿತರಿಸುವ ಯೋಜನೆಯಾಗಿ ಇದನ್ನು ಪರಿವರ್ತಿಸಿದರು. ರಾಜ್ಯದ 1.08 ಕೋಟಿ ಕುಟುಂಬಗಳು ಅಂದರೆ ಸರಿಸುಮಾರು 4 ಕೋಟಿಗೂ ಹೆಚ್ಚಿನ ಜನರು ಈಗ ಉಚಿತ ಅಕ್ಕಿಭಾಗ್ಯ ಪಡೆಯುತ್ತಿದ್ದಾರೆ.

**13,298**
ಸಮೀಕ್ಷೆಯಲ್ಲಿ ಭಾಗವಹಿಸಿದ ಜನರ ಸಂಖ್ಯೆ

ರಾಜ್ಯದ ಶೇ 79ರಷ್ಟು ಜನರು ಇದು ಉತ್ತಮ ಯೋಜನೆ ಎಂದು ಪ್ರತಿಪಾದಿಸಿದ್ದಾರೆ. ಶೇ 15ರಷ್ಟು ಮಂದಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಶೇ 6ರಷ್ಟು ಮಂದಿ ನಾವು ಈ ಯೋಜನೆಯ ಸೌಲಭ್ಯ ಪಡೆದಿಲ್ಲ ಎಂದು ತಿಳಿಸಿದ್ದಾರೆ.

ಮಳೆಯಾಶ್ರಿತ ಕೃಷಿಯನ್ನು ನೆಚ್ಚಿಕೊಂಡ ರೈತರ ಜಮೀನಿಗೆ ನೀರು ಒದಗಿಸಲು ರಾಜ್ಯ ಸರ್ಕಾರ 'ಕೃಷಿ ಭಾಗ್ಯ' ಯೋಜನೆ ಜಾರಿಗೆ ತಂದಿದೆ. ಇಲ್ಲಿಯವರೆಗೆ 2 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಇದರಿಂದಾಗಿ ಒಣಬೇಸಾಯ ನೆಚ್ಚಿಕೊಂಡ ರೈತರ ಹೊಲದ ಇಳುವರಿ ಶೇ 32ರಷ್ಟು ಹೆಚ್ಚಾಗಿದೆ. ರೈತರಲ್ಲಿ ಸಂತಸ ಮೂಡಿದೆ ಎಂದೂ ಅದು ಪ್ರತಿಪಾದಿಸುತ್ತಿದೆ. ಈ ಬಗ್ಗೆ ವಿಚಾರಿಸಿದಾಗ ಶೇ 58ರಷ್ಟು ರೈತರು ಮೆಚ್ಚುಗೆ ಸೂಚಿಸಿದ್ದಾರೆ. ಶೇ 17ರಷ್ಟು ಜನರು 'ಈ ಯೋಜನೆ ಸಿಕ್ಕಿಲ್ಲ' ಎಂದು ಹೇಳಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ, ಶಾಲಾ ಮಕ್ಕಳಿಗೆ ಸೈಕಲ್ ವಿತರಿಸುವ ಯೋಜನೆಯನ್ನು ಸಿದ್ದರಾಮಯ್ಯ ಸರ್ಕಾರ ಮುಂದುವರಿಸಿದೆ. ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಸೀಮಿತವಾಗಿದ್ದ ಯೋಜನೆಯನ್ನು ಅನುದಾನಿತ ಶಾಲಾ ಮಕ್ಕಳಿಗೂ ವಿಸ್ತರಿಸಲಾಗಿದೆ. ಸರ್ಕಾರದ ಅತ್ಯಂತ ಜನಪ್ರಿಯ ಯೋಜನೆಗೆ ಶೇ 69 ಅಂಕಗಳನ್ನು ಮತದಾರರು ನೀಡಿದ್ದಾರೆ. ಶೇ 13ರಷ್ಟು ಮಂದಿ 'ಈ ಯೋಜನೆ ತಲುಪಿಲ್ಲ' ಎಂದು ವಿವರಿಸಿದ್ದಾರೆ.

ಅನುಷ್ಠಾನದ ವಿವಿಧ ಹಂತದಲ್ಲಿರುವ 'ಮುಖ್ಯಮಂತ್ರಿ ಅನಿಲ ಭಾಗ್ಯ' ಯೋಜನೆಗೆ ಶೇ 64ರಷ್ಟು ಅಂಕ ಸಿಕ್ಕಿದೆ.

ಅಡುಗೆ ಅನಿಲ ಸಂಪರ್ಕ ಹೊಂದಿಲ್ಲದ ಕುಟುಂಬಗಳಿಗೆ ಸಿಲಿಂಡರ್ ಪೂರೈಸಿ, ಸೀಮೆಎಣ್ಣೆ ಬಳಕೆಯನ್ನು ಕೊನೆಗಾಣಿಸಲು ಕೇಂದ್ರ ಸರ್ಕಾರ 'ಉಜ್ವಲ' ಯೋಜನೆ ರೂಪಿಸಿದೆ. ಕೇಂದ್ರ ಸರ್ಕಾರದ ನಿಯಮಗಳ ಕಾರಣಕ್ಕೆ 20 ಲಕ್ಷ ಫಲಾನುಭವಿಗಳಿಗೆ ಮಾತ್ರ ಸಿಲಿಂಡರ್ ಸಿಗಲಿದೆ. 'ಉಜ್ವಲ' ಯೋಜನೆ ವ್ಯಾಪ್ತಿಗೆ ಒಳಪಡದ 15 ಲಕ್ಷ ಬಿಪಿಎಲ್ ಕುಟುಂಬಗಳಿಗೆ 'ಅನಿಲ ಭಾಗ್ಯ' ಯೋಜನೆ ರೂಪಿಸಲಾಗಿದೆ. ಪ್ರತಿ ಕುಟುಂಬಕ್ಕೆ 14.2 ಕೆ.ಜಿಯ ಒಂದು ಸಿಲಿಂಡರ್, ಸ್ಟೌ, ರೆಗ್ಯುಲೇಟರ್ ಹಾಗೂ ಎರಡು ಬಾರಿ ಸಿಲಿಂಡರ್ ತುಂಬಿಸಿಕೊಡುವ ಯೋಜನೆಯಡಿ ಪ್ರತಿ ಕುಟುಂಬಕ್ಕೆ ₹4,040ರಂತೆ ಸುಮಾರು ₹1,200 ಕೋಟಿ ವೆಚ್ಚವಾಗಬಹುದು ಎಂಬ ಅಂದಾಜಿದೆ.

ಈ ಯೋಜನೆ ಕುರಿತು ಕೇಳಲಾದ ಪ್ರಶ್ನೆಗೆ ಶೇ 64ರಷ್ಟು ಮತಗಳು ಬಿದ್ದಿವೆ. ಶೇ 23ರಷ್ಟು ಜನ ಅತೃಪ್ತಿ ತೋರಿದ್ದಾರೆ. ಶೇ 13ರಷ್ಟು ಮಂದಿ 'ಗೊತ್ತಿಲ್ಲ' ಎಂದು ಹೇಳಿದ್ದಾರೆ.

## ಇಂದಿರಾ ಕ್ಯಾಂಟೀನ್‌ಗೆ ಭರ್ಜರಿ ಸ್ಪಂದನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಸರ್ಕಾರ ಆರಂಭಿಸಿರುವ ಇಂದಿರಾ ಕ್ಯಾಂಟೀನ್‌ಗೆ ಭರ್ಜರಿ ಸ್ಪಂದನೆ ಸಿಕ್ಕಿದೆ.

ಕಳೆದ ವರ್ಷದ ಆಗಸ್ಟ್‌ನಿಂದ ₹5 ದರದಲ್ಲಿ ಉಪಾಹಾರ ಹಾಗೂ ₹10 ದರದಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಊಟ ಒದಗಿಸುವ ಸೌಲಭ್ಯವನ್ನು ಸರ್ಕಾರ ಜಾರಿ ಮಾಡಿದೆ.

ಇಂದಿರಾ ಕ್ಯಾಂಟೀನ್ ಕುರಿತು ಸಮೀಕ್ಷೆಯಲ್ಲಿ ಕೇಳಿದ ಪ್ರಶ್ನೆಗೆ ಬೆಂಗಳೂರಿನ ಮತದಾರರು ಸರಾಸರಿ ಶೇ 97ರಷ್ಟು ಅಂಕ ಕೊಟ್ಟಿದ್ದಾರೆ. ಆದರೆ, ಬಿಬಿಎಂಪಿಯ ಗಡಿಭಾಗದಲ್ಲಿರುವ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಶೇ 45ರಿಂದ ಶೇ 65 ಅಂಕಗಳು ದೊರಕಿವೆ.



ರಾಜಧಾನಿಯಿಂದ ಹೊರಗಿನ ಜಿಲ್ಲೆಗಳಲ್ಲಿ ಇದೇ ಜನವರಿಯಿಂದ ಈಚೆಗೆ ಇಂದಿರಾ ಕ್ಯಾಂಟೀನ್‌ಗಳು ಆರಂಭವಾಗಿವೆ. ಈ ಭಾಗದಲ್ಲಿ ಶೇ 31ರಷ್ಟು ಜನರು ಮಾತ್ರ ತೃಪ್ತಿ ವ್ಯಕ್ತಪಡಿಸಿದ್ದಾರೆ. ಶೇ 36ರಷ್ಟು ಜನರು ಅತೃಪ್ತಿ ತೋರಿದ್ದಾರೆ. ಶೇ 33ರಷ್ಟು ಜನರು 'ಬಳಸಿಲ್ಲ' ಎಂದು ತಿಳಿಸಿದ್ದಾರೆ.

### ಯಾವುದರಲ್ಲಿ ಎಷ್ಟು ಅಂಕ?

| ಹೆಸರು | ಪಕ್ಷ | ಜಿಲ್ಲೆ | ಕ್ಷೇತ್ರ | ಒಟ್ಟು /10 | ಉತ್ತಮ ಶಾಲೆಗಳು | ಕುಡಿಯುವ ನೀರು | ವಿದ್ಯುತ್ | ರಸ್ತೆ | ಶಾಸಕರು ಕೈಗೆ ಸಿಗುತ್ತಾರಾ? |
|---|---|---|---|---|---|---|---|---|---|
| ಅಶೋಕ್ ಖೇಣಿ | ಕೆಎಂಪಿ | ಬೀದರ್ | ಬೀದರ್ ದಕ್ಷಿಣ | 8.05 | 8.65 | 9.13 | 7.54 | 9.29 | 7.06 |
| ಮಲ್ಲಿಕಾರ್ಜುನ ಖೂಬಾ | ಜೆಡಿಎಸ್ | ಬೀದರ್ | ಬಸವಕಲ್ಯಾಣ | 7.43 | 7.67 | 7.75 | 5.58 | 8.14 | 5.04 |
| ರಹೀಂ ಖಾನ್ | ಕಾಂಗ್ರೆಸ್ | ಬೀದರ್ | ಬೀದರ್ | 7.42 | 7.15 | 7.44 | 7.35 | 7.15 | 6.62 |
| ಪ್ರಭು ಬಿ. ಚೌವ್ಹಾಣ | ಬಿಜೆಪಿ | ಬೀದರ್ | ಔರಾದ | 7.13 | 7.45 | 7.51 | 6.62 | 7.46 | 6.52 |
| ಖಮರುಲ್ ಇಸ್ಲಾಂ (ದಿವಂಗತ) | ಕಾಂಗ್ರೆಸ್ | ಕಲಬುರ್ಗಿ | ಕಲಬುರ್ಗಿ ಉತ್ತರ | 7.08 | 7.16 | 6.61 | 7.35 | 6.88 | 6.67 |
| ಡಾ. ಉಮೇಶ್ ಜಾಧವ್ | ಕಾಂಗ್ರೆಸ್ | ಕಲಬುರ್ಗಿ | ಚಿಂಚೋಳಿ | 6.36 | 6.77 | 6.67 | 6.14 | 6.72 | 5.66 |
| ಜಿ. ರಾಮಕೃಷ್ಣ | ಕಾಂಗ್ರೆಸ್ | ಕಲಬುರ್ಗಿ | ಕಲಬುರ್ಗಿ ಗ್ರಾಮಾಂತರ | 7.49 | 7.44 | 7.54 | 7.25 | 7.97 | 6.42 |
| ಬಿ. ಆರ್. ಪಾಟೀಲ | ಕೆಜೆಪಿ | ಕಲಬುರ್ಗಿ | ಆಳಂದ | 7.37 | 6.93 | 8.06 | 7.69 | 7.20 | 6.46 |
| ರಮೇಶ ಭೂಸನೂರ | ಬಿಜೆಪಿ | ವಿಜಯಪುರ | ಸಿಂದಗಿ | 7.07 | 9.21 | 9.21 | 9.44 | 4.68 | 6.93 |
| ರಾಜು ಆಲಗೂರ | ಕಾಂಗ್ರೆಸ್ | ವಿಜಯಪುರ | ನಾಗಠಾಣ | 6.98 | 10 | 7.06 | 9.94 | 7.33 | 6.61 |
| ಯಶವಂತರಾಯಗೌಡ ಪಾಟೀಲ | ಕಾಂಗ್ರೆಸ್ | ವಿಜಯಪುರ | ಇಂಡಿ | 6.84 | 8.56 | 7.24 | 7.76 | 6.21 | 7.59 |
| ಶಿವಾನಂದ ಎಸ್. ಪಾಟೀಲ | ಕಾಂಗ್ರೆಸ್ | ವಿಜಯಪುರ | ಬಸವನ ಬಾಗೇವಾಡಿ | 6.81 | 9.50 | 4.78 | 7.39 | 6.72 | 8.17 |
| ಎ. ಎಸ್. ಪಾಟೀಲ ನಡಹಳ್ಳಿ | ಕಾಂಗ್ರೆಸ್ | ವಿಜಯಪುರ | ದೇವರ ಹಿಪ್ಪರಗಿ | 5.15 | 8.89 | 4.50 | 9 | 3.39 | 5.65 |
| ಗುರು ಪಾಟೀಲ ಶಿರವಾಳ | ಬಿಜೆಪಿ | ಯಾದಗಿರಿ | ಶಹಾಪುರ | 6.58 | 7.70 | 5.83 | 6.11 | 5.69 | 5.83 |
| ಜೆ.ಟಿ.ಪಾಟೀಲ | ಕಾಂಗ್ರೆಸ್ | ಬಾಗಲಕೋಟೆ | ಬೀಳಗಿ | 7.32 | 7.33 | 7.40 | 7.33 | 7.33 | 7.27 |
| ಬಿ.ಬಿ. ಚಿಮ್ಮನಕಟ್ಟಿ | ಕಾಂಗ್ರೆಸ್ | ಬಾಗಲಕೋಟೆ | ಬದಾಮಿ | 7.08 | 7.60 | 7.29 | 7.52 | 6.90 | 5.04 |
| ಸಿದ್ದು ಬಿ. ನ್ಯಾಮಗೌಡ | ಕಾಂಗ್ರೆಸ್ | ಬಾಗಲಕೋಟೆ | ಜಮಖಂಡಿ | 8.76 | 7.67 | 7.67 | 7.67 | 7.67 | 8.83 |
| ಎಚ್.ವೈ. ಮೇಟಿ | ಕಾಂಗ್ರೆಸ್ | ಬಾಗಲಕೋಟೆ | ಬಾಗಲಕೋಟ | 8.04 | 8.44 | 8.44 | 8.51 | 8.44 | 8.37 |

### ಅಂಕ 'ಗಣಿತ'

'ದಕ್ಷ್' ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

### ಸಮೀಕ್ಷೆಯಲ್ಲಿ ಕೇಳಿದ ಪ್ರಶ್ನೆಗಳು

1. ಕಾನೂನು ಮತ್ತು ಸುವ್ಯವಸ್ಥೆ
2. ಉತ್ತಮ ಸಾರಿಗೆ ವ್ಯವಸ್ಥೆ
3. ಉತ್ತಮ ರಸ್ತೆ
4. ಶಾಸಕರ ಲಭ್ಯತೆ
5. ಉತ್ತಮ ವಿದ್ಯುತ್ ಸೌಲಭ್ಯ
6. ಉದ್ಯೋಗಾವಕಾಶ
7. ಉದ್ಯೋಗ ಮತ್ತು ಶಿಕ್ಷಣ
8. ಉದ್ಯೋಗ ತರಬೇತಿ
9. ಶಾಸಕರ ವಿಶ್ವಾಸಾರ್ಹತೆ
10. ಆಸ್ಪತ್ರೆಗಳು
11. ಮಹಿಳಾ ಸುರಕ್ಷತೆ
12. ಕೃಷಿ ಸಾಲ ಲಭ್ಯತೆ
13. ಕೃಷಿಗೆ ಸಾಕಷ್ಟು ಉದ್ಯೋಗ ಪೂರೈಕೆ
14. ಆಹಾರ ಸಬ್ಸಿಡಿ ವಿತರಣೆ
15. ಒಳಚರಂಡಿ ವ್ಯವಸ್ಥೆ
16. ಗುಣಮಟ್ಟದ ನೀರು ಪೂರೈಕೆ
17. ಭಯೋತ್ಪಾದನೆ ನಿಗ್ರಹ
18. ಉತ್ತಮ ಶಾಲೆಗಳು
19. ಪರಿಸರ ಸಂರಕ್ಷಣೆ
20. ಕೃಷಿ ಉತ್ಪನ್ನಗಳಿಗೆ ಬೆಲೆ
21. ನೀರಾವರಿ ಯೋಜನೆಗಳು
22. ಬಿತ್ತನೆ ಬೀಜ, ರಸಗೊಬ್ಬರ ಸಬ್ಸಿಡಿ
23. ಕಸ ವಿಲೇವಾರಿ
24. ಭ್ರಷ್ಟಾಚಾರ ನಿಗ್ರಹ
25. ಕೆರೆ ಪುನರುಜ್ಜೀವನ
26. ಪಾರ್ಕಿಂಗ್ ಸೌಲಭ್ಯ
27. ಉದ್ಯಾನಗಳ ನಿರ್ವಹಣೆ
28. ಸಂಚಾರ ವ್ಯವಸ್ಥೆ

# ಕಾನೂನು ಮತ್ತು ಸುವ್ಯವಸ್ಥೆ: ಸರ್ಕಾರಕ್ಕೆ ಸಿಗದ ಮನ್ನಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ವಿರೋಧ ಪಕ್ಷಗಳು ಆಪಾದಿಸುತ್ತಿವೆ. ಈ ಸಂದರ್ಭದಲ್ಲಿ, 'ದಕ್ಷ್' ಸಂಸ್ಥೆ ಜತೆ ನಡೆಸಿದ ಸಮೀಕ್ಷೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುರಿತು ಕಂಡುಕೊಂಡ ಜನಾಭಿಪ್ರಾಯವನ್ನು 'ಪ್ರಜಾವಾಣಿ' ಇಲ್ಲಿ ಪ್ರಸ್ತುತಪಡಿಸುತ್ತಿದೆ.

ವಿರೋಧ ಪಕ್ಷಗಳ ಇಂತಹ ಆರೋಪ ಕಾವೇರುವುದಕ್ಕೆ ಮುನ್ನವೇ ನಡೆಸಿದ ಸಮೀಕ್ಷೆಯಲ್ಲಿ, ಕಾನೂನು ಮತ್ತು ಸುವ್ಯವಸ್ಥೆ ಕುರಿತು ಕೇಳಲಾದ ಪ್ರಶ್ನೆಗೆ ರಾಜ್ಯ ಸರ್ಕಾರ ಅತ್ಯುತ್ತಮ ಅಂಕವನ್ನೇನೂ ಪಡೆದಿಲ್ಲ. ಸಂಗ್ರಹಿಸಿದ ದತ್ತಾಂಶಗಳನ್ನು ಕ್ರೋಡೀಕರಿಸಿ, ಅದನ್ನು ಮರು ವಿಭಜಿಸಿ, 10 ಅಂಕಗಳಿಗೆ ಜನರು ಎಷ್ಟು ಅಂಕ ಕೊಟ್ಟಿದ್ದಾರೆ ಎಂದು ಸಮೀಕ್ಷಾ ವರದಿ ವಿಶ್ಲೇಷಿಸಿದೆ.

**ಕಾನೂನು ಮತ್ತು ಸುವ್ಯವಸ್ಥೆ: ವಲಯವಾರು ಮತದಾರರ ಅಭಿಮತ** (10 ಅಂಕಗಳಲ್ಲಿ)



| ವಲಯ | ಅಂಕ |
|---|---|
| ಬಿಬಿಎಂಪಿ (ಬೆಂಗಳೂರು) | 7.0 |
| ಮಧ್ಯ ಕರ್ನಾಟಕ | 6.9 |
| ಕರಾವಳಿ ಕರ್ನಾಟಕ | 7.6 |
| ಹೈದರಾಬಾದ್–ಕರ್ನಾಟಕ | 6.6 |
| ಮುಂಬೈ–ಕರ್ನಾಟಕ | 7.5 |
| ಹಳೆ ಮೈಸೂರು | 7.0 |

ಈ ವಿಷಯದಲ್ಲಿ ಇಡೀ ರಾಜ್ಯದ ಸರಾಸರಿ ಲೆಕ್ಕದಲ್ಲಿ 10ಕ್ಕೆ 7.1 ಅಂಕ ಸಿಕ್ಕಿದೆ. ಇದರಿಂದ ಅದು 'ಮೊದಲ ದರ್ಜೆ'ಯಲ್ಲಿ ತೇರ್ಗಡೆಯಾಗಿದೆಯಾದರೂ, ಕಾನೂನು ಮತ್ತು ಸುವ್ಯವಸ್ಥೆ ಪಕ್ಕಾ ಸರಿದಾರಿಯಲ್ಲಿದೆ ಎಂಬುದನ್ನು ಸಾಬೀತು ಪಡಿಸುವಂತೆ ಎಲ್ಲಿಯೂ 10ಕ್ಕೆ 10 ಅಂದರೆ, ನೂರಕ್ಕೆ ನೂರು ಉತ್ತಮ ಆಡಳಿತ ಇದೆ ಎಂದು ಜನರು ಹೇಳಿಲ್ಲ.

224 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಸಮೀಕ್ಷೆ ಆಧರಿಸಿ ಕಾನೂನು ಮತ್ತು ಸುವ್ಯವಸ್ಥೆ ವಲಯವಾರು ಹೇಗಿದೆ ಎಂದು ಅರ್ಥೈಸಿಕೊಳ್ಳುವ ಯತ್ನವನ್ನೂ ಸಮೀಕ್ಷೆಯಲ್ಲಿ ಮಾಡಲಾಗಿದೆ. ಇಲ್ಲಿಯೂ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಬಹುತೇಕ ಪ್ರದೇಶಗಳಲ್ಲಿ ಸರಾಸರಿ ಅಂಕ 7ಕ್ಕಿಂತ ಕಡಿಮೆ ಇದೆ.

ಮಧ್ಯ ಕರ್ನಾಟಕದ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳ ಮತದಾರರು ತಮ್ಮ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಉಳಿದ ಐದು ವಲಯಗಳಿಗೆ ಹೋಲಿಸಿದರೆ ಈ ಭಾಗದಲ್ಲೇ 7.88 ಅಂಕ ರಾಜ್ಯ ಸರ್ಕಾರಕ್ಕೆ ಸಿಕ್ಕಿದೆ.

ಆದರೆ, ಈ ವಲಯದ ಗ್ರಾಮೀಣ ಪ್ರದೇಶದ ಜನರು ಮಾತ್ರ 6.51 ಅಂಕ ಕೊಟ್ಟಿದ್ದಾರೆ. ನಗರ ಪ್ರದೇಶದಲ್ಲಿ ಉತ್ತಮವಾಗಿದ್ದರೂ ಗ್ರಾಮೀಣ ಪ್ರದೇಶದ ಜನ ಅತೃಪ್ತಿ ಹೊಂದಿರುವುದು ಇದರಿಂದ ಸ್ಪಷ್ಟ.

ಆರು ವಲಯಗಳಿಗೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಸರ್ಕಾರಕ್ಕೆ ಅತ್ಯಂತ ಕಡಿಮೆ ಅಂಕ ಸಿಕ್ಕಿದೆ. ಅಂದರೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಿಲ್ಲ ಎಂಬುದನ್ನು ಸಮೀಕ್ಷೆ ತೋರಿಸಿದೆ. ಈ ಭಾಗದ ಗ್ರಾಮೀಣ ಪ್ರದೇಶದಲ್ಲಂತೂ ಸರ್ಕಾರ ಪಡೆದ ಅಂಕ 6.48.

ಮುಂಬೈ ಕರ್ನಾಟಕದಲ್ಲಿ ಮತದಾರರು ಸರ್ಕಾರದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶದ ಜನರು ಕಾನೂನು ಮತ್ತು ಸುವ್ಯವಸ್ಥೆ ವಿಷಯದಲ್ಲಿ ಸರ್ಕಾರಕ್ಕೆ ಒಳ್ಳೆಯ ಅಂಕವನ್ನೇ ದಯಪಾಲಿಸಿದ್ದಾರೆ. ಈ ಭಾಗದಲ್ಲಿ ಸರ್ಕಾರ ಪಡೆದ ಸರಾಸರಿ ಅಂಕ 7.64.

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರು ಸೇರಿದಂತೆ ಹಳೆ ಮೈಸೂರು ಭಾಗದ 10 ಜಿಲ್ಲೆಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಸರ್ಕಾರ 7.03 ಅಂಕ ಪಡೆದಿದೆ.

ಇಡೀ ರಾಜ್ಯದ ಒಟ್ಟಾರೆ ಸರಾಸರಿಗಿಂತ ಈ ಭಾಗದಲ್ಲಿ ಕಡಿಮೆ ಅಂಕಗಳನ್ನು ಸರ್ಕಾರ ಗಿಟ್ಟಿಸಿದೆ. ಗ್ರಾಮೀಣ ಪ್ರದೇಶದಲ್ಲಿ 6.98 ಅಂಕ ಸಿಕ್ಕಿದ್ದರೆ, ನಗರ ಪ್ರದೇಶದಲ್ಲಿ 7.08 ಅಂಕವನ್ನು ಸರ್ಕಾರ ಪಡೆದಿದೆ.

## 'ಕದಡಿದ ಕರಾವಳಿ'ಯ ಸ್ಥಿತಿಗತಿಯೇ ಉತ್ತಮ!

ಇತ್ತೀಚಿನ ದಿನಮಾನಗಳಲ್ಲಿ ಕೋಮುಗಲಭೆ, ಮತೀಯ ಗೂಂಡಾಗಿರಿ ಹಾಗೂ ಮತೀಯ ದ್ವೇಷದ ಕೊಲೆಗಳಿಗೆ ಕರಾವಳಿಯು ತುತ್ತಾಗಿರುವುದು ರಹಸ್ಯವೇನಲ್ಲ.

ಈ ಭಾಗದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ರಾಜ್ಯ ಗೃಹ ಇಲಾಖೆ ಕೂಡ ಒಪ್ಪಿಕೊಳ್ಳುತ್ತದೆ. 'ಹಿಂದೂ'ಗಳಿಗೆ ರಕ್ಷಣೆ ಇಲ್ಲವೆಂದು ಹೇಳುತ್ತಲೇ ಬಂದಿರುವ ಬಿಜೆಪಿ ನಾಯಕರು, ಇದಕ್ಕಾಗಿ ಮಂಗಳೂರು ಚಲೋ, ರ‍್ಯಾಲಿಗಳನ್ನೂ ನಡೆಸಿದ್ದಾರೆ. ಆದರೆ, ಸಮೀಕ್ಷೆಯಲ್ಲಿ ಮಾತ್ರ ಇದಕ್ಕಿಂತ ವ್ಯತಿರಿಕ್ತವಾದ ಅಭಿಮತ ಹೊರಹೊಮ್ಮಿದೆ.

ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ನಗರ ಪ್ರದೇಶಗಳ ಜನರು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರದ ಪಾತ್ರದ ಬಗ್ಗೆ ಕೇಳಿದ್ದಕ್ಕೆ, 10 ಅಂಕಗಳಿಗೆ 8.11 ಅಂಕ ನೀಡಿದ್ದಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಈ ಅಂಕ 7.32ರಷ್ಟಿದೆ. ನಗರ ಪ್ರದೇಶದ ಜನರು ಸರ್ಕಾರದ ಕ್ರಮದ ಬಗ್ಗೆ ಹೆಚ್ಚಿನ ತೃಪ್ತಿ ವ್ಯಕ್ತಪಡಿಸಿದ್ದಾರೆ.

ಮತ ಚಲಾವಣೆಯಲ್ಲಿ ಪ್ರಭಾವ ಬೀರುವ ಅಂಶಗಳು: 'ದಕ್ಷ್', 'ಪ್ರಜಾವಾಣಿ' ಸಮೀಕ್ಷೆಯಲ್ಲಿ ಮತದಾರರ ಮನದಾಳ

# ಮತ ನಿರ್ಣಯಕ್ಕೆ ಜಾತಿ ನಗಣ್ಯ, ಅಭ್ಯರ್ಥಿಯೇ ಮಾನ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಜಾತಿ ರಾಜಕಾರಣ' ವಿಜೃಂಭಿಸಲು ಆರಂಭವಾದ ಮೇಲೆ ಲೋಕಸಭೆ, ವಿಧಾನಸಭೆ ಮಾತ್ರವಲ್ಲ, ಎಲ್ಲ ಸ್ತರಗಳ ಚುನಾವಣೆಯಲ್ಲೂ ಗೆಲುವಿಗೆ 'ಜಾತಿ'ಯೇ ಮಾನದಂಡ ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಟಿಕೆಟ್ ನೀಡುವಾಗಲೂ ಜಾತಿಯೇ ಪ್ರಧಾನ 'ಅರ್ಹತೆ'ಯಾಗುತ್ತಿರುವುದನ್ನೂ ನೋಡುತ್ತಿದ್ದೇವೆ.

'ದಕ್ಷ್' ಸಂಸ್ಥೆ ಜತೆಗೂಡಿ 'ಪ್ರಜಾವಾಣಿ' ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಮಾತ್ರ ಇದಕ್ಕೆ ಭಿನ್ನವಾದ ಅಭಿಮತ ವ್ಯಕ್ತವಾಗಿದೆ. ಚುನಾವಣೆಯಲ್ಲಿ ಮತ ಹಾಕಲು ಜಾತಿ, ಧರ್ಮಕ್ಕಿಂತ ಅಭ್ಯರ್ಥಿ ಯಾರೆಂಬುದು ಪ್ರಮುಖವಾಗುತ್ತದೆ ಎಂದು ಹೆಚ್ಚು ಜನರು ಹೇಳಿದ್ದಾರೆ.

ಅಭ್ಯರ್ಥಿಗೆ ಮತ ಹಾಕಲು ಜಾತಿಯೇ ನಿರ್ಣಾಯಕ ಎಂದು ಕೇವಲ ಶೇ 6ರಷ್ಟು ಜನರು ಪ್ರತಿಪಾದಿಸಿದ್ದರೆ, ಜಾತಿ ಪ್ರಮುಖವೇನಲ್ಲ ಎಂದು ಶೇ 64ರಷ್ಟು ಜನರು ಹೇಳಿದ್ದಾರೆ. ಶೇ 30ರಷ್ಟು ಜನ ಮಾತ್ರ ಜಾತಿಯೂ ಮುಖ್ಯ ಎಂದಿದ್ದಾರೆ. ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಒಗ್ಗೂಡಿಸಿ ಸರಾಸರಿ ಪ್ರಮಾಣವನ್ನು ವಿಭಜಿಸಿದಾಗ ಇಂತಹ ಅಭಿಪ್ರಾಯ ಹೊರಬಂದಿದೆ.

ಈ ವಿಷಯದಲ್ಲಿ ರಾಜ್ಯವ್ಯಾಪಿ ಏಕಮತದ ಧ್ವನಿಯಿಲ್ಲ. ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯನ್ನೂ (ಬಿಬಿಎಂಪಿ) ಒಳಗೊಂಡಂತೆ ರಾಜ್ಯವನ್ನು ಆರು ವಲಯಗಳಾಗಿ ವಿಂಗಡಿಸಿ ನೋಡಿದರೆ ಆಯಾ ಪ್ರಾದೇಶಿಕತೆಗೆ ತಕ್ಕುದಾದ ವೈವಿಧ್ಯಗಳಿರುವ ಜನಮತವೂ ಸಮೀಕ್ಷೆಯಲ್ಲಿ ಲಭ್ಯವಾಗಿದೆ. ಕೆಲವು ವಲಯಗಳಲ್ಲಿ ಹೆಚ್ಚಿನವರು ಜಾತಿಗೆ ಮಣೆ ಹಾಕಿದ್ದಾರೆ. ಆದರೆ, ಮುಖ್ಯ, ಅತಿಮುಖ್ಯ ಎಂದು ಹೇಳಿದವರನ್ನು ಸೇರಿಸಿಕೊಂಡರೂ ಈ ಪ್ರಮಾಣ ಶೇ 48ನ್ನೂ ದಾಟಿಲ್ಲ. ಹೈದರಾಬಾದ್ ಕರ್ನಾಟಕ ವಲಯದಲ್ಲಿ ಶೇ 81ರಷ್ಟು ಜನರು ಜಾತಿ ನಗಣ್ಯ ಎಂಬ ಭಾವನೆ ಹೊಂದಿದ್ದಾರೆ.

**ಜಾತಿ–ಧರ್ಮದ ಹಂಗು:** ಎಲ್ಲ ಜಾತಿ, ಧರ್ಮ, ಭಾಷಿಕರನ್ನು ಒಡಲೊಳಗೆ ಇಟ್ಟುಕೊಂಡಿರುವ, ವಿದೇಶಿಯರೂ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಗೊಂಡಿರುವ ಬೆಂಗಳೂರು 'ಮಿನಿ ಇಂಡಿಯಾ'ದಂತೆ ಇರುವುದನ್ನು ಎಲ್ಲರೂ ಬಲ್ಲರು. ಇಲ್ಲಿಯೇ ಜಾತಿಯ ಹಂಗನ್ನು ಬಿಟ್ಟು ಜನ ಮತದಾನ ಮಾಡುತ್ತಾರೆ ಎಂದು ನಂಬಲಾಗಿದೆ.

ಆದರೆ, ಉಳಿದ ವಲಯಗಳಿಗೆ ಹೋಲಿಸಿದರೆ ಬಿಬಿಎಂಪಿ ವ್ಯಾಪ್ತಿಯ ಮತದಾರರು ಅಭ್ಯರ್ಥಿಯ ಜಾತಿ, ಧರ್ಮದ ಪರ ಹೆಚ್ಚು ಒಲವು ಹೊಂದಿದ್ದಾರೆ. ಜಾತಿ ಅತಿಮುಖ್ಯ, ಮುಖ್ಯ ಎಂದು ಹೇಳಿದವರ ಪ್ರಮಾಣ ಶೇ 48ರಷ್ಟಿದ್ದರೆ, ಅಭ್ಯರ್ಥಿಯ ಧರ್ಮ ಮುಖ್ಯ ಎಂದವರು ಶೇ 50ರಷ್ಟಿದ್ದಾರೆ.

ಮಧ್ಯ ಕರ್ನಾಟಕ (ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ), ಮುಂಬೈ ಕರ್ನಾಟಕ (ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ) ಜಿಲ್ಲೆಗಳಲ್ಲಿ ಕೂಡ ಜಾತಿಯೇ ಪ್ರಧಾನವಾಗಿಲ್ಲ. ಮಧ್ಯ ಕರ್ನಾಟಕದಲ್ಲಿ ಜಾತಿ ಮತ್ತು ಧರ್ಮ ಮುಖ್ಯ ಎಂದವರ ಪ್ರಮಾಣ ಕ್ರಮವಾಗಿ ಶೇ 47, ಶೇ 50ರಷ್ಟಿದೆ. ಮುಂಬೈ ಕರ್ನಾಟಕದಲ್ಲಿ ಜಾತಿಗೆ ಶೇ 29 ಹಾಗೂ ಧರ್ಮಕ್ಕೆ ಶೇ 33ರಷ್ಟು ಜನ ಮಣೆ ಹಾಕಿದ್ದಾರೆ.

ಕರಾವಳಿ ಕರ್ನಾಟಕದಲ್ಲಿ ಜಾತಿ, ಧರ್ಮಕ್ಕೆ ಕ್ರಮವಾಗಿ ಶೇ 40 ಹಾಗೂ ಶೇ 49 ಜನ ಆದ್ಯತೆ ನೀಡುವುದಾಗಿ ಹೇಳಿದ್ದಾರೆ. ಆದರೆ, ಮತಕ್ಕೆ ಜಾತಿಯೇ ಪ್ರಧಾನ ನೆಲೆಯಂತಿರುವ ಹಳೆ ಮೈಸೂರು ವಲಯದ ಮೈಸೂರು, ಹಾಸನ, ಮಂಡ್ಯ, ರಾಮನಗರ, ತುಮಕೂರು, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಕೂಡ ಇದಕ್ಕೆ ವ್ಯತಿರಿಕ್ತ ಅಭಿಪ್ರಾಯ ಹೊರಬಂದಿದೆ. ಜಾತಿ ನಗಣ್ಯ ಎಂದು ಶೇ 52ರಷ್ಟು, ಧರ್ಮ ಮುಖ್ಯವಲ್ಲ ಎಂದು ಶೇ 63 ಜನರು ಪ್ರತಿಪಾದಿಸಿದ್ದಾರೆ.

**ಶೇ 53 ಜನರಿಗೆ ಪಕ್ಷ ಮುಖ್ಯ:** ಪಕ್ಷವನ್ನು ನೋಡಿ ಚುನಾವಣೆಯಲ್ಲಿ ಮತ ಹಾಕುತ್ತೀರಾ ಎಂಬ ಪ್ರಶ್ನೆಗೆ ಶೇ 53ರಷ್ಟು ಜನರು ಮುಖ್ಯ ಎಂದಿದ್ದರೆ, ಶೇ 14 ಜನ ಅತ್ಯಂತ ಮುಖ್ಯ ಎಂದಿದ್ದಾರೆ.

ಪಕ್ಷ ನಗಣ್ಯ ಎಂದವರು ಶೇ 33ರಷ್ಟು ಜನರು ಮಾತ್ರ. ಇದು ಇಡೀ ರಾಜ್ಯದ ಲೆಕ್ಕಾಚಾರವಾದರೆ, ಬೇರೆ ಬೇರೆ ವಲಯಗಳಲ್ಲಿ ಬೇರೆ ತೆರನಾದ ಅಭಿಮತ ಹೊರಬಿದ್ದಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 66, ಕರಾವಳಿ ಕರ್ನಾಟಕದಲ್ಲಿ ಶೇ 65, ಮುಂಬೈ ಕರ್ನಾಟಕದಲ್ಲಿ ಶೇ 58 ಜನ ಪಕ್ಷದ ಗುರುತೇ ಪ್ರಧಾನ ಎಂದು ಹೇಳಿದ್ದಾರೆ. ಆದರೆ, ಮಧ್ಯ ಕರ್ನಾಟಕದಲ್ಲಿ ಶೇ 48, ಹೈದರಾಬಾದ್ ಕರ್ನಾಟಕದಲ್ಲಿ ಶೇ 47, ಹಳೆ ಮೈಸೂರಿನಲ್ಲಿ ಶೇ 46ರಷ್ಟು ಜನರು ಪಕ್ಷ ಮುಖ್ಯವಾಗುತ್ತದೆ ಎಂದಿದ್ದಾರೆ.

## ರಾಜ್ಯ




## ಶಾಸಕರ ಆಯ್ಕೆಯ ಮಾನದಂಡ (ವಲಯವಾರು)




## ಅಂಕ 'ಗಣಿತ'

'ದಕ್ಷ್' ಹಾಗೂ ಪ್ರಜಾವಾಣಿ ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಜೆಡಿಎಸ್
ಜಿಲ್ಲೆ: ಚಿಕ್ಕಬಳ್ಳಾಪುರ
ಕ್ಷೇತ್ರ: ಶಿಡ್ಲಘಟ್ಟ



7.14/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.44 |
| ಕುಡಿಯುವ ನೀರು | 7.06 |
| ವಿದ್ಯುತ್ | 7.65 |
| ರಸ್ತೆ | 7.45 |
| ಶಾಸಕರು ಕೈಗೆ ಸಿಗುತ್ತಾರಾ? | 7.08 |

### ಎಂ. ಕೃಷ್ಣಾರೆಡ್ಡಿ
ಜೆಡಿಎಸ್
ಜಿಲ್ಲೆ: ಚಿಕ್ಕಬಳ್ಳಾಪುರ
ಕ್ಷೇತ್ರ: ಚಿಂತಾಮಣಿ



7.15/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.78 |
| ಕುಡಿಯುವ ನೀರು | 4.44 |
| ವಿದ್ಯುತ್ | 6.67 |
| ರಸ್ತೆ | 7.78 |
| ಶಾಸಕರು ಕೈಗೆ ಸಿಗುತ್ತಾರಾ? | 7.78 |

### ಎಚ್.ಸಿ. ಬಾಲಕೃಷ್ಣ
ಜೆಡಿಎಸ್
ಜಿಲ್ಲೆ: ರಾಮನಗರ
ಕ್ಷೇತ್ರ: ಮಾಗಡಿ



6.88/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.79 |
| ಕುಡಿಯುವ ನೀರು | 6.73 |
| ವಿದ್ಯುತ್ | 6.67 |
| ರಸ್ತೆ | 6.68 |
| ಶಾಸಕರು ಕೈಗೆ ಸಿಗುತ್ತಾರಾ? | 6.37 |

### ಸಿ.ಪಿ. ಯೋಗೇಶ್ವರ್
ಕಾಂಗ್ರೆಸ್
ಜಿಲ್ಲೆ: ರಾಮನಗರ
ಕ್ಷೇತ್ರ: ಚನ್ನಪಟ್ಟಣ



7.08/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.93 |
| ಕುಡಿಯುವ ನೀರು | 7.07 |
| ವಿದ್ಯುತ್ | 7.07 |
| ರಸ್ತೆ | 7.20 |
| ಶಾಸಕರು ಕೈಗೆ ಸಿಗುತ್ತಾರಾ? | 6.00 |

### ಎಂ.ಟಿ.ಬಿ. ನಾಗರಾಜ್
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ಗ್ರಾಮಾಂತರ
ಕ್ಷೇತ್ರ: ಹೊಸಕೋಟೆ



6.34/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.71 |
| ಕುಡಿಯುವ ನೀರು | 7.41 |
| ವಿದ್ಯುತ್ | 7.29 |
| ರಸ್ತೆ | 6.82 |
| ಶಾಸಕರು ಕೈಗೆ ಸಿಗುತ್ತಾರಾ? | 6.08 |

### ಪಿಳ್ಳ ಮುನಿಶಾಮಪ್ಪ
ಜೆಡಿಎಸ್
ಜಿಲ್ಲೆ: ಬೆಂಗಳೂರು ಗ್ರಾಮಾಂತರ
ಕ್ಷೇತ್ರ: ದೇವನಹಳ್ಳಿ



7.38/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.83 |
| ಕುಡಿಯುವ ನೀರು | 9.06 |
| ವಿದ್ಯುತ್ | 9.01 |
| ರಸ್ತೆ | 7.66 |
| ಶಾಸಕರು ಕೈಗೆ ಸಿಗುತ್ತಾರಾ? | 6.49 |

### ಟಿ.ವೆಂಕಟರಮಣಯ್ಯ
ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ಗ್ರಾಮಾಂತರ
ಕ್ಷೇತ್ರ: ದೊಡ್ಡಬಳ್ಳಾಪುರ



6.98/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.96 |
| ಕುಡಿಯುವ ನೀರು | 8.10 |
| ವಿದ್ಯುತ್ | 6.44 |
| ರಸ್ತೆ | 7.44 |
| ಶಾಸಕರು ಕೈಗೆ ಸಿಗುತ್ತಾರಾ? | 3.56 |

### ಡಾ.ಕೆ. ಶ್ರೀನಿವಾಸಮೂರ್ತಿ
ಜೆಡಿಎಸ್
ಜಿಲ್ಲೆ: ಬೆಂಗಳೂರು ಗ್ರಾಮಾಂತರ
ಕ್ಷೇತ್ರ: ನೆಲಮಂಗಲ



8.04/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.85 |
| ಕುಡಿಯುವ ನೀರು | 8.59 |
| ವಿದ್ಯುತ್ | 8.79 |
| ರಸ್ತೆ | 8.59 |
| ಶಾಸಕರು ಕೈಗೆ ಸಿಗುತ್ತಾರಾ? | 7.86 |

## ಟ್ವಿಟ್ವಾದ...



ಕೇರಳದಲ್ಲಿ ಎಡಪಕ್ಷ/ ಕಾಂಗ್ರೆಸ್ ಆಡಳಿತ ಕೊನೆಗಾಣಿಸಲು ಬಿಜೆಪಿಗೆ ರಾಜೀವ್ ಚಂದ್ರಶೇಖರ್ ಅವರ ಅಗತ್ಯವಿದೆ, ಈ ಕಾರ್ಯಕ್ಕಾಗಿ ಅವರನ್ನು ರಾಜ್ಯಸಭೆಗೆ ಕಳುಹಿಸುವುದು ಮುಖ್ಯ ಎಂದು ವಿಜಯ ಸಂಕೇಶ್ವರ ಹೇಳಿದ್ದಾರೆ.

-ಡಿ.ಪಿ.ಸತೀಶ್, @dp_satish



ಹಾಗಿದ್ದರೆ, ಕನ್ನಡಿಗ ವಿಜಯ ಸಂಕೇಶ್ವರ ಅವರು ಬಿಜೆಪಿಗಾಗಿ ತ್ಯಾಗ ಮಾಡಿ, ನಾಲ್ಕು ವರ್ಷಗಳ ನಂತರ ಕೇರಳದಲ್ಲಿ ಗೆಲ್ಲಬೇಕು!

-ಜಯತೀರ್ಥ ನಾಡಗೌಡ, @jayateerthbn



ನಮ್ಮ ಗುಂಡ ಎಲೆಕ್ಷನ್‌ಗೆ ನಿಂತಿದ್ದ. ಓಟು ಕೇಳೋಕೆ ಹೋದ. 'ನಾ ಗೆದ್ದರೆ ಊರಲ್ಲಿ ಶಾಲೆ ಕಟ್ಟಿಸ್ತೀನಿ, ಆಸ್ಪತ್ರೆ ಕಟ್ಟಿಸ್ತೀನಿ, ಬಸ್ ಸಂಚಾರ ಸರಿ ಮಾಡ್ತೀನಿ, ಸೇತುವೆ ಕಟ್ಟಿಸ್ತೀನಿ... ಯಾರೋ ಹೇಳಿದ್ರು 'ಅಯ್ಯೋ ನಮ್ಮೂರಲ್ಲಿ ನದಿನೇ ಇಲ್ಲವಲ್ಲೋ ಗುಂಡ'. 'ಅದಕ್ಯಾಕೆ ಅಷ್ಟ್ ಬೇಜಾರು ಬುಡಣ್ಣ, ನದಿನೂ ಕಟ್ಟಿಸ್ ಬುಡವ' ಅಂದ!

-ನಮಸ್ತೆ ಇಂಡಿಯಾ @ambik4ever

### ಆರ್‌ಎಸ್‌ಎಸ್ ತರಬೇತಿ ಪಡೆದವರನ್ನು ಸೇರಿಸಿಕೊಳ್ಳುವುದಿಲ್ಲ: ಸಿದ್ದರಾಮಯ್ಯ

# ಯಡಿಯೂರಪ್ಪ ಪಕ್ಷಕ್ಕೆ ಬಂದರೂ ಬೇಡ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** 'ಯಡಿಯೂರಪ್ಪ ನಮ್ಮ ಪಕ್ಷಕ್ಕೆ ಬಂದರೂ ಸೇರಿಸಿಕೊಳ್ಳುವುದಿಲ್ಲ. ಕೋಮುವಾದ ಬೆಂಬಲಿಸುವವರನ್ನು, ಅದರ ಪರವಾಗಿ ಇರುವವರನ್ನು, ಆರ್‌ಎಸ್‌ಎಸ್‌ನಲ್ಲಿ ತರಬೇತಿ ಪಡೆದ ಯಾರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಯಡಿಯೂರಪ್ಪ ಕುರಿತಂತೆ ಆಡಿದ ಮಾತುಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಅವರು, 'ಯಡಿಯೂರಪ್ಪ ಸಂಕಷ್ಟಕ್ಕೆ ಒಳಗಾಗಿದ್ದಾರೋ ಗೊತ್ತಿಲ್ಲ. ಶಾಮನೂರು ಬಹಳ ಸೌಜನ್ಯದಿಂದ ಅವರನ್ನು ಪಕ್ಷಕ್ಕೆ ಕರೆದಿದ್ದಾರೆ. ಆದರೆ, ಶಾಮನೂರು ಹುಟ್ಟು ಕಾಂಗ್ರೆಸ್ಸಿಗ. ಅವರು ಕಾಂಗ್ರೆಸ್ ಬಿಡುವ ಪ್ರಶ್ನೆಯೇ ಇಲ್ಲ' ಎಂದು ಹೇಳಿದರು.

'ನಮ್ಮ ಹೋರಾಟವೇ ಕೋಮುವಾದದ ವಿರುದ್ಧ. ನಮ್ಮದು ಬಹು ಧರ್ಮ, ಬಹುಭಾಷೆ, ಬಹುಸಂಸ್ಕೃತಿಯ ದೇಶ. ಎಲ್ಲರನ್ನೂ ಸಮಾನವಾಗಿ ಗೌರವಿಸುವಂತಹ ಅವಕಾಶವನ್ನು ಸಂವಿಧಾನ ಕಲ್ಪಿಸಿಕೊಟ್ಟಿದೆ. ಇದರಲ್ಲಿ ನಂಬಿಕೆ ಇಟ್ಟುಕೊಂಡವರು ನಾವು. ಆದರೆ, ಕೆಲವರು ಬಾಯಲ್ಲಿ ಮಾತ್ರ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎನ್ನುತ್ತಾರೆ. ಆದರೆ, ಕೃತಿಯಲ್ಲಿ ಇಲ್ಲ. ನಿಜವಾದ ಅರ್ಥದಲ್ಲಿ ಎಲ್ಲರನ್ನೂ ಒಳಗೊಂಡಂತಹ, ಎಲ್ಲರನ್ನೂ ಅಭಿವೃದ್ಧಿಪಡಿಸುವ ಗುರಿ ಇರುವುದು ಕಾಂಗ್ರೆಸ್‌ಗೆ ಮಾತ್ರ' ಎಂದರು.

'ಮೋದಿ ದಾವಣಗೆರೆಗೆ ಬಂದು ಹೇಳಿದ್ದೇನು? ಯಡಿಯೂರಪ್ಪ ಅವರನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡು ಭ್ರಷ್ಟ ಸರ್ಕಾರ ಬೇಕೋ, ಸ್ಥಿರ ಸರ್ಕಾರ ಬೇಕೋ ಎಂದು ಕೇಳಿದ್ದಾರೆ. ಜೈಲಿಗೆ ಹೋಗಿ ಬಂದ ವ್ಯಕ್ತಿಯನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದ್ದಾರೆ. ಮುಂದೆ ಬಿಜೆಪಿ ಬಂದರೆ ಭ್ರಷ್ಟ ಸರ್ಕಾರ ಬರುತ್ತದೆ' ಎಂದು ವ್ಯಂಗ್ಯವಾಡಿದರು.

'ಐದು ವರ್ಷಗಳಲ್ಲಿ ನಾನೊಬ್ಬನೇ ಮುಖ್ಯಮಂತ್ರಿ. ಯಡಿಯೂರಪ್ಪ ಚೆಕ್ ಮೂಲಕ ಲಂಚ ತೆಗೆದುಕೊಂಡು ಜೈಲಿಗೆ ಹೋಗಿದ್ದರಿಂದ ಅವರ ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳಾದರು. ನನ್ನ ಮೇಲೆ ಕಳಂಕ ಇದೆಯೇ' ಎಂದು ಜನರನ್ನು ಕೇಳಿದರು.

ಮೋದಿ ರಾಜ್ಯಕ್ಕೆ ಬಂದಾಗ ಅಭಿವೃದ್ಧಿ ಬಗ್ಗೆ ಮಾತನಾಡುತ್ತಾರೆ; ರೈತರ ಸಾಲಮನ್ನಾ ಮಾಡುತ್ತಾರೆ ಎಂದು ನಿರೀಕ್ಷಿಸಿದ್ದೆ. ಸಾಲಮನ್ನಾದ ಬಗ್ಗೆ ಅವರು ಚಕಾರ ಎತ್ತಿಲ್ಲ. ಇಂತಹ ಸುಳ್ಳಿನ ಪ್ರಧಾನಿಯನ್ನು ಕಂಡಿದ್ದು ಸ್ವತಂತ್ರ ಭಾರತದಲ್ಲಿ ಇದೇ ಮೊದಲು ಎಂದು ಲೇವಡಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಶಾಸಕ ಶಾಮನೂರು ಶಿವಶಂಕರಪ್ಪ ಇದ್ದರು.

### ಮೂರು ಸ್ಥಾನಗಳಲ್ಲೂ ಜಯದ ವಿಶ್ವಾಸ



ರಾಜ್ಯಸಭೆ ಚುನಾವಣೆಯಲ್ಲಿ ಯಾರ ಬೆಂಬಲವನ್ನೂ ಪಡೆಯುವುದಿಲ್ಲ, ಮೂರೂ ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ವಿವಿಧ ಕಾಮಗಾರಿಗಳ ಉದ್ಘಾಟನೆಗಾಗಿ ಮಂಗಳವಾರ ನಗರಕ್ಕೆ ಆಗಮಿಸಿದ್ದ ಸಂದರ್ಭ ಹೆಲಿಪ್ಯಾಡ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಅವರು ಮಾತನಾಡಿದರು.

'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ, ಪ್ರಧಾನಿ ನರೇಂದ್ರ ಮೋದಿ ಎಷ್ಟು ಬಾರಿ ಬೇಕಾದರೂ ರಾಜ್ಯಕ್ಕೆ ಬರಲಿ. ನನಗೆ ಯಾರ ಭಯವೂ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರನ್ನೂ ಬರಬೇಡಿ ಎನ್ನಲಾಗದು' ಎಂದರು.

### 'ಆತ ನಾನಲ್ಲ'

'ಈಚೆಗೆ ಅಪಪ್ರಚಾರ ಮಾಡುವುದೇ ಪ್ರಚಾರವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ವಿಡಿಯೊದಲ್ಲಿ ನೃತ್ಯ ಮಾಡಿರುವುದು ನಾನಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

'ನನ್ನ ಬಗ್ಗೆ ಟೀಕೆ ಮಾಡಲು ಬೇರೆ ವಿಚಾರಗಳಿಲ್ಲ. ಹಾಗಾಗಿ, ಕೆಲವರು ಬೇಕಂತಲೇ ಅಪಪ್ರಚಾರಕ್ಕೆ ಇಳಿದಿದ್ದಾರೆ. ಒಂದುವೇಳೆ ಜನಪದ ನೃತ್ಯ ಮಾಡಿದರೂ ಅದು ತಪ್ಪಲ್ಲ' ಎಂದು ಹೇಳಿದರು.

'ನನ್ನನ್ನೇ ಹೋಲುವ ವ್ಯಕ್ತಿ ನೃತ್ಯ ಮಾಡಿದ ವಿಡಿಯೊದ ಸತ್ಯಾಸತ್ಯತೆ ತಿಳಿಯದೇ ಟೀಕಿಸುವುದು ಬಿಜೆಪಿಗೆ ವ್ಯಸನ. ಸುಳ್ಳು ಸುದ್ದಿಗಳನ್ನು ಹಬ್ಬಿಸುವುದೇ ಅವರ ಕಾಯಕ' ಎಂದರು.

# ಟಿಕೆಟ್ ಹಂಚಿಕೆ: ಕಾಂಗ್ರೆಸ್ ಮಹತ್ವದ ಸಭೆ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲು ಕೆಪಿಸಿಸಿ ಅಧ್ಯಕ್ಷ ಜಿ. ಪರಮೇಶ್ವರ ನೇತೃತ್ವದಲ್ಲಿ ರಚಿಸಿರುವ 43 ಸದಸ್ಯರ ಚುನಾವಣಾ ಸಮಿತಿಯ ಮೊದಲ ಸಭೆ ನಗರದ ಹೊರವಲಯದ ಕ್ಲಾರ್ಕ್ ಎಕ್ಸೋಟಿಕಾ ರೆಸಾರ್ಟ್‌ನಲ್ಲಿ ಬುಧವಾರ ನಡೆಯಲಿದೆ.

ಈಗಾಗಲೇ ಎಲ್ಲ 224 ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳಿಂದ ಕೆಪಿಸಿಸಿ ಅರ್ಜಿ ಆಹ್ವಾನಿಸಿದೆ. ಅಲ್ಲದೆ, ಆಕಾಂಕ್ಷಿಗಳು ಟಿಕೆಟ್ ಗಿಟ್ಟಿಸಿಕೊಳ್ಳಲು ಲಾಬಿ ನಡೆಸಿದ್ದಾರೆ. ಮೊದಲ ಹಂತದಲ್ಲಿ 100 ಕ್ಷೇತ್ರಗಳಿಗೆ ಟಿಕೆಟ್ ಅಂತಿಮಗೊಳಿಸಲು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಸಲಹೆ ನೀಡಿದ್ದಾರೆ. ಹೀಗಾಗಿ ಈ ಸಭೆ ಮಹತ್ವ ಪಡೆದಿದೆ.

ಕೆಲವು ಕ್ಷೇತ್ರಗಳಿಗೆ ಐದಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಈ ಆಕಾಂಕ್ಷಿಗಳ ಪಕ್ಷ ಚಟುವಟಿಕೆ, ಸಾಧನೆ ಗುರುತಿಸಿ ಹೆಸರು ಅಂತಿಮಗೊಳಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ. ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಉಸ್ತುವಾರಿ ಕೆ.ಸಿ. ವೇಣುಗೋಪಾಲ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿರಿಯ ನಾಯಕರಾದ ಆಸ್ಕರ್ ಫರ್ನಾಂಡಿಸ್, ಹರಿಪ್ರಸಾದ್ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಚುನಾವಣೆ ದಿನ ಘೋಷಣೆ ಯಾಗುವ ಮೊದಲೇ ಬಹುತೇಕ ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ತೀರ್ಮಾನಿಸಲಾಗಿದೆ. ಎಲ್ಲಿಯೂ ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ಪ್ರಕ್ರಿಯೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಸಭೆಯಲ್ಲಿ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರು ಅಂತಿಮಗೊಳಿಸಲಾಗುವುದು. ಟಿಕೆಟ್‌ಗಾಗಿ ಪೈಪೋಟಿ ಇರುವ ಕ್ಷೇತ್ರಗಳಲ್ಲಿ ಇಬ್ಬರು ಅಥವಾ ಮೂವರು ಆಕಾಂಕ್ಷಿಗಳ ಪಟ್ಟಿ ಸಿದ್ಧಪಡಿಸಿ ವರಿಷ್ಠರಿಗೆ ಕಳುಹಿಸಲು ತೀರ್ಮಾನಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಎರಡು ಬಾರಿ ಸ್ಪರ್ಧಿಸಿ ಗೆದ್ದಿರುವ ಕೆಲವು ಅಭ್ಯರ್ಥಿಗಳಿಗೆ ಮೂರನೇ ಬಾರಿ ಅವಕಾಶ ನೀಡುವ ಬದಲು, ಇನ್ನೊಬ್ಬರಿಗೆ ಟಿಕೆಟ್ ನೀಡುವ ಬಗ್ಗೆ ಪಕ್ಷದ ವಲಯದಲ್ಲಿ ಚರ್ಚೆಯಾಗಿತ್ತು. ಆದರೆ, ಹೀಗೆ ಮಾಡುವುದರಿಂದ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿರುವ ಶಾಸಕರು ಬಂಡಾಯ ಏಳುವ ಸಾಧ್ಯತೆ ಇರುವುದರಿಂದ ನಿಯಮ ಸಡಿಲಗೊಳಿಸಲು ತೀರ್ಮಾನಿಸಲಾಗಿದೆ. ಈ ಬಗ್ಗೆಯೂ ಚರ್ಚೆಯಾಗುವ ಸಾಧ್ಯತೆ ಇದೆ ಎಂದೂ ಗೊತ್ತಾಗಿದೆ.

## ಸ್ವಾಮೀಜಿ ಸ್ಪರ್ಧೆ ಇಲ್ಲ: ಶೋಭಾ

**ಬೆಂಗಳೂರು:** ಉಡುಪಿ ಅಷ್ಟಮಠಗಳಲ್ಲಿ ಒಂದಾದ ಶಿರೂರು ಮಠದ ಲಕ್ಷ್ಮೀವರ ತೀರ್ಥ ಸ್ವಾಮೀಜಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಉಡುಪಿ ಸಂಸದೆ ಶೋಭಾ ಕರಂದ್ಲಾಜೆ ವಿಶ್ವಾಸ ವ್ಯಕ್ತಪಡಿಸಿದರು.

'ಸ್ವಾಮೀಜಿ ಜತೆ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಕೆಲವು ವಿಷಯಗಳಲ್ಲಿ ಅವರಿಗೆ ನೋವಾಗಿದೆ. ಅವುಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ' ಎಂದೂ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಸೋಮವಾರ ತಿಳಿಸಿದರು.

'ಅಷ್ಟಮಠಗಳ ಮಠಾಧೀಶರು ಚುನಾವಣಾ ಕಣಕ್ಕೆ ಇಳಿಯುವುದಿಲ್ಲ ಎಂದುಕೊಂಡಿದ್ದೇನೆ. ನೋವಿನಿಂದ ಅಂತಹ ಮಾತುಗಳನ್ನು ಅವರು ಆಡಿದ್ದಾರೆ. ಎಲ್ಲವೂ ಸರಿ ಹೋಗಲಿದೆ' ಎಂದೂ ಶೋಭಾ ಹೇಳಿದರು.

# 'ಸಮುದಾಯದವರಿಗೆ ಟಿಕೆಟ್ ಕೊಟ್ಟರಷ್ಟೇ ಬೆಂಬಲ'

ಪ್ರಜಾವಾಣಿ ವಾರ್ತೆ

**ಮೈಸೂರು:** ಹಳೆ ಮೈಸೂರು ಭಾಗದಲ್ಲಿ ವೀರಶೈವ– ಲಿಂಗಾಯತ ಪ್ರಾಬಲ್ಯವಿರುವ 40 ವಿಧಾನಸಭಾ ಕ್ಷೇತ್ರಗಳಲ್ಲಿ ಸಮುದಾಯದವರಿಗೆ ಟಿಕೆಟ್ ನೀಡದಿದ್ದರೆ ಅಂತಹ ಪಕ್ಷವನ್ನು ಬೆಂಬಲಿಸದಿರಲು ವೀರಶೈವ– ಲಿಂಗಾಯತ ಹಿತರಕ್ಷಣಾ ವೇದಿಕೆಯು ನಿರ್ಣಯ ಕೈಗೊಂಡಿದೆ.

ನಗರದಲ್ಲಿ ಮಂಗಳವಾರ ನಡೆದ ವೇದಿಕೆಯ ಸಭೆಯಲ್ಲಿ ಚರ್ಚೆ ನಡೆಯಿತು. ಮೈಸೂರು ವಿಭಾಗದಲ್ಲಿ ಸಮುದಾಯದ 13 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ಮುಂಬರುವ ವಿಧಾನಸಭೆ, ಲೋಕಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಟಿಕೆಟ್ ನೀಡಬೇಕು. ಟಿಕೆಟ್ ಕೊಡದಿದ್ದರೆ ಅಂತಹ ಪಕ್ಷ, ಅಭ್ಯರ್ಥಿ ವಿರುದ್ಧ ಒಗ್ಗಟ್ಟಾಗಿ ಮತ ಚಲಾಯಿಸಲು ತೀರ್ಮಾನಿಸಲಾಯಿತು.

'ವಿಧಾನಸಭೆಯಲ್ಲಿ ವೀರಶೈವ– ಲಿಂಗಾಯತ ಸಮುದಾಯದ ಶಾಸಕರ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದೆ 70– 80 ಸಂಖ್ಯೆಯಲ್ಲಿ ಇರುತ್ತಿದ್ದು, ಈಗ 40ಕ್ಕೂ ಕಡಿಮೆಯಾಗಿದೆ. ರಾಜಕೀಯ ಪಕ್ಷಗಳು ಸಮುದಾಯವನ್ನು ನಿರ್ಲಕ್ಷಿಸುತ್ತಿರುವುದರಿಂದ ಲಿಂಗಾಯತ ಶಾಸಕರ ಸಂಖ್ಯೆ ಕುಸಿದಿದೆ. ಇದು ಹೀಗೇ ಮುಂದುವರಿದರೆ ಸಮುದಾಯದವರು ಚುನಾವಣೆಯಲ್ಲಿ ಪಾಠ ಕಲಿಸುತ್ತಾರೆ' ಎಂದು ವೇದಿಕೆ ಗೌರವ ಅಧ್ಯಕ್ಷ ಎಚ್.ಸಿ.ಬಸವರಾಜು ಹೇಳಿದರು.

'ಸಮುದಾಯದ ಅರ್ಹರಿಗೆ ಟಿಕೆಟ್ ನೀಡಬೇಕು ಎನ್ನುವುದಷ್ಟೇ ನಮ್ಮ ಬೇಡಿಕೆ. ಹಣವಿರುವವರನ್ನು ಕರೆತಂದು ಟಿಕೆಟ್ ಕೊಟ್ಟರೆ, ಅವರು ಗೆಲ್ಲಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸಮುದಾಯದ ಪ್ರಾಬಲ್ಯವಿರುವ 8 ಜಿಲ್ಲೆಗಳ ಮುಖಂಡರನ್ನು ಒಳಗೊಂಡ ಸಮಾವೇಶವನ್ನು ಮೈಸೂರಿನಲ್ಲಿ ಶೀಘ್ರವೇ ನಡೆಸಲಾಗುವುದು' ಎಂದರು.

## ಓದುಗರ ಮತ





### ಹೇಳದ್ದು...

ಅವರು ಇವರನ್ನು
ಹತ್ತು ಪರ್ಸೆಂಟ್
ಎಂದರು

ಇವರು ಅವರನ್ನು
ಮೂವತ್ತು ಪರ್ಸೆಂಟ್
ಎಂದರು

ನೀನು ಕಳ್ಳ....
ನೀನು ಕಳ್ಳ....
ಎಂದರಷ್ಟೇ

ನಾನು ಕದಿಯಲಿಲ್ಲ
ಎನ್ನಲೇ ಇಲ್ಲ
ಅವರಿಬ್ಬರೂ...!

-ಪತ್ತಂಗಿ ಎಸ್. ಮುರಳಿ
ಬೆಂಗಳೂರು

'ಪ್ರಜಾ ಮತ'ದಲ್ಲಿ ಪ್ರಕಟವಾಗುವ ಲೇಖನ, ವಿಶ್ಲೇಷಣೆ, ಸಂದರ್ಶನ, ವಿಶೇಷ ವರದಿಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು election@prajavani.co.in ಅಥವಾ ವಾಟ್ಸ್ ಆ್ಯಪ್ ಸಂಖ್ಯೆ 9513322930ಗೆ ಕಳುಹಿಸಿ.

ತಾಜಾ ಚುನಾವಣಾ ಸುದ್ದಿಗಳಿಗಾಗಿ ನೋಡಿ elections.prajavani.net

**ಎಂ.ಕೆ. ಸೋಮಶೇಖರ್** — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಕೃಷ್ಣರಾಜ



7.57/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.57 |
| ಕುಡಿಯುವ ನೀರು | 9.76 |
| ವಿದ್ಯುತ್ | 9.33 |
| ರಸ್ತೆ | 9.33 |
| ಶಾಸಕರು ಕೈಗೆ ಸಿಗುತ್ತಾರಾ? | 8.79 |

**ವಾಸು** — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಚಾಮರಾಜ



7.44/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.33 |
| ಕುಡಿಯುವ ನೀರು | 9.33 |
| ವಿದ್ಯುತ್ | 9.00 |
| ರಸ್ತೆ | 9.13 |
| ಶಾಸಕರು ಕೈಗೆ ಸಿಗುತ್ತಾರಾ? | 8.87 |

**ಸಾ.ರಾ. ಮಹೇಶ್** — ಜೆಡಿಎಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಕೃಷ್ಣರಾಜನಗರ



6.54/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.58 |
| ಕುಡಿಯುವ ನೀರು | 8.30 |
| ವಿದ್ಯುತ್ | 5.67 |
| ರಸ್ತೆ | 7.52 |
| ಶಾಸಕರು ಕೈಗೆ ಸಿಗುತ್ತಾರಾ? | 8.23 |

**ಎಚ್.ಪಿ. ಮಂಜುನಾಥ್** — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಹುಣಸೂರು



6.18/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.68 |
| ಕುಡಿಯುವ ನೀರು | 9.37 |
| ವಿದ್ಯುತ್ | 8.10 |
| ರಸ್ತೆ | 6.19 |
| ಶಾಸಕರು ಕೈಗೆ ಸಿಗುತ್ತಾರಾ? | 7.94 |

**ಚಿಕ್ಕಮಾದು (ದಿವಂಗತ)** — ಜೆಡಿಎಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಹೆಗ್ಗಡದೇವನಕೋಟೆ



6.15/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.44 |
| ಕುಡಿಯುವ ನೀರು | 8.10 |
| ವಿದ್ಯುತ್ | 7.67 |
| ರಸ್ತೆ | 8.14 |
| ಶಾಸಕರು ಕೈಗೆ ಸಿಗುತ್ತಾರಾ? | 7.83 |

**ಕೆ. ವೆಂಕಟೇಶ್** — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಪಿರಿಯಾಪಟ್ಟಣ



6.08/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.05 |
| ಕುಡಿಯುವ ನೀರು | 9.17 |
| ವಿದ್ಯುತ್ | 8.04 |
| ರಸ್ತೆ | 7.80 |
| ಶಾಸಕರು ಕೈಗೆ ಸಿಗುತ್ತಾರಾ? | 7.80 |

**ಕಳಲೆ ಎನ್. ಕೇಶವಮೂರ್ತಿ** — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ನಂಜನಗೂಡು



5.96/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.66 |
| ಕುಡಿಯುವ ನೀರು | 6.55 |
| ವಿದ್ಯುತ್ | 6.32 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

**ಎನ್. ಚಲುವರಾಯಸ್ವಾಮಿ** — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ನಾಗಮಂಗಲ



6.75/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.72 |
| ಕುಡಿಯುವ ನೀರು | 6.72 |
| ವಿದ್ಯುತ್ | 6.78 |
| ರಸ್ತೆ | 6.72 |
| ಶಾಸಕರು ಕೈಗೆ ಸಿಗುತ್ತಾರಾ? | 6.78 |

**ಕೆ.ಎಸ್. ಪುಟ್ಟಣ್ಣಯ್ಯ (ದಿವಂಗತ)** — ಸರ್ವೋದಯ ಕರ್ನಾಟಕ
ಜಿಲ್ಲೆ: ಮಂಡ್ಯ
ಕ್ಷೇತ್ರ: ಮೇಲುಕೋಟೆ



6.69/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.67 |
| ಕುಡಿಯುವ ನೀರು | 6.67 |
| ವಿದ್ಯುತ್ | 6.67 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

**ನಾರಾಯಣಗೌಡ** — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಕೃಷ್ಣರಾಜಪೇಟೆ



8.35/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.50 |
| ಕುಡಿಯುವ ನೀರು | 8.17 |
| ವಿದ್ಯುತ್ | 8.14 |
| ರಸ್ತೆ | 8.44 |
| ಶಾಸಕರು ಕೈಗೆ ಸಿಗುತ್ತಾರಾ? | 7.72 |

**ರಮೇಶ ಬಂಡಿಸಿದ್ದೇಗೌಡ** — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಶ್ರೀರಂಗಪಟ್ಟಣ



8.25/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.61 |
| ಕುಡಿಯುವ ನೀರು | 8.33 |
| ವಿದ್ಯುತ್ | 8.00 |
| ರಸ್ತೆ | 8.17 |
| ಶಾಸಕರು ಕೈಗೆ ಸಿಗುತ್ತಾರಾ? | 7.61 |

**ಪಿ.ಎಂ. ನರೇಂದ್ರಸ್ವಾಮಿ** — ಕಾಂಗ್ರೆಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಮಳವಳ್ಳಿ



8.11/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.39 |
| ಕುಡಿಯುವ ನೀರು | 8.39 |
| ವಿದ್ಯುತ್ | 8.06 |
| ರಸ್ತೆ | 8.28 |
| ಶಾಸಕರು ಕೈಗೆ ಸಿಗುತ್ತಾರಾ? | 7.11 |

## ಅಂಕ 'ಗಣಿತ'

'ದಕ್ಷ್' ಹಾಗೂ ಪ್ರಜಾವಾಣಿ ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

**ಸಿ. ಪುಟ್ಟರಂಗಶೆಟ್ಟಿ** — ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಚಾಮರಾಜನಗರ



6.85/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.00 |
| ಕುಡಿಯುವ ನೀರು | 8.22 |
| ವಿದ್ಯುತ್ | 8.22 |
| ರಸ್ತೆ | 7.56 |
| ಶಾಸಕರು ಕೈಗೆ ಸಿಗುತ್ತಾರಾ? | 9.11 |

**ಆರ್. ನರೇಂದ್ರ** — ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಹನೂರು



5.98/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.81 |
| ಕುಡಿಯುವ ನೀರು | 6.39 |
| ವಿದ್ಯುತ್ | 6.81 |
| ರಸ್ತೆ | 7.64 |
| ಶಾಸಕರು ಕೈಗೆ ಸಿಗುತ್ತಾರಾ? | 5.97 |

**ಎಸ್. ಜಯಣ್ಣ** — ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಕೊಳ್ಳೇಗಾಲ



8.74/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.49 |
| ಕುಡಿಯುವ ನೀರು | 6.39 |
| ವಿದ್ಯುತ್ | 9.76 |
| ರಸ್ತೆ | 10 |
| ಶಾಸಕರು ಕೈಗೆ ಸಿಗುತ್ತಾರಾ? | 8.89 |

# 50 ಹೊಸ ಮುಖಗಳಿಗೆ ಬಿಜೆಪಿ ಟಿಕೆಟ್

## ಕಳಂಕಿತರು, ಜನರ ವಿಶ್ವಾಸ ಕಳೆದುಕೊಂಡವರಿಗೆ ಬಿ ಫಾರಂ ಇಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭೆಯ 50 ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಟಿಕೆಟ್ ನೀಡಿ, ಗೆಲ್ಲಿಸಿಕೊಂಡು ಬರಲು ಬಿಜೆಪಿ ವರಿಷ್ಠರು ಚಿಂತನೆ ನಡೆಸಿದ್ದಾರೆ.

ಹೊರಗಿನಿಂದ ಬಂದು ಪಕ್ಷ ಸೇರಿಕೊಂಡವರು ಸೇರಿದಂತೆ 46 ಕ್ಷೇತ್ರಗಳಲ್ಲಿ ಹಾಲಿ ಶಾಸಕರು ಹಾಗೂ ಪಕ್ಷೇತರರಾಗಿ ಆಯ್ಕೆಯಾಗಿ, ಇತ್ತೀಚೆಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಒಬ್ಬರು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಇವರಲ್ಲದೆ, 2008ರಲ್ಲಿ ಗೆದ್ದು 2013ರ ಚುನಾವಣೆಯಲ್ಲಿ ಸೋತಿದ್ದ 57ಕ್ಕೂ ಹೆಚ್ಚು ಮಾಜಿ ಶಾಸಕರು ಕಣಕ್ಕೆ ಇಳಿಯುವ ತಯಾರಿ ನಡೆಸಿದ್ದಾರೆ.

ಹಾಲಿ ಶಾಸಕರೂ ಸೇರಿದಂತೆ ಎಲ್ಲ ಆಕಾಂಕ್ಷಿಗಳ ಪೈಕಿ ಭ್ರಷ್ಟಾಚಾರದ ಕಳಂಕ ಹೊತ್ತವರು ಹಾಗೂ ಜನರ ವಿಶ್ವಾಸವನ್ನು ಕಳೆದುಕೊಂಡವರಿಗೆ 2018ರ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪುವ ಸಾಧ್ಯತೆ ಹೆಚ್ಚಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕಳಂಕಿತರಿಗೆ ಟಿಕೆಟ್ ನೀಡಿದರೆ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಲಿದೆ. ಜನರ ವಿಶ್ವಾಸ ಕಳೆದುಕೊಂಡವರಿಗೆ ಟಿಕೆಟ್ ಕೊಟ್ಟರೆ ಗೆಲ್ಲುವುದು ಕಷ್ಟ. ಟಿಕೆಟ್ ನೀಡುವ ಮುನ್ನ ಈ ಎರಡು ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಎಷ್ಟೇ ಪ್ರಭಾವಿ ಆಗಿದ್ದು, ಎರಡು ಅಥವಾ ಮೂರು ಬಾರಿ ಗೆದ್ದಿರುವುದು ಟಿಕೆಟ್ ಪಡೆಯಲು ಅರ್ಹತೆಯಾಗುವುದಿಲ್ಲ. ಗೆಲ್ಲಲು ಸಾಧ್ಯವೇ ಇಲ್ಲದಷ್ಟು ಆಡಳಿತ ವಿರೋಧಿ ಅಲೆ ಹೊಂದಿರುವ ಹಾಲಿ ಶಾಸಕರಲ್ಲಿ 10ಕ್ಕಿಂತ ಹೆಚ್ಚಿನವರನ್ನು ಗುರುತಿಸಲಾಗಿದೆ. ಇಂತಹ ಕ್ಷೇತ್ರಗಳಲ್ಲಿ, ಸಂಘ ಪರಿವಾರದಲ್ಲಿ ದಶಕಗಳ ಕಾಲ ನಿಷ್ಠಾವಂತರಾಗಿ ಕೆಲಸ ಮಾಡಿದ, ಕ್ಷೇತ್ರ ಮಟ್ಟದಲ್ಲಿ ತಮ್ಮದೇ ಪ್ರಭಾವ ಬೆಳೆಸಿಕೊಂಡವರಿಗೆ ಟಿಕೆಟ್ ನೀಡುವ ಆಲೋಚನೆ ವರಿಷ್ಠರದ್ದಾಗಿದೆ ಎಂದು ಮೂಲಗಳು ಹೇಳಿವೆ.

ಹೀಗೆ ಮಾಡುವುದರಿಂದ ನಿಷ್ಠಾವಂತರಿಗೆ ಹಾಗೂ ಪರಿಶುದ್ಧರಿಗೆ ಟಿಕೆಟ್ ಕೊಟ್ಟಂತಾಗುತ್ತದೆ. ಅದರ ಜತೆಗೆ, ಆರ್‌ಎಸ್‌ಎಸ್ ಕಾರ್ಯಕರ್ತರು ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಪ್ರೇರಣೆ ನೀಡಿದಂತಾಗುತ್ತದೆ. ಪಕ್ಷ ಅಧಿಕಾರಕ್ಕೆ ಬಂದ ಬಳಿಕವೂ ಕಳಂಕ ರಹಿತ, ಪಾರದರ್ಶಕ ಆಡಳಿತ ನೀಡಲು ಇದು ನೆರವಾಗಬಹುದು ಎಂಬ ಲೆಕ್ಕಾಚಾರ ಕೂಡ ಇದರ ಹಿಂದಿದೆ.

2008ರಿಂದ 2013ರ ಅವಧಿಯಲ್ಲಿ ಬಿಜೆಪಿ ಆಡಳಿತದಲ್ಲಿದ್ದಾಗ ಅನೇಕ ಸಚಿವರು, ಶಾಸಕರು ಭ್ರಷ್ಟಾಚಾರ ಹಾಗೂ ಲೈಂಗಿಕ ಹಗರಣದ ಆರೋಪಕ್ಕೆ ಗುರಿಯಾಗಿ, ಜೈಲಿಗೂ ಹೋಗಿದ್ದರು. ಈ ಕಾರಣದಿಂದಾಗಿ 2013ರಲ್ಲಿ ನಡೆದ ಚುನಾವಣೆಯಲ್ಲಿಯೇ ಕೆಲವರಿಗೆ ಪಕ್ಷದಿಂದ ಟಿಕೆಟ್ ನಿರಾಕರಿಸಲಾಗಿತ್ತು. ಕೆಲವರು ಬಿಜೆಪಿ ತೊರೆದು ಕೆಜೆಪಿ, ಬಿಎಸ್‌ಆರ್ ಕಾಂಗ್ರೆಸ್‌ನಿಂದ ಕಣಕ್ಕೆ ಇಳಿದಿದ್ದರು. ಈ ಪೈಕಿ ಕೆಲವರು ಗೆದ್ದಿದ್ದರು.

ಕಳಂಕದ ಆರೋಪಕ್ಕೆ ಗುರಿಯಾಗಿದ್ದ ಕೆಲವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆಯನ್ನೂ ನಡೆಸಿದ್ದಾರೆ. ಮಾಜಿ ಶಾಸಕರಾದ ಕಟ್ಟಾ ಸುಬ್ರಹ್ಮಣ್ಯ-ನಾಯ್ಡು, ಮಾಲೂರು ಕೃಷ್ಣಯ್ಯ ಶೆಟ್ಟಿ, ಹರತಾಳು ಹಾಲಪ್ಪ, ರಘುಪತಿ ಭಟ್ ಗುರುತರ ಆರೋಪಕ್ಕೆ ಗುರಿಯಾಗಿದ್ದರು. ಇವರೆಲ್ಲರೂ ಟಿಕೆಟ್ ಸಿಗುವ ನಿರೀಕ್ಷೆಯಲ್ಲಿದ್ದಾರೆ. ಇನ್ನೂ 15ಕ್ಕೂ ಹೆಚ್ಚು ಹಾಲಿ ಶಾಸಕರ ವಿರುದ್ಧ ಆಗ ಲೋಕಾಯುಕ್ತ ತನಿಖೆ ನಡೆದಿತ್ತು. ಹೀಗೆ ಕಳಂಕ ಹೊತ್ತವರು ಈಗ ಆರೋಪದಿಂದ ಮುಕ್ತರಾಗಿದ್ದರೆ ಮತ್ತು ಕ್ಷೇತ್ರದ ಜನರ ವಿಶ್ವಾಸ ಗಳಿಸಿಕೊಂಡು, ಗೆಲ್ಲುವ ಸಾಧ್ಯತೆ ಇದ್ದರೆ ಮಾತ್ರ ಟಿಕೆಟ್ ನೀಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

### ಟಿಕೆಟ್ ಆಕಾಂಕ್ಷಿಗಳು ...

ಸದ್ಯ ಮುಕ್ತಾಯದ ಅಂಚಿನಲ್ಲಿರುವ 14ನೇ ವಿಧಾನಸಭೆಯ ಅವಧಿಯಲ್ಲಿ 42 ವಿಧಾನಸಭಾ ಕ್ಷೇತ್ರಗಳಲ್ಲಿ ಸದ್ಯ ಬಿಜೆಪಿ ಪ್ರಾತಿನಿಧ್ಯವಿದೆ. ಕೆಜೆಪಿಯಿಂದ ಗೆದ್ದಿದ್ದ ಗುರು ಪಾಟೀಲ ಶಿರವಾಳ, ಬಿಎಸ್‌ಆರ್ ಕಾಂಗ್ರೆಸ್‌ನ ಪಿ. ರಾಜೀವ್, ಸುರೇಶಬಾಬು, ಕಾಂಗ್ರೆಸ್ ಸಹ ಸದಸ್ಯರಾಗಿದ್ದ ಸಿ.ಪಿ. ಯೋಗೇಶ್ವರ್ ಹಾಗೂ ಪಕ್ಷೇತರರಾಗಿ ಗೆದ್ದು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಹಾಲಾಡಿ ಶ್ರೀನಿವಾಸ ಶೆಟ್ಟಿ ಇತ್ತೀಚೆಗೆ ಬಿಜೆಪಿ ಸೇರಿದ್ದಾರೆ. ಇವರೆಲ್ಲರೂ ಟಿಕೆಟ್ ಸಿಗುವ ನಿರೀಕ್ಷೆಯಲ್ಲಿದ್ದಾರೆ.

ಮೊಳಕಾಲ್ಮುರು ಕ್ಷೇತ್ರದ ಬಿಎಸ್‌ಆರ್ ಕಾಂಗ್ರೆಸ್ ಸದಸ್ಯ ತಿಪ್ಪೇಸ್ವಾಮಿ ಮಾತ್ರ ಸದ್ಯ ಎಲ್ಲಿಯೂ ಗುರುತಿಸಿಕೊಂಡಿಲ್ಲ.

### ಇಬ್ಬರು ಸಂಸದರಿಗೆ ಮಾತ್ರ ಟಿಕೆಟ್?

ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ, ಶಿವಮೊಗ್ಗ ಸಂಸದ ಬಿ.ಎಸ್. ಯಡಿಯೂರಪ್ಪ ಮತ್ತು ಬಳ್ಳಾರಿ ಸಂಸದ ಶ್ರೀರಾಮುಲುಗೆ ಮಾತ್ರ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗುವ ಸಾಧ್ಯತೆ ಇದೆ.

ಯಾವ ಸಂಸದರಿಗೂ ಟಿಕೆಟ್ ನೀಡದೇ ಇರಲು ಪಕ್ಷ ಮೊದಲು ನಿರ್ಧರಿಸಿತ್ತು. ಆದರೆ, ಮುಖ್ಯಮಂತ್ರಿ ಅಭ್ಯರ್ಥಿಗೆ ಟಿಕೆಟ್ ನೀಡದೇ ಇದ್ದರೆ, ಪಕ್ಷ ಅಧಿಕಾರಕ್ಕೆ ಬಂದಲ್ಲಿ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡುವುದಿಲ್ಲ ಎಂಬ ಅಪಪ್ರಚಾರವನ್ನು ಎದುರಿಸಬೇಕಾಗುತ್ತದೆ. ಹೀಗಾದಲ್ಲಿ ಹಿನ್ನಡೆ ಅನುಭವಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಯಡಿಯೂರಪ್ಪಗೆ ಟಿಕೆಟ್ ನೀಡಲು ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅವರನ್ನು ಬಿಟ್ಟು ಯಾವುದೇ ಸಂಸದರಿಗೂ ಟಿಕೆಟ್ ಇಲ್ಲ ಎಂಬ ನಿಶ್ಚಯಕ್ಕೆ ಬರಲಾಗಿತ್ತು. ಬಳ್ಳಾರಿ ಜಿಲ್ಲೆಯ ಆನಂದ್ ಸಿಂಗ್ ಹಾಗೂ ನಾಗೇಂದ್ರ ಇತ್ತೀಚೆಗೆ ಕಾಂಗ್ರೆಸ್ ಸೇರಿದ್ದಾರೆ. ಒಂದು ವೇಳೆ ರಾಮುಲು ಅವರನ್ನು ವಿಧಾನಸಭೆ ಚುನಾವಣೆಯಲ್ಲಿ ಕಣಕ್ಕೆ ಇಳಿಸದೇ ಇದ್ದರೆ ಆ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲುವುದು ಕಷ್ಟವಾಗಬಹುದು. ವಾಲ್ಮೀಕಿ ಸಮುದಾಯಕ್ಕೆ ಸೇರಿರುವ ಶ್ರೀರಾಮುಲು ಸ್ಪರ್ಧಿಸಿದರೆ ಬಳ್ಳಾರಿ ಮಾತ್ರವಲ್ಲದೆ, ಈ ಸಮುದಾಯ ಪ್ರಬಲವಾಗಿರುವ ಅನೇಕ ಕ್ಷೇತ್ರಗಳಲ್ಲಿ ಬಿಜೆಪಿಗೆ ಅನುಕೂಲವಾಗಬಹುದು ಎಂಬ ತರ್ಕವೂ ಇದರ ಹಿಂದೆ ಇದೆ ಎಂದೂ ಮೂಲಗಳು ಹೇಳಿವೆ.

## ಕೆಪಿಸಿಸಿ ಚುನಾವಣಾ ಸಮಿತಿ ಸಭೆ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧ

# ಸೋತ 90 ಕ್ಷೇತ್ರಗಳಿಗೆ ಟಿಕೆಟ್ ಹಂಚಿಕೆ ಚರ್ಚೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ವಿಧಾನಸಭೆಗೆ 2013ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಸೋಲು ಕಂಡ 90 ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುವ ಕುರಿತು ಕೆಪಿಸಿಸಿ ಚುನಾವಣಾ ಸಮಿತಿ ಬುಧವಾರ ಚರ್ಚೆ ನಡೆಸಿದೆ.

ಗೆಲುವೊಂದೇ ಮುಖ್ಯ ಮಾನದಂಡ ಮಾಡಿಕೊಂಡು ಟಿಕೆಟ್ ಆಕಾಂಕ್ಷಿಗಳ ಸಾಮರ್ಥ್ಯ ಮೌಲ್ಯಮಾಪನ ನಡೆಸಿದ ಸಮಿತಿ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿದೆ.

ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, 'ಕಳೆದ ಚುನಾವಣೆಯಲ್ಲಿ ಪರಾಭವಗೊಂಡ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳ ಕುರಿತು ಚರ್ಚಿಸಿದ್ದೇವೆ' ಎಂದರು.

'ಹಾಲಿ ಶಾಸಕರು, ಪಕ್ಷೇತರರು ಗೆದ್ದಿರುವ ಕ್ಷೇತ್ರಗಳ ಟಿಕೆಟ್ ಹಂಚಿಕೆ ಕುರಿತು ಚರ್ಚಿಸಲು ಇದೇ 26ರಂದು ಮತ್ತೆ ಸಭೆ ಸೇರುತ್ತೇವೆ. ಟಿಕೆಟ್ ನೀಡುವಾಗ ಸಾಮಾಜಿಕ ನ್ಯಾಯವನ್ನೂ ಪರಿಗಣಿಸುತ್ತೇವೆ. ಕಳಂಕಿತರು, ಆರೋಪಿಗಳು ಆಕಾಂಕ್ಷಿಗಳಾಗಿದ್ದರೆ ಅಂಥವರ ಬಗ್ಗೆ ಚುನಾವಣಾ ಪರಿಶೀಲನಾ ಸಮಿತಿ ತೀರ್ಮಾನಿಸಲಿದೆ' ಎಂದರು.

'ಪಕ್ಷದಲ್ಲಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಅಧಿಕವಾಗಿದೆ. ಉತ್ತಮ ವ್ಯಕ್ತಿತ್ವ ಹೊಂದಿರುವ, ಗೆಲ್ಲುವ ಅಭ್ಯರ್ಥಿಗಳ ಬಗ್ಗೆ ಹೈಕಮಾಂಡ್ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಈ ತಿಂಗಳ ಅಂತ್ಯದೊಳಗೆ ಕನಿಷ್ಠ 100 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲು ಹೈಕಮಾಂಡ್ ಉದ್ದೇಶಿಸಿದೆ.

ಸಭೆಯ ಆರಂಭದಲ್ಲಿ ಸಮಿತಿ ಸದಸ್ಯರನ್ನು ಐದು ವಿಭಾಗಗಳಾಗಿ ವಿಂಗಡಿಸಲಾಯಿತು. ಪ್ರತಿ ವಿಭಾಗದಲ್ಲಿ ತಲಾ ಕನಿಷ್ಠ ಎಂಟು ಸದಸ್ಯರನ್ನು ನೇಮಿಸಿ, ಆಯಾ ವಿಭಾಗದಲ್ಲಿ ಬರುವ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳ ಅರ್ಜಿಗಳನ್ನು ಪರಿಶೀಲಿಸಲಾಯಿತು. ಐದು ಮಾನದಂಡಗಳನ್ನು ಪರಿಗಣಿಸಿ ಪ್ರತಿ ಕ್ಷೇತ್ರಕ್ಕೆ 2–3 ಸಂಭಾವ್ಯ ಹೆಸರುಗಳನ್ನು ಪಟ್ಟಿ ಮಾಡಲಾಗಿದೆ.

ಇದೇ 28ರಂದು ದೆಹಲಿಯಲ್ಲಿ ನಡೆಯಲಿರುವ ಚುನಾವಣಾ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ಪಟ್ಟಿ ಬಗ್ಗೆ ಚರ್ಚೆಯಾಗಲಿದೆ. ಬಳಿಕ ವರಿಷ್ಠರು ಹೆಸರು ಅಂತಿಮಗೊಳಿಸಲಿದ್ದಾರೆ ಎಂದು ಕೆಪಿಸಿಸಿ ಮೂಲಗಳು ತಿಳಿಸಿವೆ.



ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್, ಜಿ. ಪರಮೇಶ್ವರ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಚಿತ್ರದಲ್ಲಿ ಇದ್ದಾರೆ

### ವಿಭಾಗವಾರು ಚುನಾವಣಾ ಸಮಿತಿ

**ಬೆಂಗಳೂರು :** ಡಿ.ಕೆ. ಶಿವಕುಮಾರ್, ವೀರಪ್ಪ ಮೊಯಿಲಿ, ಕೆ.ಜೆ. ಜಾರ್ಜ್, ರಾಮಲಿಂಗಾ ರೆಡ್ಡಿ, ಎಂ. ಕೃಷ್ಣಪ್ಪ, ಸಿ.ಎಂ. ಇಬ್ರಾಹಿಂ, ಕೃಷ್ಣ ಬೈರೇಗೌಡ, ಎಸ್. ಎಸ್. ಮಲ್ಲಿಕಾರ್ಜುನ್, ರೋಷನ್ ಬೇಗ್, ಎಚ್.ಎಸ್. ಮಂಜುನಾಥ, ಕೆ.ಪಿ. ಕೃಷ್ಣ ಮೂರ್ತಿ, ಡಿ.ಕೆ. ಸುರೇಶ್, ಎಸ್.ಪಿ. ಮುದ್ದು ಹನುಮೇಗೌಡ, ಬಿ.ಎನ್. ಚಂದ್ರಪ್ಪ, ಪ್ರೊ. ರಾಜೀವ್ ಗೌಡ, ಕೆ.ಸಿ. ರಾಮಮೂರ್ತಿ

**ಮೈಸೂರು:** ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ರೆಹಮಾನ್ ಖಾನ್, ಬಿ. ರಮಾನಾಥ ರೈ, ಎಚ್.ಸಿ. ಮಹದೇವಪ್ಪ, ಬಿ.ಎಲ್. ಶಂಕರ್, ಮೋಟಮ್ಮ, ರಾಣಿ ಸತೀಶ್, ವಿಜಯಕುಮಾರ್ ಸೊರಕೆ, ಎಂ.ಎಚ್. ಅಂಬರೀಷ್, ಆರ್. ಧ್ರುವನಾರಾಯಣ್

**ಬೆಳಗಾವಿ:** ಎಸ್.ಆರ್. ಪಾಟೀಲ, ಮಾರ್ಗರೆಟ್ ಆಳ್ವ, ಆರ್.ವಿ. ದೇಶಪಾಂಡೆ, ಎಚ್. ಕೆ. ಪಾಟೀಲ, ಎಂ.ಬಿ. ಪಾಟೀಲ, ಸತೀಶ ಜಾರಕಿಹೊಳಿ, ಸಿ.ಎಸ್. ನಾಡಗೌಡ, ಸಲೀಂ ಅಹಮದ್, ಉಮಾಶ್ರೀ, ಲಕ್ಷ್ಮೀ ಹೆಬ್ಬಾಳ್ಕರ, ಪ್ರಕಾಶ ಹುಕ್ಕೇರಿ

**ಕಲಬುರ್ಗಿ:** ಬಿ.ಕೆ. ಹರಿಪ್ರಸಾದ್, ಅಲ್ಲಂ ವೀರಭದ್ರಪ್ಪ, ಸಂತೋಷ್ ಲಾಡ್, ಪಿ.ಟಿ. ಪರಮೇಶ್ವರ್ ನಾಯ್ಕ್, ಶಿವರಾಜ್ ತಂಗಡಗಿ, ಬಸವನಗೌಡ ಬಾದರ್ಲಿ, ವಿ.ವಿ. ನಾಯಕ್

### ಮಾನದಂಡ

- ಭ್ರಷ್ಟರಿಗೆ ಟಿಕೆಟ್ ನಿರಾಕರಣೆ
- ಗೆಲ್ಲುವ ಅಭ್ಯರ್ಥಿಗೆ ಮಣೆ (ವಯಸ್ಸಿನ ಮಿತಿ ಇಲ್ಲ)
- ಒಂದು ಕುಟುಂಬಕ್ಕೆ ಒಂದು ಟಿಕೆಟ್ ನಿಯಮ ಸಡಿಲಿಕೆ
- 2013ರಲ್ಲಿ 25,000 ಮತಗಳ ಅಂತರದಲ್ಲಿ ಸೋತವರು, ಗೆಲ್ಲುವ ಬಗ್ಗೆ ಸಮೀಕ್ಷೆ ಮಾಹಿತಿ ನೀಡಿದ್ದರೆ ಅಂಥವರಿಗೆ ಅವಕಾಶ
- ಅಭ್ಯರ್ಥಿ ಅಂತಿಮ: ಹೈಕಮಾಂಡ್ ತೀರ್ಮಾನಕ್ಕೆ

### 'ಜನರಿಗೆ ಸುಸ್ತಾಗಿದೆ'

'ಉತ್ತರ ಪ್ರದೇಶ, ಬಿಹಾರ ರಾಜ್ಯಗಳಲ್ಲಿ ಲೋಕಸಭೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಗೆ ಮುಖಭಂಗವಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಅಮಿತ್ ಶಾ ಮಾತು ಕೇಳಿ ಜನ ಸುಸ್ತಾಗಿದ್ದಾರೆ' ಎಂದು ದಿನೇಶ್ ಗುಂಡೂರಾವ್ ವ್ಯಂಗ್ಯವಾಡಿದರು.

## ಟ್ವೀಟ್ವಾದ...



**ಗೋರಖ್‌ಪುರದಲ್ಲಿ ಸೋಲು, ಫೂಲ್‌ಪುರದಲ್ಲೂ ಸೋಲು... ಇನ್ನು ಯೋಗಿ ಆದಿತ್ಯನಾಥ ಅವರು ಕರ್ನಾಟಕ ಮತ್ತು ಕೇರಳದಂತಹ ರಾಜ್ಯಗಳಿಗೆ ಸಲಹೆ ನೀಡುವುದನ್ನು ನಿಲ್ಲಿಸಬೇಕು. ಮೊದಲು ನಿಮ್ಮ ರಾಜ್ಯದಲ್ಲಿ ಆಡಳಿತ ನಡೆಸಿ. ನಂತರ ಬೇರೆ ರಾಜ್ಯಗಳ ಬಗ್ಗೆ ಮಾತನಾಡಿ.**

–ಕೆ. ಚಂದ್ರಕುಮಾರ್ @kurup62



**ಈ ಚುನಾವಣಾ ಫಲಿತಾಂಶದಿಂದ ನಮ್ಮ ಆತ್ಮಸ್ಥೈರ್ಯ ಯಾಕೆ ಕುಗ್ಗಬೇಕು? ವಿರೋಧ ಪಕ್ಷಗಳು ಸಂಭ್ರಮಿಸಲಿ ಬಿಡಿ. 2019ರ ಚುನಾವಣೆಯಲ್ಲಿ ಈ ಕ್ಷೇತ್ರಗಳನ್ನು ವಶಪಡಿಸಿಕೊಳ್ಳಲು ಅವಕಾಶ ಇದ್ದೇ ಇದೆ. ಇತ್ತೀಚೆಗೆ ನೀವು ಈಶಾನ್ಯ ರಾಜ್ಯಗಳಲ್ಲಿ ಗೆದ್ದಿದ್ದೀರಿ. ಸರದಿಯಲ್ಲಿ ಕರ್ನಾಟಕ ಇದೆ. ವಿಶ್ವಾಸ ಕಳೆದುಕೊಳ್ಳಬೇಡಿ; ಆ ಹೊತ್ತಿಗೆ ಹಲವು ವಿಷಯಗಳು ನಿಮಗೆ ಅನುಕೂಲಕರವಾಗಲಿವೆ.**

–ಮೇಜರ್ ಸುಬ್ರತ್ ಮಿಶ್ರಾ ಎಸ್.ಎಂ (ನಿವೃತ್ತ) @SubratSMSM



**ವಿರೋಧ ಪಕ್ಷಗಳು ರೂಪಿಸುವ ಯೋಜನೆಯಲ್ಲಿ ಮಾಯಾವತಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ ಎಂಬುದನ್ನು ಉತ್ತರ ಪ್ರದೇಶದ ಉಪಚುನಾವಣೆ ನೆನಪಿಸಿದೆ. ಕರ್ನಾಟಕದಲ್ಲಿ ದೇವೇಗೌಡರಿಗೆ ನೀಡಿರುವ ಬೆಂಬಲದ ಬಗ್ಗೆ ಅವರು ಪರಾಮರ್ಶೆ ನಡೆಸಲಿದ್ದಾರೆಯೇ?– ಯಾಕೆಂದರೆ ಈ ಮೈತ್ರಿಯು ಬಿಜೆಪಿ ವಿರೋಧಿ ಮತಗಳನ್ನು ಒಡೆದು ಬಿಜೆಪಿಗೇ ಅನುಕೂಲ ಕಲ್ಪಿಸಲಿದೆ. 2019ರ ಚುನಾವಣೆಯಲ್ಲಿ ಮಾಯಾವತಿ 'ಕಿಂಗ್/ಕ್ವೀನ್ ಮೇಕರ್' ಆಗಿಯೇ ಉಳಿಯಲಿದ್ದಾರೆ. ಅವರು ದೊಡ್ಡ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಸಾಧ್ಯತೆ ಇದೆ.**

-ಬರ್ಖಾ ದತ್ @BDUTT

## ಜಾತಿ– ಪಟೇಲರ ದೃಷ್ಟಿ

**ಜೆ.ಎಚ್.ಪಟೇಲರು** ಆಗಷ್ಟೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ದಲಿತನಾದ ನನ್ನನ್ನು ಪ್ರಭಾವಶಾಲಿ ಖಾತೆಯಾದ ಕಂದಾಯ ಮಂತ್ರಿಯನ್ನಾಗಿ ಮಾಡಿದ್ದರು. ಇದು ಹಲವು ಜಾತಿ ಮತ್ತು ಕೋಮುಗಳ ನಾಯಕರಿಗೆ ಅಸಾಧ್ಯ ಕೋಪ ತರಿಸಿತ್ತು. ನನ್ನನ್ನು ಈ ಇಲಾಖೆಗೆ ತಂದಿದ್ದರಿಂದ ಪಟೇಲರಿಗೆ ರಾಜಕೀಯವಾಗಿ ನಷ್ಟ ಆಗಿದೆಯೇ ವಿನಾ ಲಾಭವಾಗಿಲ್ಲ ಎಂದು ಮಾಧ್ಯಮಗಳು ಬಣ್ಣಿಸಿದ್ದವು. ಹೀಗಾಗಿ ನನ್ನ ಮನಸ್ಸಿನಲ್ಲಿ ವ್ಯಾಕುಲ, ಆತಂಕ ತುಂಬಿತ್ತು.

ಇಲಾಖೆಯ ಪ್ರಮುಖ ಕಡತಗಳೊಂದಿಗೆ, ಮಂತ್ರಿಯಾದ ಮರುದಿನ ಪಟೇಲರ ನಿವಾಸಕ್ಕೆ ಹೋದೆ. ಮುಖ್ಯಮಂತ್ರಿ ನಿವಾಸದ ಮುಂದೆ ಜನಸಂದಣಿ ಇತ್ತು. ಒಳಗಿನಿಂದ ಏರಿದ ಧ್ವನಿಯಲ್ಲಿ ಮಾತುಕತೆ ನಡೆದಿತ್ತು. ಬೇರೆ ಯಾವ ಜಾತಿಯೂ ನಿಮ್ಮ ಕಣ್ಣಿಗೆ ಬೀಳಲಿಲ್ಲವೇನು– ಹೀಗೆಂದು ಒಳಗಿದ್ದ ಮಹನೀಯರೊಬ್ಬರು ದಪ್ಪ ಧ್ವನಿಯಲ್ಲಿ ಸವಾಲು ಹಾಕಿದ್ದು, ಕೂಡಲೇ ಇಬ್ಬರು ಮೂವರು ಇದೇ ಅಭಿಪ್ರಾಯಕ್ಕೆ ನೇಪಥ್ಯದಲ್ಲಿ ಧ್ವನಿ ಕೂಡಿಸಿದ್ದೂ ಸ್ಪಷ್ಟವಾಗಿ ಕೇಳಿಸಿತು.

ಒಳಗಿದ್ದವರು ಯಾರು ಎಂದು ತಿಳಿದುಕೊಳ್ಳುವ ಅವಶ್ಯಕತೆ ನನಗಿರಲಿಲ್ಲ. ನನ್ನಿಂದಾಗಿ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ ಪಟೇಲರನ್ನು ಅವರ ವಿರೋಧಿಗಳ ಮುಂದೆ ಹೇಗೆ ಭೇಟಿಯಾಗಲಿ ಎಂಬ ಸಂದಿಗ್ಧದಲ್ಲಿ ಬಿದ್ದೆ. ಸಹಜವಾಗಿ ಮುಖ್ಯಮಂತ್ರಿಗಳ ಆಪ್ತ ಸಹಾಯಕ ನನ್ನನ್ನು ನೇರವಾಗಿ ಒಳಗೆ ಕರೆದೊಯ್ದ. ಇದರಿಂದ ಮತ್ತಷ್ಟು ಮುಜುಗರವಾಯಿತು. ಸಮಾಜದ ದೃಷ್ಟಿಯಿಂದ ಈಗಾಗಲೇ ನೊಂದಿದ್ದ ನಾನು, ತಪ್ಪಿತಸ್ಥ ಎಂದು ನನ್ನ ಬಗೆಗೆ ಷರಾ ಬರೆದುಕೊಂಡು ನಿಂತೆ.

**ಆಗ ಪರಿಚಯವಾಯ್ತು ಪಟೇಲರ ವ್ಯಕ್ತಿತ್ವ:** ಬಾರೋ ರಮೇಶಣ್ಣ... (ಪಟೇಲರು ಜೀವ ಇರುವವರೆಗೂ ನನ್ನನ್ನು ಪ್ರೀತಿಯಿಂದ ಕರೆಯುತ್ತಿದ್ದದ್ದು ಹೀಗೆಯೇ) ಸರಿಯಾದ ಸಮಯಕ್ಕೆ ಬಂದೀ... ಬಾ ಇಲ್ಲೇ ಕೂಡು... ಪಕ್ಕದಲ್ಲಿಯೇ ಇದ್ದ ಟೀಪಾಯಿಯ ಮೇಲೆ ಕೂಡಿಸಿದರು. ಎದುರಿಗೆ ಇದ್ದವರನ್ನು ನೋಡಲು ಭಯ ನನಗೆ. ಸಮಾಜದ ಮೇಲ್ವರ್ಗಗಳ ಈ ನಾಯಕರೆಲ್ಲಿ? ನಾನೆಲ್ಲಿ? ಎತ್ತಣ ಮಾಮರ... ದಲಿತ ಯಜ್ಞಪಶು ನಾನು. ನರಬಲಿಗೆ ಸಿದ್ಧವಾಗಬೇಕಾಗಿದ್ದ ಹರಿಜನ.

ನೀನು ಸರಿಯಾದ ಸಮಯಕ್ಕೇ ಬಂದಿದ್ದೀ, ಎಂದರೆ ನಿನ್ನ ಬಗೆಗೇ ಈಗ ಚರ್ಚೆ ಬಂದಿತ್ತು. ನಿನ್ನ ಬಗ್ಗೆ ಅಂದರೆ ಹರಿಜನರ ಬಗ್ಗೆ, ಪಟೇಲರು ನನ್ನ ಭುಜಮುಟ್ಟಿ ಹೇಳಿದರು. ನಾನು ಸಂಕೋಚದಿಂದ ಮತ್ತಷ್ಟು ಮುದುರಿಕೊಂಡೆ.

ಇಷ್ಟು ಮಂದಿ ಬೇರೆ ಬೇರೆ ಜಾತಿಯ ಎಂಎಲ್‌ಎಗಳು ಪಕ್ಷದಲ್ಲಿ ಇರುವಾಗ ಆ ಎಲ್ಲ ಜಾತಿಗಳನ್ನು ಬಿಟ್ಟು ಹರಿಜನನೊಬ್ಬನನ್ನು ನಂಬರ್ ಟೂ ಖಾತೆಗೆ ಆರಿಸಲು ಕಾರಣವೇನು ಎನ್ನುತ್ತಾರೆ ಈ ಜನ. ಶತಶತಮಾನಗಳಿಂದ ತುಳಿಸಿಕೊಂಡ ದಲಿತರನ್ನು ಒಮ್ಮೆಲೇ ಪಕ್ಕಕ್ಕೆ ಕೂಡಿಸಿಕೊಳ್ಳುವ ನನ್ನಂಥ ರಾಜಕಾರಣಿಯನ್ನು ಮುಂದುವರಿದ ಸಮಾಜ ಕ್ಷಮಿಸಲಾರದು. ಕ್ಯಾಕರಿಸಿ ಉಗುಳಿದರೂ ಹೆಚ್ಚಲ್ಲ. ಈ ಪಟೇಲ ಹುಚ್ಚ, ಮೂರ್ಖ ಎಂದರೆ ಆಶ್ಚರ್ಯವಿಲ್ಲ. ಗಾಂಧೀಜಿ ಬಗ್ಗೆ ಉದ್ದುದ್ದ ವ್ಯಾಖ್ಯಾನ ಮಾಡುವುದು ಸುಲಭ. ಬಸವಣ್ಣನವರನ್ನೂ ರಾಗವಾಗಿ ಉಲ್ಲೇಖಿಸುವುದು ಮತ್ತಷ್ಟು ಹಗುರ...

ಪಟೇಲರಿಗೆ ಏನು ತೋಚಿತೋ ಏನೋ ಒಂದು ನಿಮಿಷ ಮಾತು ಹಾಗೂ ವಿಚಾರಧಾರೆಯನ್ನು ನಿಲ್ಲಿಸಿದರು. ದಾರಿಜಗಳ ನಡೆಯುವಾಗ ಎದುರಾಳಿಯ ಕತ್ತಿನಪಟ್ಟಿ ಹಿಡಿಯುವ ರೀತಿಯಲ್ಲಿ ಹೇಳಿದರು. 'ರೀ ಸಾವಿರಾರು ವರ್ಷ ಸಮಾಜದ ಗಂಜಳ ವರೆಸಿದ್ದಾರೆ ಈ ಜನ. ಸತ್ತ ದನಗಳನ್ನು ಎಳೆದೊಯ್ದು ನಿಮ್ಮ ಪಾಯಖಾನೆಯನ್ನೂ ತಲೆ ಮೇಲೆ ಎತ್ತಿ ಒಯ್ದಿದ್ದಾರೆ'.

ನನಗೆ ಮುಂದೇನೂ ಕಾಣಿಸಲೇ ಇಲ್ಲ. ಕಣ್ಣಿನಲ್ಲಿ ನೀರು ಮಡುಗಟ್ಟಿತ್ತು. ಎಷ್ಟೇ ನಿಯಂತ್ರಿಸಬೇಕೆಂದರೂ ಆಗಲಿಲ್ಲ. ಕಣ್ಣೀರ ಹನಿ ನಾನು ತಂದಿದ್ದ ಫೈಲಿನ ಮೇಲೆ ಟಪ್ಪೆಂದು ಬಿತ್ತು.

ಮೇಲೆ ನಿಂತಿದ್ದ ನಾಯಕರುಗಳ ಸ್ಥಿತಿಯೂ ನನ್ನಷ್ಟೇ ದಾರುಣವಾಗಿತ್ತು. ಸಮಾಧಾನ ನಿರೀಕ್ಷಿಸಿ ಬಂದಿದ್ದ ಈ ನಾಯಕ ವರ್ಗ, ಪಟೇಲರ ರಾಜಕೀಯ ಸಿದ್ಧಾಂತದ ಭೋರ್ಗರೆತದ ಮುಂದೆ ತತ್ತರಿಸಿತ್ತು. ಹೀಗೆ ಬಂದಿದ್ದ ನಿಯೋಗದಲ್ಲಿ ಓರ್ವರು ಧರ್ಮ ಗುರುಗಳೂ ಇದ್ದಂತೆ ನನಗೆ ನೆನಪು. ನಾನಂತೂ ಈ ಮಹನೀಯರನ್ನು ಎಂದೆಂದಿಗೂ ದೂಷಿಸುವುದಿಲ್ಲ. ಬದಲಾಗಿ ಇವರನ್ನು ಸ್ಮರಿಸುತ್ತೇನೆ. ಇವರಿಂದಾಗಿ ನನಗೆ ಪಟೇಲರ ಜೀವನ ದರ್ಶನ ದೊರೆತಿತ್ತು.

**–ರಮೇಶ್ ಜಿಗಜಿಣಗಿ** ('ಬಂಗಾರದ ಮನಸ್ಸು– ಧೀಮಂತ ವ್ಯಕ್ತಿತ್ವ' ಲೇಖನದಲ್ಲಿ)

'ಮುತ್ಸದ್ದಿ ಪಟೇಲ್' ಪುಸ್ತಕದಿಂದ (ಸಂಪಾದಕರು– ಪ.ರಾ.ಶ್ರೀನಿವಾಸ್)

## ಕೇಳಿದ್ದು... ನೋಡಿದ್ದು...

## ಓದುಗರ ಮತ



### ಇರಲಿ ಎಚ್ಚರ...

ನಾನು ಏಳೆಂಟು ಚುನಾವಣೆಗಳಲ್ಲಿ ಮತ ಚಲಾಯಿಸಿದ್ದೇನೆ. ರಾಜ್ಯವು ಹಿಂದೆ ಎದುರಿಸಿರುವ, ಪ್ರಸ್ತುತ ಎದುರಿಸುತ್ತಿರುವ ಮತ್ತು ಮುಂದೆಯೂ ಎದುರಿಸಬಹುದಾದ ಜ್ವಲಂತ ಸಮಸ್ಯೆಗಳಾದ ಕುಡಿಯುವ ನೀರು, ಉತ್ತಮ ಗುಣಮಟ್ಟದ ಶಿಕ್ಷಣ, ನೀರಾವರಿ ಯೋಜನೆಗಳು, ರಸ್ತೆ ಅಭಿವೃದ್ಧಿಯಂತಹ ವಿಷಯಗಳ ಬಗ್ಗೆ ಗೆದ್ದ ಅಭ್ಯರ್ಥಿಗಳು ಮಾತನಾಡುವುದೇ ಇಲ್ಲ. ಎಲ್ಲ ವರ್ಗದ ಜನರೂ ಒಂದೇ ಎಂದು ಭಾವಿಸಿ ಅವರ ಅಭಿವೃದ್ಧಿಗಾಗಿ ಶ್ರಮಿಸುವ ಮಾತುಗಳೇ ಅವರಿಂದ ಬರುತ್ತಿಲ್ಲ. ಇಂತಹವರಿಂದ ಏನು ನಿರೀಕ್ಷಿಸಲು ಸಾಧ್ಯ?

ಇಲ್ಲಿ ಮತದಾರರಾದ ನಾವು ಮೊದಲು ಬದಲಾಗಬೇಕು. ನಿರ್ದಿಷ್ಟ ಗುರಿಗಳನ್ನು ಇಟ್ಟುಕೊಂಡು ಸಮಾಜದ ಸೇವೆಗಾಗಿಯೇ ರಾಜಕಾರಣಕ್ಕೆ ಬಂದಿರುತ್ತೇನೆ ಎಂದು ಪ್ರಮಾಣ ಮಾಡುವವರು ನಮ್ಮ ಆಯ್ಕೆಯಾಗಬೇಕು. ಜಾತಿವಾರು ಆಡಳಿತಕ್ಕೆ ಜೋತು ಬೀಳದೆ, ಉಚಿತ ಮತ್ತು ಮನ್ನಾ ಭಾಗ್ಯಗಳನ್ನು ಹೋಗಲಾಡಿಸುವ ರಾಜಕಾರಣಿಗಳ ಅವಶ್ಯಕತೆ ಈಗ ಹೆಚ್ಚಾಗಿದೆ. ರಾಜ್ಯದ ರಾಜಕಾರಣದಲ್ಲಿ ಹೊಸ ಮುಖಗಳು ಕಂಡುಬರದೇ ಇರುವುದು ಬೇಸರದ ಸಂಗತಿ. ಹಲವು ಬಾರಿ ಗೆದ್ದವರನ್ನೇ ನಾವು ಇನ್ನೂ ಆರಿಸಿ ಕಳುಹಿಸುತ್ತಿರುವುದು ವಿಪರ್ಯಾಸವೇ ಸರಿ.

**–ರಾಮಪ್ಪ ಗುಡಿಗೇರಿ,** ಕೊಪ್ಪಳ

'ಪ್ರಜಾ ಮತ'ದಲ್ಲಿ ಪ್ರಕಟವಾಗುವ ಲೇಖನ, ವಿಶ್ಲೇಷಣೆ, ಸಂದರ್ಶನ, ವಿಶೇಷ ವರದಿಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು election@prajavani.co.in ಅಥವಾ ವಾಟ್ಸ್ ಆ್ಯಪ್ ಸಂಖ್ಯೆ *9513322930*ಗೆ ಕಳುಹಿಸಿ.

ತಾಜಾ ಚುನಾವಣಾ ಸುದ್ದಿಗಳಿಗಾಗಿ ನೋಡಿ elections.prajavani.net

## ಬೆಂಗಳೂರು ನಗರ ಜಿಲ್ಲೆಯ (ಬಿಬಿಎಂಪಿ ವ್ಯಾಪ್ತಿ) ಶಾಸಕರ ಪಕ್ಷವಾರು ಸಾಧನೆಯ ನೋಟ (10 ಅಂಕಗಳಲ್ಲಿ)




‘ದಕ್ಷ್’ ಮತ್ತು ‘ಪ್ರಜಾವಾಣಿ’ ಸಮೀಕ್ಷೆಯಲ್ಲಿ ರಾಜಧಾನಿ ಶಾಸಕರ ಕಾರ್ಯಕ್ಷಮತೆ ಒರೆಗೆ • ಎಂಟಕ್ಕಿಂತ ಹೆಚ್ಚು ಅಂಕ ಯಾವ ಪಕ್ಷದವರಿಗೂ ಇಲ್ಲ

# ‘ಬ್ರ್ಯಾಂಡ್ ಬೆಂಗಳೂರು’: ಕೊಡುಗೆ ಕೊಟ್ಟವರು ಯಾರು?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶ-ವಿದೇಶಗಳ ಮಾಹಿತಿ ತಂತ್ರಜ್ಞರನ್ನು, ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುತ್ತಾ ಭಾರತದ ಸಿಲಿಕಾನ್ ಸಿಟಿ, ನಿವೃತ್ತರ ಪಾಲಿನ ಸ್ವರ್ಗ ಎಂದು ಹೆಸರಾಗಿದ್ದ ರಾಜಧಾನಿಯ ಬೆಂಗಳೂರಿನ ‘ಬ್ರ್ಯಾಂಡ್’ ಇತ್ತೀಚಿನ ವರ್ಷಗಳಲ್ಲಿ ಕಳೆಗುಂದಿದೆ ಎಂಬ ಟೀಕೆಗಳಿವೆ.

ಕಾಂಗ್ರೆಸ್, ಬಿಜೆಪಿ ನಾಯಕರು ಪರಸ್ಪರ ದೂರುತ್ತಾ ತಮ್ಮದೇನೂ ತಪ್ಪಿಲ್ಲವೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಆಳ್ವಿಕೆ ಆರಂಭವಾದ ಮೇಲೆ ‘ಬೆಂಗಳೂರಿನ ಬ್ರ್ಯಾಂಡ್’ಗೆ ಧಕ್ಕೆ ಬಂದಿದೆ. ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಗೂಂಡಾಗಿರಿ ಮಿತಿ ಮೀರಿದೆ ಎಂದು ಆಪಾದಿಸುತ್ತಿರುವ ಬಿಜೆಪಿ ನಾಯಕರು, ‘ಬೆಂಗಳೂರು ರಕ್ಷಿಸಿ’ ಹೆಸರಿನಲ್ಲಿ ಪಾದಯಾತ್ರೆ ನಡೆಸಿದ್ದಾರೆ.

ಬೆಂಗಳೂರು ಹಾಳಾಗಲು ಬಿಜೆಪಿಯೇ ಕಾರಣ ಎಂದು ಕಾಂಗ್ರೆಸ್ ಪ್ರಮುಖರು ದೂರುತ್ತಿದ್ದಾರೆ. ‘ರಾಜಧಾನಿಯ ಬ್ರ್ಯಾಂಡ್ ಉಳಿಯ ಬೇಕಾದರೆ ಬಿಜೆಪಿಯವರಿಂದ ಬೆಂಗಳೂರನ್ನು ರಕ್ಷಿಸಬೇಕಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸುತ್ತಿದ್ದಾರೆ.

**‘ದಕ್ಷ್’** ಸಂಸ್ಥೆ **‘ಪ್ರಜಾವಾಣಿ’** ಜತೆ ಕೈಜೋಡಿಸಿ ನಡೆಸಿದ ಸಮೀಕ್ಷೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರ ಧೋರಣೆ, ವರ್ತನೆ ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿತ್ತು. ಸಮೀಕ್ಷೆಯಲ್ಲಿ ಪಡೆದ ದತ್ತಾಂಶಗಳನ್ನು ಆಧರಿಸಿ ಶಾಸಕರು ಹಾಗೂ ಮೂರು ಪಕ್ಷಗಳು ಪಡೆದ ಅಂಕವನ್ನು ಲೆಕ್ಕ ಹಾಕಲಾಗಿದೆ.

‘ಬ್ರ್ಯಾಂಡ್ ಬೆಂಗಳೂರು’ ಉಳಿಸಿಕೊಳ್ಳಲು ವಿವಿಧ ಪಕ್ಷಗಳ ಶಾಸಕರ ಕೊಡುಗೆ ಏನು? ಯಾವ ಪಕ್ಷದ ಶಾಸಕರು ಎಷ್ಟು ಕೊಡುಗೆ ಕೊಟ್ಟಿದ್ದಾರೆ ಎಂಬ ವಿಶ್ಲೇಷಣೆ ಇಲ್ಲಿದೆ.

### ಗರಿಷ್ಠ–ಕನಿಷ್ಠ ಅಂಕ ಪಡೆದವರು (10ರಲ್ಲಿ)

| ಹೆಸರು | ಪಕ್ಷ | ಕ್ಷೇತ್ರ | ಅಂಕ |
|---|---|---|---|
| ಎಸ್.ಟಿ. ಸೋಮಶೇಖರ್ | ಕಾಂಗ್ರೆಸ್ | ಯಶವಂತಪುರ | 7.97 |
| ಕೆ.ಜೆ. ಜಾರ್ಜ್ | ಕಾಂಗ್ರೆಸ್ | ಸರ್ವಜ್ಞ ನಗರ | 7.90 |
| ಬಿ.ಎನ್.ವಿಜಯಕುಮಾರ್ | ಬಿಜೆಪಿ | ಜಯನಗರ | 7.85 |
| ಪ್ರಿಯಕೃಷ್ಣ | ಕಾಂಗ್ರೆಸ್ | ಗೋವಿಂದರಾಜನಗರ | 5.29 |
| ರಾಮಲಿಂಗಾರೆಡ್ಡಿ | ಕಾಂಗ್ರೆಸ್ | ಬಿಟಿಎಂ ಲೇಔಟ್ | 5.70 |
| ಕೃಷ್ಣ ಬೈರೇಗೌಡ | ಕಾಂಗ್ರೆಸ್ | ಬ್ಯಾಟರಾಯನಪುರ | 5.77 |

## ಏಳಕ್ಕೇ ಕೊನೆ!

ಜನರಿಗೆ ನೇರವಾಗಿ ಸಂಬಂಧಪಡುವ ವಿದ್ಯುತ್, ರಸ್ತೆ, ನೀರು, ಸಂಚಾರ ನಿರ್ವಹಣೆ, ಶಿಕ್ಷಣ, ಆರೋಗ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಬೆಂಗಳೂರಿನ ಶಾಸಕರ ಒಟ್ಟಾರೆ ಸಾಧನೆ ಗರಿಷ್ಠ 7 ಅನ್ನು ತಲುಪಿದೆ. ಆದರೆ, 10ಕ್ಕೆ 10 ಅಂಕವನ್ನು ಯಾರೊಬ್ಬರೂ ಪಡೆದಿಲ್ಲ.

ಸಾರ್ವಜನಿಕ ಭೂಮಿ, ಕೆರೆ ಅಂಗಳ ಸಂರಕ್ಷಣೆ ವಿಷಯದಲ್ಲಿ ಶಾಸಕರ ಪಾತ್ರ ಹೇಗಿದೆ ಎಂಬ ಪ್ರಶ್ನೆಗೆ ಸಿಕ್ಕಿದ ಸರಾಸರಿ ಅಂಕ 6.9 ಮಾತ್ರ. ಕೆರೆಗಳ ಪುನರುಜ್ಜೀವನಕ್ಕಾಗಿ ಎಲ್ಲ ಕ್ರಮ ಕೈಗೊಂಡಿದ್ದೇವೆ ಎಂದು ಶಾಸಕರು ಪ್ರತಿಪಾದಿಸುತ್ತಾರೆ. ಆದರೆ, ಈ ವಿಷಯದಲ್ಲಿ ಪಡೆದಿರುವ ಅಂಕ ಕೇವಲ 6.7. ರಾಜಾಕಾಲುವೆ ಮರು ನಿರ್ಮಾಣ ಹಾಗೂ ಬೆಂಗಳೂರಿನ ದೊಡ್ಡ ಸಮಸ್ಯೆಯಾಗಿರುವ ಘನತ್ಯಾಜ್ಯ ನಿರ್ವಹಣೆ ಕುರಿತು ಶಾಸಕರು ಎಷ್ಟು ಕಾಳಜಿ ತೋರಿದ್ದಾರೆ ಎಂಬ ಪ್ರಶ್ನೆಗೂ ಸಮಾಧಾನಕರ ಉತ್ತರ ಸಿಕ್ಕಿಲ್ಲ. ಶಾಸಕರು ಈ ಎರಡು ವಿಷಯಗಳಲ್ಲಿ ಪಡೆದಿರುವ ಅಂಕ 6.8.

ಮಹಿಳೆಯರ ಸುರಕ್ಷೆ ಹಾಗೂ ಭಯೋತ್ಪಾದನೆ ನಿಗ್ರಹದ ವಿಷಯದಲ್ಲಿ ಶಾಸಕರು ಎಷ್ಟು ಆಸ್ಥೆ ವಹಿಸಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಕ್ರಮವಾಗಿ 6.6 ಹಾಗೂ 6.4 ಅಂಕ ಮಾತ್ರ ಚುನಾಯಿತ ಪ್ರತಿನಿಧಿಗಳಿಗೆ ಸಿಕ್ಕಿದೆ.

**ಎಂಟಕ್ಕೇರದ ಅಂಕ:** ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಸಮೀಕ್ಷೆಯಲ್ಲಿ ಶಾಸಕರು 10 ಅಂಕಗಳಿಗೆ ಗರಿಷ್ಠ 9.08 ಅಂಕ ಪಡೆದಿದ್ದರು. ಆದರೆ, ಬೆಂಗಳೂರಿನ ಯಾವುದೇ ಶಾಸಕರು ವೈಯಕ್ತಿಕವಾಗಿ ಇಷ್ಟು ಪ್ರಮಾಣದ ಅಂಕ ಪಡೆಯಲು ಸಾಧ್ಯವಾಗಿಲ್ಲ.

**ಪಕ್ಷವಾರು ಸಾಧನೆಯೇನು?:** ಪಕ್ಷವಾರು ಸಾಧನೆಯಲ್ಲಿ ಕೂಡ ಕಾಂಗ್ರೆಸ್ ಮತ್ತು ಬಿಜೆಪಿ ಬಹುತೇಕ ಸಮಾನ ಸಾಧನೆ ತೋರಿವೆ.

ಜನರಿಗೆ ನೇರವಾಗಿ ಸ್ಪಂದಿಸುವ ವಿಷಯಗಳಲ್ಲಿ ಕಾಂಗ್ರೆಸ್‌ಗಿಂತ ಬಿಜೆಪಿಯೇ ಮುಂದಿದೆಯಾದರೂ ಪಡೆದ ಅಂಕಗಳಲ್ಲಿ ಕೇವಲ ಎಳೆಯಷ್ಟು ಅಂತರವಿದೆ. ಆದರೆ, ಗರಿಷ್ಠ ಏಳರ ಅಂಕಿಯನ್ನು ಎರಡೂ ಪಕ್ಷಗಳು ದಾಟಿಲ್ಲ. ಹಾಗೆ ನೋಡಿದರೆ, ಮೂರು ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿರುವ ಜೆಡಿಎಸ್ ಶಾಸಕರೇ ಹೆಚ್ಚಿನ ಅಂಕ ಪಡೆದಿದ್ದಾರೆ.

ಪರಿಸರ ಸಂರಕ್ಷಣೆ, ಘನತ್ಯಾಜ್ಯ ನಿರ್ವಹಣೆ, ಕೆರೆಗಳ ಪುನರುಜ್ಜೀವನ, ಸಾರ್ವಜನಿಕ ಭೂಮಿ ಸಂರಕ್ಷಣೆಯಲ್ಲಿ ಕಾಂಗ್ರೆಸ್ ಸರಿಸುಮಾರು 6.5 ಅಂಕ ಪಡೆದಿದ್ದರೆ, ಬಿಜೆಪಿ 6.8 ಅಂಕ ಗಳಿಸಿದೆ.

ಬೆಂಗಳೂರಿಗೆ ಬರುವವರಿಗೆ ಹಾಗೂ ಇಲ್ಲಿನ ನಿವಾಸಿಗಳಿಗೆ ದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವ ಸಂಚಾರ ದಟ್ಟಣೆ ನಿವಾರಣೆಯಲ್ಲಿ ಎರಡೂ ಪಕ್ಷಗಳು ಸಮಾನ ಅಂಕ ಪಡೆದಿವೆ.




## ಭಯೋತ್ಪಾದನೆ ನಿಗ್ರಹ: ಇಲ್ಲ ಶಹಬ್ಬಾಸ್‌ಗಿರಿ



ಭಯೋತ್ಪಾದನೆ ನಿಗ್ರಹ ವಿಷಯದ ಪಕ್ಷವಾರು ಅಂಕ ಗಳಿಕೆಯಲ್ಲಿ ಬಿಜೆಪಿ ಹಿಂದೆ ಬಿದ್ದಿದೆ. ಭಯೋತ್ಪಾದಕರಿಗೆ ಕಾಂಗ್ರೆಸ್ ರಕ್ಷಣೆ ನೀಡುತ್ತಿದೆ, ಕಾಂಗ್ರೆಸ್ ಆಳ್ವಿಕೆಯಲ್ಲಿ ಉಗ್ರಗಾಮಿಗಳ ಉಪಟಳ ಜಾಸ್ತಿಯಾಗಿದೆ ಎಂದು ಬಿಜೆಪಿ ನಾಯಕರು ಟೀಕಿಸುವುದು ಸಾಮಾನ್ಯ. ಈ ಕುರಿತು ಜನರ ಅಭಿಪ್ರಾಯ ಮಾತ್ರ ಭಿನ್ನವಾಗಿದೆ.

ಈ ಕುರಿತ ಪ್ರಶ್ನೆಗೆ ಮತದಾರರು ಬಿಜೆಪಿಗೆ 6.32 ಅಂಕ ಕೊಟ್ಟಿದ್ದರೆ, ಕಾಂಗ್ರೆಸ್ 6.43 ಅಂಕ ನೀಡಿದ್ದಾರೆ. ಇನ್ನು ಮಹಿಳಾ ಸುರಕ್ಷೆಯ ವಿಷಯದಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿದ್ದು, ಬಿಜೆಪಿ ಮುಂದಿದೆ. ಕಾಂಗ್ರೆಸ್‌ಗೆ 6.46 ಅಂಕ, ಬಿಜೆಪಿಗೆ 6.52 ಅಂಕ ಸಿಕ್ಕಿದೆ. ಈ ಎರಡೂ ವಿಷಯಗಳಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಜನರು ಶಹಬ್ಬಾಸ್‌ಗಿರಿ ನೀಡಿಲ್ಲ.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಶಾಸಕರು ಎಷ್ಟರ ಮಟ್ಟಿಗೆ ಕೊಡುಗೆ ನೀಡಿದ್ದಾರೆ ಎಂಬ ಪ್ರಶ್ನೆಗೆ ಕಾಂಗ್ರೆಸ್ ಮತ್ತು ಬಿಜೆಪಿ ತಲಾ 6.8 ಅಂಕವನ್ನು ಪಡೆದಿವೆ.

### ಎಸ್.ಟಿ. ಸೋಮಶೇಖರ್ — ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಯಶವಂತಪುರ



7.97/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.50 |
| ಕುಡಿಯುವ ನೀರು | 8.31 |
| ವಿದ್ಯುತ್ | 8.11 |
| ರಸ್ತೆ | 8.06 |
| ಶಾಸಕರು ಕೈಗೆ ಸಿಗುತ್ತಾರಾ? | 7.17 |

### ಮುನಿರತ್ನ — ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ರಾಜರಾಜೇಶ್ವರಿ ನಗರ



7.58/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.11 |
| ಕುಡಿಯುವ ನೀರು | 8.37 |
| ವಿದ್ಯುತ್ | 8.07 |
| ರಸ್ತೆ | 7.78 |
| ಶಾಸಕರು ಕೈಗೆ ಸಿಗುತ್ತಾರಾ? | 7.48 |

### ಎನ್.ಎ. ಹ್ಯಾರಿಸ್ — ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಶಾಂತಿನಗರ



6.95/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.06 |
| ಕುಡಿಯುವ ನೀರು | 7.01 |
| ವಿದ್ಯುತ್ | 6.95 |
| ರಸ್ತೆ | 7.18 |
| ಶಾಸಕರು ಕೈಗೆ ಸಿಗುತ್ತಾರಾ? | 6.78 |

### ಆರ್.ವಿ. ದೇವರಾಜ್ — ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಚಿಕ್ಕಪೇಟೆ



6.84/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.86 |
| ಕುಡಿಯುವ ನೀರು | 6.79 |
| ವಿದ್ಯುತ್ | 7.36 |
| ರಸ್ತೆ | 6.60 |
| ಶಾಸಕರು ಕೈಗೆ ಸಿಗುತ್ತಾರಾ? | 6.79 |

### ಬಿ.ಎ. ಬಸವರಾಜು (ಬೈರತಿ) — ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಕೆ.ಆರ್. ಪುರ



5.98/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.11 |
| ಕುಡಿಯುವ ನೀರು | 6.61 |
| ವಿದ್ಯುತ್ | 6.22 |
| ರಸ್ತೆ | 7.17 |
| ಶಾಸಕರು ಕೈಗೆ ಸಿಗುತ್ತಾರಾ? | 6.89 |

### ಬಿ. ಶಿವಣ್ಣ — ಕಾಂಗ್ರೆಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಆನೇಕಲ್



5.86/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.56 |
| ಕುಡಿಯುವ ನೀರು | 6.61 |
| ವಿದ್ಯುತ್ | 6.61 |
| ರಸ್ತೆ | 6.56 |
| ಶಾಸಕರು ಕೈಗೆ ಸಿಗುತ್ತಾರಾ? | 5.61 |

### ಬಿ.ಎನ್. ವಿಜಯಕುಮಾರ್ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಜಯನಗರ



7.85/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.97 |
| ಕುಡಿಯುವ ನೀರು | 7.80 |
| ವಿದ್ಯುತ್ | 8.14 |
| ರಸ್ತೆ | 7.46 |
| ಶಾಸಕರು ಕೈಗೆ ಸಿಗುತ್ತಾರಾ? | 7.36 |

### ಎಸ್. ಮುನಿರಾಜು — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ದಾಸರಹಳ್ಳಿ



6.77/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.91 |
| ಕುಡಿಯುವ ನೀರು | 6.90 |
| ವಿದ್ಯುತ್ | 6.97 |
| ರಸ್ತೆ | 7.08 |
| ಶಾಸಕರು ಕೈಗೆ ಸಿಗುತ್ತಾರಾ? | 6.01 |

### ಎಸ್.ಆರ್. ವಿಶ್ವನಾಥ್ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಯಲಹಂಕ



7.67/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.76 |
| ಕುಡಿಯುವ ನೀರು | 7.74 |
| ವಿದ್ಯುತ್ | 7.59 |
| ರಸ್ತೆ | 7.86 |
| ಶಾಸಕರು ಕೈಗೆ ಸಿಗುತ್ತಾರಾ? | 7.06 |

### ವೈ.ಎ. ನಾರಾಯಣಸ್ವಾಮಿ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಹೆಬ್ಬಾಳ



7.19/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.17 |
| ಕುಡಿಯುವ ನೀರು | 7.67 |
| ವಿದ್ಯುತ್ | 7.36 |
| ರಸ್ತೆ | 7.48 |
| ಶಾಸಕರು ಕೈಗೆ ಸಿಗುತ್ತಾರಾ? | 7.04 |

### ಎಲ್.ಎ. ರವಿಸುಬ್ರಹ್ಮಣ್ಯ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಬಸವನಗುಡಿ



7.13/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.83 |
| ಕುಡಿಯುವ ನೀರು | 7.22 |
| ವಿದ್ಯುತ್ | 7.17 |
| ರಸ್ತೆ | 7.00 |
| ಶಾಸಕರು ಕೈಗೆ ಸಿಗುತ್ತಾರಾ? | 7.50 |

### ಎಂ. ಕೃಷ್ಣಪ್ಪ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಬೆಂಗಳೂರು ದಕ್ಷಿಣ



7.12/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.39 |
| ಕುಡಿಯುವ ನೀರು | 7.39 |
| ವಿದ್ಯುತ್ | 7.39 |
| ರಸ್ತೆ | 6.78 |
| ಶಾಸಕರು ಕೈಗೆ ಸಿಗುತ್ತಾರಾ? | 7.28 |

### ಡಾ.ಸಿ.ಎನ್. ಅಶ್ವತ್ಥನಾರಾಯಣ್ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಮಲ್ಲೇಶ್ವರ



6.97/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.15 |
| ಕುಡಿಯುವ ನೀರು | 7.27 |
| ವಿದ್ಯುತ್ | 6.85 |
| ರಸ್ತೆ | 6.85 |
| ಶಾಸಕರು ಕೈಗೆ ಸಿಗುತ್ತಾರಾ? | 6.79 |

### ಅರವಿಂದ ಲಿಂಬಾವಳಿ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಮಹದೇವಪುರ



6.02/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.44 |
| ಕುಡಿಯುವ ನೀರು | 6.33 |
| ವಿದ್ಯುತ್ | 6.33 |
| ರಸ್ತೆ | 6.78 |
| ಶಾಸಕರು ಕೈಗೆ ಸಿಗುತ್ತಾರಾ? | 6.56 |

### ಎಂ. ಸತೀಶ್ ರೆಡ್ಡಿ — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಬೊಮ್ಮನಹಳ್ಳಿ



5.97/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.00 |
| ಕುಡಿಯುವ ನೀರು | 6.00 |
| ವಿದ್ಯುತ್ | 6.61 |
| ರಸ್ತೆ | 6.61 |
| ಶಾಸಕರು ಕೈಗೆ ಸಿಗುತ್ತಾರಾ? | 6.11 |

### ಎಸ್. ರಘು — ಬಿಜೆಪಿ
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಸಿ.ವಿ. ರಾಮನ್ ನಗರ



5.81/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.61 |
| ಕುಡಿಯುವ ನೀರು | 6.67 |
| ವಿದ್ಯುತ್ | 6.67 |
| ರಸ್ತೆ | 6.61 |
| ಶಾಸಕರು ಕೈಗೆ ಸಿಗುತ್ತಾರಾ? | 5.00 |

## ಅಂಕ ‘ಗಣಿತ’

‘ದಕ್ಷ್’ ಹಾಗೂ ‘ಪ್ರಜಾವಾಣಿ’ ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಢೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಎಂದು ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

### ಕೆ. ಗೋಪಾಲಯ್ಯ — ಜೆಡಿಎಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಮಹಾಲಕ್ಷ್ಮಿ ಲೇಔಟ್



7.29/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.60 |
| ಕುಡಿಯುವ ನೀರು | 7.49 |
| ವಿದ್ಯುತ್ | 7.78 |
| ರಸ್ತೆ | 7.49 |
| ಶಾಸಕರು ಕೈಗೆ ಸಿಗುತ್ತಾರಾ? | 7.54 |

### ಆರ್. ಅಖಂಡ ಶ್ರೀನಿವಾಸಮೂರ್ತಿ — ಜೆಡಿಎಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಪುಲಕೇಶಿನಗರ



7.19/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.08 |
| ಕುಡಿಯುವ ನೀರು | 7.07 |
| ವಿದ್ಯುತ್ | 7.30 |
| ರಸ್ತೆ | 6.95 |
| ಶಾಸಕರು ಕೈಗೆ ಸಿಗುತ್ತಾರಾ? | 6.84 |

### ಜಮೀರ್ ಅಹಮದ್ ಖಾನ್ — ಜೆಡಿಎಸ್
ಜಿಲ್ಲೆ: ಬೆಂಗಳೂರು ನಗರ
ಕ್ಷೇತ್ರ: ಚಾಮರಾಜಪೇಟೆ



6.67/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.67 |
| ಕುಡಿಯುವ ನೀರು | 6.67 |
| ವಿದ್ಯುತ್ | 6.67 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |